TIGHT BINDING BOOK

UNIVERSAL
LIBRARY
OU_200576
LIBRARY
UNIVERSAL

# University of Mysore

Oriental Library Publications

KANNADA SERIES No. 13

ಸೋಮನಾಥ ಕವಿ ವಿರಚಿತವಾದ

# ಅಕ್ರೂರಚರಿತ್ರೆ

# AKRURA CHERITRE

BY

## SOMANATHA

EDITED BY


DR. R. SHAMA SASTRY, B.A., PH.D., M.R.A.S.,

*Curator, Government Oriental Library, Mysore, Director of Archæological Researches in Mysore, Periodical Lecturer to the Post-Graduates' Classes of the Calcutta University, and B.B.R.A.S Campbell Memorial Medalist.*



MYSORE

PRINTED AT THE GOVERNMENT BRANCH PRESS

1923



(*All Rights Reserved*)

# ಉಪೋದ್ಘಾತವು.

---

ರಾಮಕೃಷ್ಣರು ಅವತರಿಸಿದುದನ್ನು ಮೊದಲ್ಗೊಂಡು ಶ್ರೀಕೃಷ್ಣನು ಕಂಸನನ್ನು ಕೊಂದು ವಸುದೇವದೇವಕಿಯರ ಬಂಧನವನ್ನು ಬಿಡಿಸಿ ಉಗ್ರಸೇನನಿಗೆ ರಾಜ್ಯವನ್ನು ಕೊಟ್ಟು ಅಕ್ರೂರನ ಇಷ್ಟವನ್ನು ಸಲಿಸಿ ಗೋಕುಲಕ್ಕೆ ಪ್ರಯಾಣಮಾಡಿದನು.—ಎಂಬುದರವರೆಗೆ ಭಾಗವತದ ಕಥೆಯನ್ನು ವರ್ಣಿಸಿರುವ ಅಕ್ರೂರಚರಿತ್ರೆಯೆಂಬೀ ಗ್ರಂಥವು ಶೃಂಗಾರಾದಿ ನವರಸಗಳಿಂದ ಉಲ್ಲಸಿತವಾಗಿಯೂ ನಾನಾ ವಿಧಗಳಾದ ಅನುಪ್ರಾಸೋಪಮಾದಿ ಶಬ್ದಾರ್ಥಾಲಂಕಾರಗಳಿಂದ ಶೋಭಿತವಾಗಿಯೂ ಮಹಾಕಾವ್ಯಕ್ಕೆ ಬೇಕಾದ ಕಾವ್ಯಸಾಮಗ್ರಿಗಳಿಂದ ಸಮಗ್ರವಾಗಿಯೂ ಇರುತ್ತದೆ.

ಈ ಮಹಾಕಾವ್ಯವನ್ನು ಕವಿಯು ಸಮಸ್ತ ಜನರೂ ಪ್ರೀತಿಯಿಂದ ಓದುವುದಕ್ಕೂ ಕೇಳುವುದಕ್ಕೂ ಹರಿ ಹರಿಭಕ್ತ ಕಥಾಶ್ರವಣವನ್ನು ಮಾಡಿ ಹರಿಭಕ್ತಿಯನ್ನು ಹೆಚ್ಚಿಸಿಕೊಂಡು ಸದ್ಗತಿಯನ್ನು ಪಡೆವುದಕ್ಕೂ ಅನುಕೂಲವಾಗುವಹಾಗೆ ಸುಲಭವಾದ ಹೊಸಗನ್ನಡದಲ್ಲಿ ಸುಗೇಯಗಳಾದ ಭಾಮಿನೀಷಟ್ಪದಿಗಳಿಂದ ಹರಿಚರಿತ್ರೆಯೊಡನೆ ಹರಿಭಕ್ತನಾದ ಅಕ್ರೂರನ ಚರಿತ್ರೆಯನ್ನು ಪ್ರತಿಪಾದಿಸುವಂತೆ ರಚಿಸಿರುತ್ತಾನೆ.

ಇದರಲ್ಲಿ ಷಟ್ಪದಿಕಾವ್ಯಗಳ ಸರಣಿಗೆ ಅನುಸಾರಿಯಾದ ಶಬ್ದಸಾಧುತ್ವವೂ ಅರ್ಥಗಾಂಭೀರ್ಯವೂ ಪ್ರಶಸ್ತವಾಗಿದೆ. ರಚನೆಯು ಕಥಾ ಭಾಗದಲ್ಲಿ ಸುಲಭವಾಗಿಯೂ ವರ್ಣನಾಭಾಗದಲ್ಲಿ ಪ್ರೌಢವಾಗಿಯೂ ಇದೆ. ಕವಿಯು ವರ್ಣನಾಭಾಗದಲ್ಲಿ ತನ್ನ ಕವಿತಾಚಾತುರಿಯನ್ನು ಚೆನ್ನಾಗಿ ತೋರಿಸಿದಾನೆ. ಈಗಿರುವ ಷಟ್ಪದಿ ಕಾವ್ಯಗಳಲ್ಲಿ ಇದೊಂದುತ್ತಮವಾದ ಕಾವ್ಯವೆಂದು ಹೇಳಬಹುದು.

ಕವಿಯು ಗ್ರಂಥದ ಆದಿಯಲ್ಲಿ ಅಕ್ರೂರಚರಿತ್ರೆಯೆಂಬ ಹೆಸರಿಗೆ ಆನುಗುಣ್ಯವನ್ನು ತೋರಿಸುವ ಅಕ್ರೂರನ ಫಲಭಾಗಿತ್ವವನ್ನು ತಿಳಿಸುತ್ತಾ ಗ್ರಂಥಪ್ರತಿಪಾದ್ಯಾರ್ಥವನ್ನು ಸೂಚಿಸಿ ಮಂಗಲಾರ್ಥವಾಗಿ ಲಕ್ಷ್ಮೀಪತಿಯಾದ ನಾರಾಯಣನನ್ನೂ ಅನಂತರದಲ್ಲಿ ಶಂಕರನನ್ನೂ ಆಮೇಲೆ ಗಣನಾಥನನ್ನೂ ಪ್ರಾರ್ಥಿಸಿ ಬಳಿಕ ತನಗೆ ರಾಮಣೀಯಕಮತಿ, ನಯಸುಖ, ಕಾಮಿತಾರ್ಥ, ಜ್ಞಾನ, ಸರಸೋದ್ಧಾಮ ಚತುರೋಕ್ತಿಗಳನ್ನು ಕೊಡುವಂತೆ ಸರಸ್ವತೀ, ಗಜಾನನ, ಮನ್ಮಥ, ವೇದವ್ಯಾಸಮುನಿ, ಬೃಹಸ್ಪತಿಗಳನ್ನು ಪ್ರಾರ್ಥಿಸಿ ಆಮೇಲೆ " ಸೋಮನಾಥ ಕವೀಂದ್ರನು ಕುಮಾರವ್ಯಾಸನಿಗೂ ಇತರ ಕವಿತ್ವಜ್ಞಾನಿಗಳಿಗೂ ಗಮಕಿಗಳಿಗೂ ವಂದಿಸಿ ಅವರ ಸೊಬಗನ್ನೂ ರಸಭಾವಗಳನ್ನೂ ಅಲಂಕಾರಗಳನ್ನೂ ಮಧುರೋಕ್ತಿ ಕೌಶಲಗಳನ್ನೂ ಪಿಡಿದು ಅಕ್ರೂರಚರಿತ್ರೆಯನ್ನು ವಿವರಿಸಿದನು " ಎಂದು ತನ್ನ ಹೆಸರನ್ನೂ ತನ್ನ ಗ್ರಂಥದಲ್ಲಿರುವ ಕಾವ್ಯಸಾಮಗ್ರಿಗಳನ್ನೂ ಸೂಚಿಸಿ ತನ್ನ ಗ್ರಂಥದಲ್ಲಿ ಪ್ರತಿಪಾದ್ಯವಾದ ಕಥೆಯು ಕೃಷ್ಣಕಥೈಕದೇಶಭೂತವೆಂದು ಹೇಳಿ ತನ್ನ ಗ್ರಂಥದಲ್ಲಿ ತಪ್ಪುಗಳಿದ್ದರೆ ಅಭಿಜ್ಞರಾದ ಹಿರಿಯರು ತನ್ನ ಗ್ರಂಥವನ್ನು ಆದರಿಸಿ ತಿದ್ದಬೇಕೆಂದು ಸ್ವವಿನಯ ಪ್ರದರ್ಶನಪೂರ್ವಕವಾಗಿ ಹಿರಿಯರನ್ನು ಪ್ರಾರ್ಥಿಸಿ ಕಥಾರಂಭವನ್ನು ಮಾಡಿದಾನೆ.

ಕವಿಯು ತನ್ನ ಕಾಲವನ್ನಾಗಲಿ ತಾನು ಬರೆದಿರುವ ಇತರ ಗ್ರಂಥಗಳನ್ನಾಗಲಿ ಇದರಲ್ಲಿ ಸೂಚಿಸಿಲ್ಲ. ಇವನು ಹೇಳಿರುವ ಪೀಠಿಕಾ ಪ್ರಕರಣದಿಂದ ಈ ಕವಿಯ ಹೆಸರು ಸೋಮನಾಥ ಕವೀಂದ್ರನೆಂದೂ ಕನ್ನಡದ ಭಾರತವನ್ನು ಬರೆದ ಕುಮಾರ ವ್ಯಾಸನಿಗಿಂತ ನವೀನನೆಂದೂ ಭಾಗವತನಾದ ಸ್ಮಾರ್ತಬ್ರಾಹ್ಮಣನೆಂದೂ ತೋರುತ್ತದೆ. ಅರಸಿಯಕೆರೆಯ ೧೬೩ ನೆಯ ಶಾಸನದಲ್ಲಿ ಬರೆದಿರುವ ಪದ್ಯಗಳು ಸೋಮನಾಥ ಕವಿಯಿಂದ ಮಾಡಲ್ಪಟ್ಟುವೆಂದು ಅದರಿಂದಲೇ ತಿಳಿಯುತ್ತದೆ. ಆದರೆ ಆ ಪದ್ಯಗಳ ರಚನೆಗೂ ಅಕ್ರೂರಚರಿತ್ರೆಯ ಪದ್ಯಗಳ ರಚನೆಗೂ ಹೋಲಿಕೆಯಿರುವುದಿಲ್ಲ. ಆದುದರಿಂದ ಅಕ್ರೂರ ಚರಿತ್ರೆಯನ್ನು ಬರೆದ ಸೋಮನಾಥನಿಗಿಂತ ಆ ಸೋಮನಾಥನು ಬೇರೆಯೆಂದು ಹೇಳ

ಬಹುದು. ಆದರೂ ಬಂಸುವೇಳೆ ಕವಿಯು ಹಳಗನ್ನಡ ಹೊಸಗನ್ನಡಗಳೆರಡರ ಸ್ವರೂಪವನ್ನೂ ತಿಳಿದವನಾಗಿದ್ದು ಕಂದವೃತ್ತಗಳಿಂದ ಕೂಡಿರುವ ಗ್ರಂಥಗಳ ಸರಣಿಯನ್ನನುಸರಿಸಿ ಆ ಶಾಸನದ ವೃತ್ತಕಂದಗಳನ್ನು ರಚಿಸಿ ಷಟ್ಪದಿ ಕಾವ್ಯಗಳ ಸರಣಿಯನ್ನನುಸರಿಸಿ ಅಕ್ರೂರಚರಿತ್ರೆಯನ್ನು ರಚಿಸಿದ್ದಲ್ಲಿ ರಚನೆಯು ಭಿನ್ನಕ್ರಮವಾಗಿದ್ದರೂ ಕವಿಯು ಬೇರೆಯೆಂದು ಹೇಳಲಾಗುವುದಿಲ್ಲ. ಒಬ್ಬನೇ ಎರಡನ್ನೂ ಬರೆದಿರುವನು ಎಂದು ಹೇಳುವುದಕ್ಕೆ ಅವಕಾಶವಿರುತ್ತದೆ. ಹಾಗಿರುವ ಪಕ್ಷದಲ್ಲಿ ಅಕ್ರೂರಚರಿತ್ರೆಯನ್ನು ಬರೆದ ಸೋಮನಾಥ ಕವಿಯೇ ಆರಸಿಯುಕೆರೆಯು ಶಾಸನವನ್ನು ಬರೆದಿರುವನೆಂದು ಹೇಳಬಹುದು. ಆ ಶಾಸನವು ಕ್ರಿ. ಶ. ೧೧೩೪ ರಲ್ಲಿ ಹುಟ್ಟಿದುದಾದುದರಿಂದಲೂ ಕುಮಾರವ್ಯಾಸನನ್ನು ತನ್ನ ಗ್ರಂಥದಲ್ಲಿ ಸ್ಮರಿಸಿರುವ ಈ ಕವಿಯು ೧೧ ನೆಯ ಶತಮಾನದ ಕುಮಾರ ವ್ಯಾಸನಿಗಿಂತ ಈಚಿನವನಾದುದರಿಂದಲೂ ಕ್ರಿ. ಶ. ೧೧೩೪ ಕ್ಕೆ ಸರಿಯಾದ ೧೨ ನೆಯ ಶತಮಾನವೇ ಈ ಸೋಮನಾಥ ಕವಿಯ ಕಾಲವೆಂದು ಊಹಿಸಬೇಕಾಗಿರುತ್ತದೆ. ಮ॥ ರಾ॥ ನರಸಿಂಹಾಚಾರ್ಯರು ಕುಮಾರವ್ಯಾಸನನ್ನು ಕ್ರಿ. ಶ. ೧೪೩೦ ಕ್ಕೆ ಸರಿಯಾದ ೧೫ ನೆಯ ಶತಮಾನದವನೆಂದು ಊಹಿಸಿಕೊಂಡಿರುವುದರಿಂದ ಅವನಿಗಿಂತ ನವೀನನಾದ ಈ ಸೋಮನಾಥನು ಕ್ರಿ. ಶ. ೧೬೦೦ ಕ್ಕೆ ಸಮವಾದ ೧೬ ನೆಯ ಶತಮಾನದವನೆಂದು ಊಹಿಸಿ ಬರೆದಿರುವರು. ಇದನ್ನು ನಿಶ್ಚಯಪಡಿಸುವ ಸಾಧನಗಳಾವುವೂ ಈ ಗ್ರಂಥದಿಂದ ದೊರೆಯುವುದಿಲ್ಲ. ಕುಮಾರವ್ಯಾಸನು ೧೧ ನೆಯ ಶತಮಾನದವನೆಂದು ನಿಶ್ಚಯಿಸುವುದಕ್ಕೆ ಬೇಕಾದ ಕಾರಣಗಳು ಈ ಲೈಬ್ರರಿಯಲ್ಲಿ ಅಚ್ಚುಹಾಕಿಸಿರುವ ಕುಮಾರವ್ಯಾಸ ಭಾರತದ ಉದ್ಯೋಗಪರ್ವದ ಅವತರಣಿಕೆಯಲ್ಲಿ ವಿಸ್ತಾರವಾಗಿ ಬರೆಯಲ್ಪಟ್ಟಿವೆ. ಆದುದರಿಂದ ಕ್ರಿ. ಶ. ೧೨ ನೆಯ ಶತಮಾನದಲ್ಲಿದ್ದ ಸೋಮನಾಥ ಕವಿಯಿಂದ ಅಕ್ರೂರಚರಿತ್ರೆಯು ರಚಿಸಲ್ಪಟ್ಟಿತೆಂದು ತೋರುತ್ತದೆ

ಈ ಮಹಾಕಾವ್ಯವು ಎಂಟು ಸಂಧಿಗಳಿಂದ ಕೂಡಿದೆ. ಮ॥ರಾ॥ ಆರ್. ನರಸಿಂಹಾಚಾರ್ಯರು ತಮ್ಮ ಕವಿಚರಿತ್ರೆಯಲ್ಲಿ "ಅಕ್ರೂರ ಚರಿತ್ರೆ

ಯಲ್ಲಿ ೯ ಸಂಧಿಗಳೂ ೫೦೧ ಪದ್ಯಗಳೂ ಇರುವುವೆಂದು ಬರೆದಿರುತ್ತಾರೆ. ಇಂತಹ ಪ್ರತಿಯು ನಮಗೆ ದೊರೆಯಲಿಲ್ಲ. ಮ॥ ರಾ॥ ನರಸಿಂಹಾಚಾರ್ಯರ ಈ ಬರಹಕ್ಕೆ ಮದ್ರಾಸಿನಲ್ಲಿರುವ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿಯ ಪುಸ್ತಕವು ಆಧಾರವೆಂದು ಅವರ ಮುಖದಿಂದಲೇ ತಿಳಿದು ಬರಲು, ಮದ್ರಾಸ್ ಲೈಬ್ರರಿಯ ಪುಸ್ತಕದ ಕಾಪಿಯನ್ನು ತರಿಸಿ ನೋಡುವಲ್ಲಿ ಒಂಬತ್ತನೆಯ ಸಂಧಿಯೆಂದು ಬರೆಯಿಸಿ ಕಳುಹಿದ ಆ ಗ್ರಂಥವೂ ಒಂಬತ್ತನೆಯ ಸಂಧಿಯಾಗಿರಲಿಲ್ಲ. ಎಂಟನೆಯ ಸಂಧಿಯನ್ನೇ ಪುಸ್ತಕ ಭೇದದಿಂದುಂಟಾದ ಪಾಠಭೇದವನ್ನು ತಿಳಿಸುವುದಕ್ಕಾಗಿ ಎರಡಾವೃತ್ತಿ ಬರೆದು ಮೊದಲನೆಯ ಪಾಠದ ಕೊನೆಯಲ್ಲಿ ಎಂಟನೆಯ ಸಂಧಿಯು ಮುಗಿದುದೆಂದು ಹೇಳಿ ಆಮೇಲೆ ಮತ್ತೊಂದು ಪಾಠವನ್ನು ಬರೆದು ಕೊನೆಯಲ್ಲಿ ಸಂಧಿಸಂಖ್ಯೆಯನ್ನು ಹಾಕದೆ ಮುಗಿಸಿರುವ ಪುಸ್ತಕದ ಎಂಟನೆಯ ಸಂಧಿಯ ಎರಡನೆಯ ಪಾಠವೇ ಆಗಿತ್ತು. ಅಲ್ಲದೆ ಬೇರೆ ಯಾವ ಪುಸ್ತಕದಲ್ಲಿಯೂ ಒಂಬತ್ತನೆಯ ಸಂಧಿಯು ಇರುವುದಿಲ್ಲವೆಂದೂ ತಿಳಿದು ಬಂದುದು ಆದುದರಿಂದ ಕವಿಯು ಎಂಟು ಸಂಧಿಗಳಿಂದಲೇ ಗ್ರಂಥವನ್ನು ಪೂರ್ತಿಮಾಡಿರಬಹುದೆಂದು ನಿಶ್ಚಯಿಸಿ ಅಷ್ಟಕ್ಕೇ ಈ ಪುಸ್ತಕವು ಮುಗಿಸಲ್ಪಟ್ಟಿದೆ. ಮೇಲೆ ಹೇಳಿದ ಮದ್ರಾಸ್ ಲೈಬ್ರರಿಯ ಪುಸ್ತಕದಲ್ಲಿರುವ ಎಂಟನೆಯ ಸಂಧಿಯ ಎರಡನೆಯ ಪಾಠದ ಕೊನೆಯಲ್ಲಿ ೫೬ ನೆಯ ಪದ್ಯದ ಮುಂದೆ ಈ ಕೆಳಗೆ ಬರೆದಿರುವ ರೀತಿಯಲ್ಲಿ ಪಾಠವು ದೊರೆಯುತ್ತದೆ. ಇದರಲ್ಲಿ ಪದ್ಯಗಳು ಅಪೂರ್ಣವಾಗಿಯೂ ಸರಿಯಾಗಿ ಅರ್ಥವನ್ನು ತೋರಿಸದುವಾಗಿಯೂ ಇರುವುದರಿಂದ ಅವುಗಳನ್ನು ಈ ಪುಸ್ತಕದ ಸಂಧಿಪಾಠದಲ್ಲಿ ಸೇರಿಸಿಲ್ಲ. ಆದರೆ ಅವು ಗ್ರಂಥಪೂರಣವನ್ನು ಸೂಚಿಸುವುವಾದುದರಿಂದ ವಾಚಕರ ತಿಳುವಳಿಕೆಗಾಗಿ ಇಲ್ಲಿ ಬರೆಯಲ್ಪಟ್ಟವೆ. ಅವೆಂತೆಂದೊಡೆ:—

. . . . . . . . . . . . . . . . . . . . . . . . . .

ಕಾಗರುತ್ಮದ್ಧ್ವಜನ ಹೊರಗೈತಂದು ಕೈಮುಗಿದೂ ॥
ಭೋಗಶಯನ . . . . . . . . . . . . . . . . . . . . .
ನೆ ಜಯ ಜಯಯೆನುತಕ್ರೂರ ಕುಳಿತಿರ್ದ ॥ ೫೭ ॥

ಕರಸಿದನು ಹರಿ . . . . . . . . . . . . . . . . . . . .
ತ್ರಿ ನಿನಗಕ್ರೂರ . . ನನೂ ‖ ಹರುಷದಿಂದೆನ್ನಂತೆ . . . . . . .
ಕಾಣ್ಬುದುಪರವು . . . . . . . . . . . . . . . . . . .
ದುಕುಲ ಪಾಲಿಸಿದಾ ‖ ೫೮ ‖ ಬಳಿಕ ಯದುರಾಜ್ಯಾಧಿಪತ್ಯದ ಲಲಿತವಿಭ
. . . . . . . ಗಡಣದಲಿ ‖ ತೊಳಪ ತಾರಾವಳಿಯ ಮಧ್ಯಸ್ಥಳದ
ಚಂದ್ರಮನಂತೆ . . . . . . . . . . . . . . . . . .
ದೇಶದೊಳಗನ್ಯಾಯುಡಾವರವೋಸಪುಸಿಪಿಸುಣತ್ವವಳವಿಶ್ವಾಸಘಾತಕ .
. . . , . . . . ತಿಪ್ರೋಸರಿಸವಂತೊಲಿದು ಮಹಿಳಾಧೀಶ ಪಾಲಿಸು
ತಿರ್ದನಾಯದುರಾಜ್ಯ . . . . . . . . . . . . . . . .
ಭಿಯು ದೇವಕಿಯು ಗೋಪರ ವೃಂದವನು ಬಲದೇವನ ಕ್ರೂರಾದಿಯಾದ
ಪರಾ . . . . . . . . . . . . . . . . . . . . . . .
ಸುರಮುನಿವೃಂದ ಭಜಿಸುತ್ತಿರಲು . . . . . . . . . . . . .
ನೆ ಮೆಱೆವ ದ್ವಾರಾವತಿಯೊಳೀಮಧುರಾ . . . . . . . . . . . .
ಭೂಭಾರವನಿಳುಹಿ ಸುಖದಿಂದಿರ್ದನಸುರಾರಿ ‖ ೬೦ ‖
. . . . ಸಿ ಸಾರಥಿಯಾಗಿ ಫಲುಗುಣಗೆ . . . . ರಿಭಕ್ತರನು ಪಾಲಿ
ಸುತೆ ‖ ೬೩ ‖
ದೇವ ಜಯು . . . ವಿಶ್ವತೋಧರ . . . . . . . . . . ‖ ದೇವ ಯ
ದುಕುಲಪಾಲಕನೆ ಜಯು ದೇವ . . . . . . . . . ಸೋಮಕವಿಯು
ಕ್ರೂರಚರಿತೆಯ ತಾ ಮಹಾಭಕ್ತಿಯೊಳೊರೆದು . . . ಯಾ ‖ ಭೂ
ಮಿಯೊಳಗೋದುವರನಾಮಹಿಮ ಶ್ರೀಕೃಷ್ಣ ಸಲಹುವ . . . . .
ರಲಿ ‖ ೬೫ ‖ ಗೋದಾನಸಾಸಿರವ ವಿಪ್ರರಿಗಾದರದೆ ಗಂಗೆಯ ತಡಿಯಲ್ಲಿ
. . . . . . . . . . ಲರಾ ‖ ಆದರದೆ ರಕ್ಷಿಸಿದ ಫಲವೆಂದಾದಯಾನಿಧಿ
ಕೃಷ್ಣನಾಜ್ಞೆಯೊಳೋದು . . . . ರೂ ‖ ೬೬ ‖ ಮಂಗಳಂ.

ಈ ಗ್ರಂಥವನ್ನು ಮುದ್ರಿಸುವುದಕ್ಕೆ ಈ ಪುಸ್ತಕಾಗಾರದಲ್ಲಿರುವ ಎರಡು ಪುಸ್ತಕಗಳು ಆದರ್ಶಗಳಾಗಿ ಉಪಯೋಗಿಸಲ್ಪಟ್ಟುವು. ಅವುಗಳಲ್ಲಿ ಒಂದು ಓಲೆಯ ಪುಸ್ತಕವು. ಇದು ಈಗ್ಗೆ ಎಪ್ಪತ್ತೆಂಟುವರ್ಷಗಳ ಹಿಂದೆ ಬರೆಯಲ್ಪಟ್ಟುದು. ಮತ್ತೊಂದು ಕಾಗದದ ಪುಸ್ತಕವು.

ಇದು ಯಾವಾಗ ಬರೆಯಲ್ಪಟ್ಟಿದ್ದೋ ಗೊತ್ತಿಲ್ಲ. ಅವೆರಡು ಪುಸ್ತಕಗಳೂ ಬೇರೆ ಬೇರೆ ಪ್ರತಿಗಳ ಆಧಾರದಿಂದ ಹುಟ್ಟಿದುವು. ಓಲೆಯ ಪುಸ್ತಕದಲ್ಲಿ ಎಂಟು ಸಂಧಿಗಳೂ ನಾಲ್ನೂರರುವತ್ತೆಂಟು ಪದ್ಯಗಳೂ ಇವೆ. ಕಾಗದದ ಪುಸ್ತಕದಲ್ಲಿಯೂ ಎಂಟು ಸಂಧಿಗಳೇ ಇವೆ. ಆದರೆ ಆ ಪುಸ್ತಕದ ಕೊನೆಯಲ್ಲಿ ಅಂತು ಸಂಧಿ ಏಳಕ್ಕೆ ಪದ್ಯಗಳು ನಾಲ್ನೂರ ಮೂವತ್ತನಾಲ್ಕು ಎಂದಿದೆ. ಈ ಸಂಧಿಸಂಖ್ಯೆಯು ಪೂರ್ವಪೀಠಿಕೆಯ ಪದ್ಯಗಳನ್ನೂ ಮಂಗಳಪದ್ಯಗಳನ್ನೂ ಬಿಟ್ಟು ಕೃಷ್ಣೋತ್ಪತ್ತಿಕಥೆಯಿಂದಾರಂಭಿಸಿ ಪ್ರಥಮಸಂಧ್ಯಂತದಲ್ಲಿ ಸಂಖ್ಯೆಯನ್ನು ಹಾಕದೆ ದ್ವಿತೀಯ ಸಂಧಿಯ ಸೂಚನೆಯ ಪದ್ಯವನ್ನು ದ್ವಿತೀಯ ಸಂಧ್ಯಾದಿಪದ್ಯದ ಪೂರ್ವಾರ್ಧದೊಡನೆ ಸೇರಿಸಿ ಒಂದು ಪದ್ಯವನ್ನಾಗಿ ಬರೆದು ಆ ಪದ್ಯದ ಉತ್ತರಾರ್ಧವನ್ನು ಬರೆಯದೆ ಮುಂದಣ ಪದ್ಯಗಳನ್ನು ಬರೆಯುತ್ತಾ ದ್ವಿತೀಯ ಸಂಧ್ಯಂತದಲ್ಲಿ ಒಂದನೆಯ ಸಂಧಿಯು ಮುಗಿದುದೆಂದು ತಿಳಿದುಕೊಂಡು ಸಂಖ್ಯೆಯನ್ನು ಹಾಕಿದ ಲೇಖಕನ ಪ್ರಮಾದದಿಂದ ಹಾಕಲ್ಪಟ್ಟಿದಾದುದರಿಂದ ಈ ಎರಡು ಪುಸ್ತಕಗಳ ಸಂಧಿಸಂಖ್ಯೆಯೂ ಸಮವಾದುದೆಂದೇ ಭಾವಿಸಬೇಕು. ಪದ್ಯಸಂಖ್ಯೆಗಳು ಅವುಗಳ ಮೂಲಪ್ರತಿಗಳಿಗೆ ಅನುಸಾರವಾಗಿಯೂ ಅವುಗಳಲ್ಲಿರುವ ಕಥಾಭಾಗಗಳಿಗನುಸಾರವಾಗಿಯೂ * ಭಿನ್ನವಾಗಿರುವುವಲ್ಲದೆ ಕೆಲವು ಪದ್ಯಗಳ ಆನುಪೂರ್ವಿಗಳೂ ಭಿನ್ನವಾಗಿವೆ. ಆ ಎರಡು ಪ್ರತಿಗಳಲ್ಲಿಯೂ ಪ್ರಕರಣಕ್ಕೆ ಉಚಿತಗಳಾದ ಪದ್ಯಗಳನ್ನು ಆರಿಸಿಕೊಂಡು ಸೇರಿಸಿರುವುದರಿಂದ ಈ ಪುಸ್ತಕದಲ್ಲಿ ಮುದ್ರಿಸಿರುವ ಪದ್ಯಗಳ ಸಂಖ್ಯೆಯು ಐದುನೂರಹದಿಮೂರಾಗಿರುವುದು. ಈ ಪುಸ್ತಕದಲ್ಲಿ ಅಪ್ರಕೃತವಾಗಿ ಅಥವಾ ಅಸಂಬದ್ಧವಾಗಿ

---

* ಓ. ಪುಸ್ತಕದಲ್ಲಿ ಶ್ರೀಕೃಷ್ಣನು ಅಕ್ರೂರನ ಮನೆಯಲ್ಲಿ ಊಟಮಾಡಿ ಬಂದು ಮಣಿವಿಷ್ಟರದೊಳ್ ಕುಳಿತನೆಂಬುದೇ ಕಥೆಯ ಕೊನೆಯಾಗಿದೆ. ಕಾ. ಪುಸ್ತಕದಲ್ಲಿ ಶ್ರೀಕೃಷ್ಣನು ಅಕ್ರೂರನ ಮನೆಯಲ್ಲಿ ಭೋಜನಮಾಡಿ ಉಗ್ರಸೇನನನ್ನು ಕರೆಯಿಸಿ ಅವನಿಗೆ ಕರ್ತವ್ಯವನ್ನುಪದೇಶಿಸಿ ಅಕ್ರೂರಾದಿಗಳನ್ನು ಸಮಾಧಾನಗೊಳಿಸಿ ನಂದಾದಿಗಳೊಡನೆ ಗೋಕುಲಕ್ಕೆ ಪ್ರಯಾಣಮಾಡಿದನೆಂಬುದು ಕೊನೆಯಾಗಿದೆ.

ಅಥವಾ ಅನುಚಿತವಾಗಿ, ಗ್ರಂಥಕಾರಾಭಿಮತಗಳಾಗಿರಲಾರವೆಂದು ತೋರಿ ಬಂದ ಪದ್ಯಗಳು ಕೆಳಗಡೆಯಲ್ಲಿ ಮುದ್ರಿಸಿ ತೋರಿಸಲ್ಪಟ್ಟವೆ.

ಈ ಎರಡು ಪುಸ್ತಕಗಳಲ್ಲಿಯೂ ತಪ್ಪುಗಳು ಬಹುಳವಾಗಿರುವುದರಿಂದ ಅವುಗಳನ್ನು ಸಾಧ್ಯವಾದ ಮಟ್ಟಿಗೆ ಸರಿಪಡಿಸಿ ಮುದ್ರಿಸಿರುವುದಲ್ಲದೆ ಆವಶ್ಯಕಗಳಾದ ಸ್ಥಲಗಳಲ್ಲಿ ಆ ಪುಸ್ತಕಗಳಲ್ಲಿರುವ ಪಾಠಗಳೂ ಕೆಳಗೆ ಪಾಠಾಂತರಗಳಾಗಿ ಪುಸ್ತಕಸೂಚಕವರ್ಣಗಳೊಡನೆ ಮುದ್ರಿಸಲ್ಪಟ್ಟಿರುತ್ತವೆ. ಅವುಗಳಲ್ಲಿ ಓಲೆಯ ಪುಸ್ತಕಕ್ಕೆ ಓ. ಎಂಬಕ್ಷರವೂ, ಕಾಗದದ ಪುಸ್ತಕಕ್ಕೆ ಕಾ. ಎಂಬಕ್ಷರವೂ ಕುರುಹುಗಳಾಗಿ ಉಪಯೋಗಿಸಲ್ಪಟ್ಟವೆ.

ಪುಸ್ತಕದ ಆದಿಭಾಗದಲ್ಲಿ ವಿಷಯಸೂಚಿಯೂ ಶುದ್ಧಪತ್ರಿಕೆಯೂ ಸೇರಿಸಲ್ಪಟ್ಟವೆ. ಇನ್ನೂ ಪ್ರಮಾದದಿಂದುಂಟಾದ ತಪ್ಪುಗಳು ಕಂಡು ಬಂದಲ್ಲಿ ಅಭಿಜ್ಞರಾದ ಪಂಡಿತರು ಕ್ಷಮಿಸಿ ತಿದ್ದಿಕೊಳ್ಳುವರೆಂದು ನಂಬಿ ಕೊಂಡಿರುವ

ಟಿ ಎ. ಸುಬ್ಬರಾಯಶಾಸ್ತ್ರಿ,
ರೆಸಿಡೆಂಟ್ ಪಂಡಿತ.

# ವಿಷಯಸೂಚಿಕೆ.


ವಿಷಯಗಳು | ಪುಟ

೧ನೆಯ ಸಂಧಿ.—

ಸಮಗ್ರಗ್ರಂಥವಿಷಯಸಂಕ್ಷೇಪಸೂಚನೆ—ಮಂಗಳಾಚರಣೆ—ಗ್ರಂಥಸ್ವರೂಪ, ಗ್ರಂಥನಾಮ, ಗ್ರಂಥಕರ್ತೃನಾಮ ನಿರ್ದೇಶವು, ಗ್ರಂಥಪ್ರತಿಪಾದ್ಯ ವಿಷಯ, ವಿಷ್ಣುಭಕ್ತ ಪ್ರಣಾಮಾಶುದ್ಧಶೋಧನ ಪ್ರಾರ್ಥನೆಗಳು .... .... .... 1

ಗ್ರಂಥಕಥಾ ಕಥನಾರಂಭವು—ಕೇಶಿಪ್ರಮುಖ ದೈತ್ಯರ ದುರ್ವೃತ್ತಿಗಳು—ಬ್ರಹ್ಮಾದಿಗಳು ದೂರಲು ವಿಷ್ಣುವು ಅಭಯವಿತ್ತು ಭೂಮಿಯಲ್ಲಿ ಅವತರಿಸುವಂತೆ ನೇಮಿಸಿದುದ—ದೇವತೆಗಳ ಅವತಾರವು 2

ಕಂಸನ ಕೆಟ್ಟ ನಡತೆಗಳು—ಬಲ ಕೃಷ್ಣರು ಅವತರಿಸಿದುದು—ವಸುದೇವನು ಮಾಡಿದ ಕೃಷ್ಣ ಮಾಯೆಯರ ಪರಿವರ್ತನವು .... 3

ಮಾಯಾದೇವಿಯು ಗಟ್ಟಿಯಾಗಿ ಅತ್ತುದು—ಮಾಯಾದೇವಿಯು ಕಂಸನಿಂದ ತಪ್ಪಿಸಿಕೊಂಡು ಗಗನಕ್ಕೆ ಹಾರಿದುದು—ಕಂಸನು ಕೃಷ್ಣನನ್ನು ಕೊಲ್ಲುವುದಕ್ಕೆ ಆಪ್ತರನ್ನು ನಿಯಮಿಸಿದುದು .... 4

ಶ್ರೀ ಕೃಷ್ಣನ ಬಳವಿಗೆಯ ವರ್ಣನೆ .... .... 5

ಶ್ರೀ ಕೃಷ್ಣನು ಪೂತನಾದಿಗಳನ್ನು ಸಂಹರಿಸಿದುದು—ಶ್ರೀ ಕೃಷ್ಣನು ಯಶೋದೆಗೆ ವಿಶ್ವರೂಪವನ್ನು ತೋರಿದುದು, ಯಮಳಾರ್ಜುನ ಭಂಜನವು—ಕಾಳಿಯ ಮರ್ದನ ಗೋವರ್ಧನೋದ್ಧರಣಗಳು—ಬ್ರಹ್ಮನು ಶ್ರೀ ಕೃಷ್ಣನ ಮಹಿಮೆಯನ್ನು ಪರೀಕ್ಷಿಸಿ ತಿಳಿದುದು .... 6

ಶ್ರೀಕೃಷ್ಣನ ಚರಿತ್ರೆಗಳನ್ನು ಕೇಳಿ ಕಂಸನು ಭಯದಿಂದ ಚಿಂತಿಸಿದುದು.

೨ನೆಯ ಸಂಧಿ.—

ಎರಡನೆಯ ಸಂಧಿಯ ಸೂಚನೆ—ಅಕ್ರೂರ ಚರಿತ್ರಮಹಿಮೆಯ ವರ್ಣನೆ .... .... .... 7

ಕಂಸನು ಕೃಷ್ಣನ ಸಾಹಸವನ್ನು ಕೇಳಿ ಚಿಂತಿಸಿದುದು—ಕಂಸನು ಚಿಂತಿಸುತ್ತಾ ಓಲಗಶಾಲೆಗೆ ಬಂದುದು—ಕಂಸನು ಓಲಗಶಾ

ವಿಷಯಗಳು ಪುಟ

ಳಿಗೆ ಸಭ್ಯರನ್ನು ಕರೆಯಿಸಿದುದು—ಸಭೆಯಲ್ಲಿ ಕಂಸನಿದ್ದ ಪರಿಯ ವರ್ಣನೆ .... .... .... 8

ಕಂಸನ ಆಸ್ಥಾನದ ವರ್ಣನೆ—ಅಕ್ರೂರನ ಗುಣಗಳ ವರ್ಣನೆ—ಕಂಸನು ಅಕ್ರೂರನೊಡನೆ ಯೋಚಿಸಿದುದು .... 9

ಅಕ್ರೂರನು ಕಂಸನೊಡನೆ ಹೇಳಿದುದು—ಕಂಸನು ಅಕ್ರೂರನಲ್ಲಿ ಕೋಪಿಸಿದುದು—ಅಕ್ರೂರನ, ಕಂಸನನ್ನು ಹೊಗಳಿ ಹೇಳಿದುದು, ಕಂಸನು ಅಕ್ರೂರನನ್ನು ಶತ್ರುಸಂಹಾರೋಪಾಯವನ್ನು ಕೇಳಿದುದು .... .... .... 10

ಅಕ್ರೂರನು ಕಂಸನೊಡನೆ ನೀನು ಹೇಳಿದಂತೆ ಮಾಡುವೆನೆಂದು ಹೇಳಿದುದು, ಕಂಸನು ಅಕ್ರೂರನೊಡನೆ ಶತ್ರುವಿಷಯಕವಾದ ನೀತಿಯನ್ನು ಹೇಳಿದುದು .... .... .... 11

ಕಂಸನು ಕೃಷ್ಣವಿನಾಶನೋಪಾಯವನ್ನು ಹೇಳಲು ಅಕ್ರೂರನು ಬೆರಗಾದುದು—ಕಂಸನು ಕೃಷ್ಣನನ್ನು ಕರೆಯಲು ಅಕ್ರೂರನಿಗೆ ನೇಮಿಸಿದುದು—ಅಕ್ರೂರನು ಕೃಷ್ಣನನ್ನು ಕಾಣುವೆನೆಂಬ ಹರ್ಷದಿಂದ ಒಪ್ಪಿಕೊಳ್ಳಲು ಕಂಸನು ವಾಚಿಕವನ್ನು ಹೇಳಿ ಕಳುಹಿದುದು—ಸೂರ್ಯಾಸ್ತ ವರ್ಣನೆ .... .... 12

ಚಂದ್ರೋದಯ ವರ್ಣನೆ—ಅಕ್ರೂರನು ಮನೆಗೆ ಬಂದು ಮನದಲ್ಲಿ ವಿವಿಧವಾಗಿ ಆಲೋಚಿಸುತ್ತಾ ಆನಂದಪಡುತ್ತಿದ್ದುದು .... 13

ಅಕ್ರೂರನು ಗಮನೋದ್ಯೋಗಪರನಾದುದು—ಸೂರ್ಯೋದಯ ವರ್ಣನೆ—ಅಕ್ರೂರನು ಅಚ್ಯುತನ ಮಹಿಮೆಯನ್ನು ಎಣಿಸುತ್ತಾ ಪ್ರಯಾಣವಮಾಡಿದುದು .... .... .... 14

ಗೋಕುಲ ಗೋಕುಲೋದ್ಯಾನಗಳ ವರ್ಣನೆ .... .... 16

ಅಕ್ರೂರನು ನಂದನರಮನೆಯ ಕಡೆಗೆ ಬರುತ್ತಿದ್ದುದು—ಸೂರ್ಯಾಸ್ತವರ್ಣನೆ .... .... .... 17

ಅಕ್ರೂರನು ನಂದನ ಅರಮನೆಯನ್ನು ಹೊಕ್ಕು ಗೋಪಾದಿಗಳನ್ನು ನೋಡುತ್ತಾ ಬಂದುದು—ಗೋಪವೃದ್ಧಾದಿಗಳ ವರ್ಣನೆ .... .... .... 18

ಅಕ್ರೂರನು ಗೋಸೇವೆಯಲ್ಲಿದ್ದ ಶ್ರೀಕೃಷ್ಣನನ್ನು ಕಂಡುದು .... 20

ಅಕ್ರೂರನು ಶ್ರೀಕೃಷ್ಣನಿಗೆ ವಂದಿಸಿದುದು .... .... 21

| ವಿಷಯಗಳು | ಪುಟ |
| --- | --- |
| ಶ್ರೀ ಕೃಷ್ಣನು ಅಕ್ರೂರನನ್ನು ಮನ್ನಿಸಿದುದು—ಶ್ರೀ ಕೃಷ್ಣನ ಮನ್ನಣೆಯನ್ನು ಪಡೆದ ಅಕ್ರೂರನಿದ್ದ ರೀತಿ .... | 22 |
| ಅಕ್ರೂರನು ಶ್ರೀ ಕೃಷ್ಣನೊಡನೆ ನಂದನ ಸಮೀಪಕ್ಕೆ ಬಂದುದು ನಂದನು ಅಕ್ರೂರನೊಡನೆ ಮಾತನಾಡಿದುದು—ಅಕ್ರೂರನು ನಂದನನ್ನು ಸ್ತುತಿಸಿದುದು .... .... | 23 |
| ಅಕ್ರೂರನು ಕಂಸನಿರೂಪವನ್ನು ತಿಳಿಸುವುದಕ್ಕೆ ಗೋಪಸಭೆಯನ್ನು ಕೂಡಿಸಿದ ದು .... .... .... | 24 |
| **೩ನೆಯ ಸಂಧಿ.—** | |
| ಮೂರನೆಯ ಸಂಧಿಯ ಸೂಚನೆ—ರಾಮಕೃಷ್ಣರಿಂದ ಕೂಡಿದ ಗೋಪಸಭೆಯ ವರ್ಣನೆ .... .... .... | 24 |
| ಅಕ್ರೂರನು ರಾಮಕೃಷ್ಣರನ್ನು ತನ್ನೊಡನೆ ಕರೆದುಕೊಂಡು ಹೋಗುವೆನೆಂದು ಹೇಳಿದುದು—ನಂದನು ರಾಮಕೃಷ್ಣರನ್ನು ಕಳುಹುವುದಕ್ಕೆ ಒಪ್ಪದೆ ತಾನೇ ಬರುವೆನೆಂದುದು—ರಾಮ ಕೃಷ್ಣರನ್ನು ಅಕ್ರೂರನು ಕರೆದುಕೊಂಡು ಹೋಗುವನೆಂಬುದನ್ನು ಕೇಳಿ ಗೋಪಿಯರು ಅಕ್ರೂರನ ಬಳಿಗೆ ಬಂದುದು .... | 25 |
| ಗೋಪಿಯರು ಅಕ್ರೂರನೊಡನೆ ಹೇಳಿದುದು—ಅಕ್ರೂರನು ನಂದ ಯಶೋದೆಯರೊಡನೆ ಹೇಳಿದುದು-ಚಂದ್ರೋದಯದ ವರ್ಣನೆಯು | 26 |
| ಶ್ರೀ ಕೃಷ್ಣನು ಅಕ್ರೂರನನ್ನು ಮಾತಾಡಿಸಿದುದು—ಅಕ್ರೂರನು ಶ್ರೀ ಕೃಷ್ಣನೊಡನೆ ಹೇಳಿದುದು .... .... | 27 |
| ಶ್ರೀ ಕೃಷ್ಣನು ಅಕ್ರೂರನಿಗೆ ತಮ್ಮನ್ನು ಹೆದರದೆ ಕರೆದುಯ್ಯುವದೆಂದು ಹೇಳಿದುದು—ಅಕ್ರೂರನು ಶ್ರೀ ಕೃಷ್ಣನನ್ನು ಸಾವಿಗಂಜದಿರುವುದಕ್ಕೆ ಕಾರಣವನ್ನು ಕೇಳಿದುದು—ಶ್ರೀ ಕೃಷ್ಣನು ಕಾರಣವನ್ನು ಹೇಳಿದುದು .... .... .... | 28 |
| ಅಕ್ರೂರನು ಶ್ರೀ ಕೃಷ್ಣನನ್ನು ಮುನ್ನಿನ ನಿಜವನ್ನೂ ಧರ್ಮರಹಸ್ಯನೀತಿಗಳನ್ನೂ ಕೇಳಿದುದು—ಶ್ರೀ ಕೃಷ್ಣನು ಅಕ್ರೂರನಿಗೆ ತನ್ನ ನಿಜವನ್ನೂ ಧರ್ಮರಹಸ್ಯನೀತಿಗಳನ್ನೂ ವಿಸ್ತರಿಸಿದುದು—ಶ್ರೀ ಕೃಷ್ಣನು ಮತ್ತೆ ತನ್ನ ನಿಜವನ್ನು ಹೇಳಿದುದು .... | 29 |
| ಶ್ರೀ ಕೃಷ್ಣನು ತಾನು ಸನ್ನಿಹಿತನಾಗಿರುವ ಸ್ಥಳಗಳನ್ನು ಹೇಳಿದುದು—ಶ್ರೀ ಕೃಷ್ಣನು ತಾನು ಪ್ರಸನ್ನನಾಗುವ ರೀತಿಯನ್ನು ಹೇಳಿದುದು .... .... .... | 30 |

ವಿಷಯುಗಳು | ಪುಟ

ಶ್ರೀ ಕೃಷ್ಣನು ತನ್ನ ಭಕ್ತರ ಸ್ವರೂಪವನ್ನು ವಿವರಿಸಿದುದು .... 31
ಶ್ರೀ ಕೃಷ್ಣನು ಜೀವನ್ಮುಕ್ತರ ಸ್ವರೂಪವನ್ನು ವಿವರಿಸಿದುದು .... 32
ಶ್ರೀ ಕೃಷ್ಣನು ಅಪ್ರತಿಮರ ಸ್ವರೂಪವನ್ನು ವಿವರಿಸಿದುದು .... 33
ಶ್ರೀ ಕೃಷ್ಣನು ಅರಿಷಡ್ವರ್ಗವನ್ನು ಬಿಟ್ಟರುವವರ ಸ್ವರೂಪವನ್ನು ವಿವರಿಸಿದುದು—ಶ್ರೀ ಕೃಷ್ಣನು ಪುನಃ ತನ್ನ ಭಕ್ತರ ಸ್ವರೂಪವನ್ನು ವಿವರಿಸಿದುದು .... .... .... 34
ಶ್ರೀ ಕೃಷ್ಣನು ಭಕ್ತಿಹೀನನಾದ ಕರ್ಮಿಗಿಂತಲೂ ತನ್ನ ಭಕ್ತರಾದ ಮೂರ್ಖಾದಿಗಳು ಉತ್ಕೃಷ್ಟರೆಂದು ಹೇಳಿದುದು—ಶ್ರೀ ಕೃಷ್ಣನು ಇಹಪರಗಳಿಗೆ ಬಾಹಿರರಾದ ಜನಗಳ ಸ್ವರೂಪವನ್ನು ವಿವರಿಸಿದುದು .... .... .... 35
ಶ್ರೀಕೃಷ್ಣನು ಹೇಳಿದ ನೀತಿಗಳನ್ನು ಕೇಳಿ ಅಕ್ರೂರನು ಶ್ರೀಕೃಷ್ಣನನ್ನು ಹೊಗಳಿದುದು—ಚಂದ್ರಾಸ್ತವರ್ಣನೆ .... 37
ಸೂರ್ಯೋದಯವರ್ಣನೆ .... .... .... 38

೪ನೆಯ ಸಂಧಿ.—

ನಾಲ್ಕನೆಯ ಸಂಧಿಯ ಸೂಚನೆ—ರಾಮಕೃಷ್ಣರು ಗೋಪರನ್ನು ಕರೆದು ಪ್ರಯಾಣಸಿದ್ಧರಾಗುವಂತೆ ಹೇಳುತ್ತಾ ಶೃಂಗಾರಾಸಕ್ತರಾದುದು ... .... .... 38
ರಾಮಕೃಷ್ಣರ ಅಂಗಶೃಂಗಾರದ ವರ್ಣನೆ—ಗೋಪರೆಲ್ಲರೂ ಸೇರಿದುದು,—ರಾಮಕೃಷ್ಣರು ಯಶೋದೆಯನ್ನು ಪ್ರಯಾಣಾನುಜ್ಞೆಯನ್ನು ಕೇಳಿದುದು—ಯಶೋದೆಯು ರಾಮಕೃಷ್ಣರ ಅಗಲಿಕೆಗಾಗಿ ಹಲುಬಿದುದು .... .... .... 39
ಶ್ರೀಕೃಷ್ಣನು ಯಶೋದೆಯನ್ನು ಸಂತೈಸಿ ನಮಸ್ಕರಿಸಲು ಯಶೋದೆಯು ಹರಸಿದುದು—ಶ್ರೀಕೃಷ್ಣನು ಬಲರಾಮನೊಡನೆ ರಥವನ್ನು ಹತ್ತಿದುದು .... .... .... 40
ಪ್ರಯಾಣಸಂಭ್ರಮಧ್ವನಿಯನ್ನು ಕೇಳಿ ಅಕ್ರೂರನು ಸಂತೋಷಗೊಂಡುದು—ಗೋಕುಲದ ವಿಲಾಸಿನಿಯರ ಶ್ರೀಕೃಷ್ಣಸಮೀಪಾಗಮನದ ವರ್ಣನೆ .... .... .... 41
ಶ್ರೀಕೃಷ್ಣನಸಮೀಪಕ್ಕೆ ಬಂದ ಗೋಕುಲವಿಲಾಸಿನಿಯರ ಬಿನ್ನಹದ ವರ್ಣನೆ .... .... .... 49

| ವಿಷಯಗಳು | ಪುಟ |
|---|---|
| ಶ್ರೀಕೃಷ್ಣನು ವಿಜ್ಞಾಪಿಸುತ್ತಾ ಮರುಗುತ್ತಿರುವ ವಿಲಾಸಿನಿಯರನ್ನು ಸಂತೈಸಲು ಅವರು ಬೇರೆ ಬೇರೆ ತಮ್ಮ ಅಭಿಪ್ರಾಯವನ್ನು ಹೇಳಿದುದು—ಮತ್ತು ಶ್ರೀಕೃಷ್ಣನು ಅವರಿಗೆ ಬೇರೆಬೇರೆ ಸಮಾಧಾನ ಹೇಳಿದುದು .... .... .... | 54 |
| ಶ್ರೀಕೃಷ್ಣನು ಗೋಪಿಯರನ್ನು ಸಮಾಧಾನಗೊಳಿಸಿ, ಕಳುಹಲು ಬಂದವರನ್ನು ನಿಲ್ಲಿಸಿ ಮುಂದೆ ನಡೆದುದು .... .... | 58 |
| **೫ನೆಯ ಸಂಧಿ.—** | |
| ಐದನೆಯ ಸಂಧಿಯ ಸೂಚನೆ—ಶ್ರೀಕೃಷ್ಣನ ವಿರಹದಲ್ಲಿ ಅಳಲುತ್ತಿರ್ದ ಗೋಪಿಯರ ವರ್ಣನೆ .... .... | 59 |
| ಗೋಪಿಯರ ದುಃಖಪ್ರಕಾರದ ವರ್ಣನೆ .... .... | 60 |
| ಗೋಪಿಯರು ಮನಸ್ಸಮಾಧಾನವನ್ನು ಮಾಡಿಕೊಂಡುದು ಮತ್ತು ಕೃಷ್ಣಪ್ರಯಾಣಕಥನವು.... .... .... | 61 |
| ಶ್ರೀಕೃಷ್ಣನು ಪ್ರಯಾಣಮಾಡುವಾಗ ನೋಡಿದ ಕಾನನದ ವರ್ಣನೆ .... .... .... | 62 |
| ಯಮುನಾನದಿಯ ವರ್ಣನೆ .... .... .... | 63 |
| ಶ್ರೀಕೃಷ್ಣನು ಯಮುನಾತೀರದಲ್ಲಿ ಗೋಪರೊಡನೆ ಇಳಿದುಕೊಂಡುದು .... .... .... | 64 |
| ಗೋಪಾಲಚೇಷ್ಟೆಗಳ ವರ್ಣನೆ—ಅಕ್ರೂರನು ಶ್ರೀಕೃಷ್ಣನಲ್ಲಿ ಮಾಡಿದ ವಿಜ್ಞಾಪನೆಯ ವರ್ಣನೆ .... .... | 65 |
| ಶ್ರೀಕೃಷ್ಣನು ಮರಗಳ ನೆರಳಲ್ಲಿ ಸುಖೋಪವಿಷ್ಟನಾಗಿರಲು ಅಕ್ರೂರನು ಬಂದು ಯಮುನೆಗೆ ವಂದಿಸಿದುದು—ಯಮುನಾನದಿಯ ವರ್ಣನೆ—ಅಕ್ರೂರನ ಯಮುನಾನದೀಸ್ನಾನದ ವರ್ಣನೆ .... | 66 |
| ಅಕ್ರೂರನು ಯಮುನಾಜಲದಲ್ಲಿ ವಿಶ್ವರೂಪಿಯಾದ ವಿಷ್ಣುವನ್ನು ನೋಡಿದುದು .... .... .... | 67 |
| ಅಕ್ರೂರನು ಶ್ರೀಕೃಷ್ಣನಿತ್ತ ದಿವ್ಯಲೋಚನದಿಂದ ಅವನುದರದೊಳ ಹೊಕ್ಕು ವಿಶ್ವವಿಸ್ತಾರವನ್ನು ನೋಡಿದುದು .... .... | 69 |
| ವಿಶ್ವರೂಪವನ್ನು ನೋಡಿದ ಅಕ್ರೂರನ ವಿಸ್ಮಯದ ವರ್ಣನೆ .... | 70 |
| ಅಕ್ರೂರನು ಆಹ್ನಿಕಾನುಷ್ಠಾನಾನಂತರದಲ್ಲಿ ಬಲಮುಕುಂದರ ಬಳಿಗೆ ಬಂದು ಶ್ರೀಕೃಷ್ಣನನ್ನು ಸ್ತುತಿಸಿದುದು .... .... | 71 |

ವಿಷಯಗಳು | ಪುಟ


ಅಕ್ರೂರನು ಹರಿಬಲರನ್ನು ವಂದಿಸಿ ಅವರಿಗೆ ಕರ್ತವ್ಯವನ್ನು ವಿಜ್ಞಾಪಿಸಿ ಪ್ರಯಾಣವ ಮಾಡಿದುದು—ಶ್ರೀ ಕೃಷ್ಣನು ಯಮುನಾನದಿಯನ್ನು ದಾಟಿ ಮಥುರಾಪುರೋದ್ಯಾನದಲ್ಲಿ ಪಾಳೆಯ ಬಿಡಿಸಿದುದು. 73

೬ನೆಯ ಸಂಧಿ.—

ಆರನೆಯ ಸಂಧಿಯ ಸೂಚನೆ—ಕಂಸಪುರೋದ್ಯಾನದ ವರ್ಣನೆ .... 74

ಶ್ರೀಕೃಷ್ಣನು ಉದ್ಯಾನದಲ್ಲಿರ್ದ ಅಬಲಾದಿಗಳನ್ನು ನೋಡಿದುದು.... 76

ಶ್ರೀಕೃಷ್ಣಾದಿಗಳ ಭೋಜನದ ವರ್ಣನೆ .... .... 77

ಶ್ರೀಕೃಷ್ಣನು ಮಥುರೆಯ ಹೊರಬಾಗಿಲಿಗೆ ಬಂದುದು—ಮಥುರಾಪುರಿಯ ಪರಿಖಾದಿಗಳ ವರ್ಣನೆ ... .... 78

ಶ್ರೀಕೃಷ್ಣನು ಮಥುರಾಪುರಿಯುಪರಿಯನ್ನು ಕೊಂಡಾಡುತ್ತಾ ಬಂದು ಇದಿರಾಗಿಬಂದ ರಜಕನನ್ನು ವಸ್ತ್ರಗಳನ್ನು ಕೇಳಿದುದು .... 79

ಶ್ರೀಕೃಷ್ಣನು ವಸ್ತ್ರಗಳನ್ನು ಕೊಡದೆ ನಿರಾಕರಿಸಿದ ರಜಕನನ್ನು ಕೊಂದುದು—ಶ್ರೀಕೃಷ್ಣನು ತಾನು ಪೀತಾಂಬರಗಳನ್ನು ತೆಗೆದುಕೊಂಡು ರಾಮಾದಿಗಳಿಗೂ ಬೇಕಾದ ವಸ್ತ್ರಗಳನ್ನು ಕೊಟ್ಟು ಪತ್ತನಪ್ರವೇಶವನ್ನು ಮಾಡಿ ಅಂಗಡಿ ಮೊದಲಾದುವನ್ನು ಕಂಡುದು .... .... .... 80

ಮಥುರಾಪುರದ ವರ್ಣನೆ—ಶ್ರೀಕೃಷ್ಣನು ಮಥುರಾಪುರಿಯಲ್ಲಿ ಬರುತ್ತಿರುವಾಗ ತೋರಿದುದು—ಶ್ರೀಕೃಷ್ಣಚರಣಸಂಸರ್ಗದಿಂದ ಆ ಪಟ್ಟಣದಲ್ಲಿ ಉಂಟಾದ ಫಲಗಳ ವಿವರಣೆ .... .... 81

ಶ್ರೀಕೃಷ್ಣಚರಣದರ್ಶನದಿಂದ ಮಥುರೆಯಲ್ಲಿ ಉಂಟಾದ ಫಲಗಳ ವಿವರಣೆ—ಸೂರ್ಯಾಸ್ತದ ವರ್ಣನೆ .... .... 82

ಶ್ರೀಕೃಷ್ಣನು ಕಂಪಿನ ಗಾಳಿಯನ್ನನುಸರಿಸಿ ಸುದಾಮನ ಮನೆಗೆ ಬಂದುದು—ಸುದಾಮನು ಕೃಷ್ಣಾಗಮನವನ್ನು ಸ್ತುತಿಸಿದುದು, ಸುದಾಮನು ಶ್ರೀಕೃಷ್ಣನನ್ನು ಸಂಭಾವಿಸಿದುದು .... 83

ಸುದಾಮನು ಶ್ರೀಕೃಷ್ಣನನ್ನು ಮನದಲ್ಲಿ ಭಾವಿಸಿದುದು—ಸುದಾಮನು ಶ್ರೀಕೃಷ್ಣಬಲರಾಮರನ್ನು ಪುಷ್ಪಗಳಿಂದಲಂಕರಿಸಿ ಲಾಲಿಸಿದುದು—ಶ್ರೀಕೃಷ್ಣನು ಸುದಾಮನಿಗೆ ವರವಿತ್ತು ಅವನನ್ನು ಬೀಳ್ಕೊಟ್ಟು ಬಂದುದು .... .... ... 84

ಸಂಜೆಗತ್ತಲೆಯ ವರ್ಣನೆ—ಅಭಿಸಾರಿಕಾಗಮನದ ವರ್ಣನೆ—ತಾರಕಾಳಿ ದೀಪಾವಳಿಗಳ ವರ್ಣನೆ—ಚಂದ್ರೋದಯದ ವರ್ಣನೆ. 85

| ವಿಷಯಗಳು | ಪುಟ |
| --- | --- |
| ಶ್ರೀ ಕೃಷ್ಣನು ಅಂಗಡಿಗೇರಿಗಳನ್ನು ನೋಡುತ್ತಾ ಬಂದು ಕುಬ್ಜೆಯನ್ನು ಕಂಡುದು—ಕುಬ್ಜೆಯು ಶ್ರೀರಾಮಕೃಷ್ಣರಂಗಕ್ಕೆ ಗಂಧಲೇಪನವನ್ನು ಮಾಡಿದುದು .... .... | 86 |
| ಶ್ರೀಕೃಷ್ಣನು ಕುಬ್ಜೆಯ ವಕ್ರತೆಯನ್ನು ಹೋಗಿಸಿದುದು—ಮನೆಗೆ ಬರಬೇಕೆಂದು ನಿರ್ಬಂಧಿಸುವ ಕುಬ್ಜೆಯನ್ನು ಶ್ರೀಕೃಷ್ಣನು ಸಮಾಧಾನಗೊಳಿಸಿದುದು .... .... .... | 87 |
| ರಾಮಕೃಷ್ಣರು ಕೇರಿಮುಂದಿಗಳ ವೈಚಿತ್ರ್ಯವನ್ನು ನೋಡುತ್ತಾ ನಡೆದುದು—ಸೂಳೆಗೇರಿಯ ವರ್ಣನೆ .... .... | 88 |
| ವೇಶ್ಯೆಯರ ವರ್ಣನೆ .... .... .... | 89 |
| ವೇಶ್ಯೆಯರನ್ನು ನೋಡಿದ ಶ್ರೀಕೃಷ್ಣನು ಹೇಳಿದುದು .... | 90 |
| ವೇಶ್ಯೆಯರು ಶ್ರೀಕೃಷ್ಣನನ್ನು ಬೀಳುಕೊಂಡುದು—ರಾಮಕೃಷ್ಣರ ಪಲತೆರದ ಕೇರಿಗಳ ಸಂಚಾರದ ವರ್ಣನೆ—ರಾಮಕೃಷ್ಣರು ಶಸ್ತ್ರಮಂಟಪಕ್ಕೆ ಹೋದುದು, ಶಸ್ತ್ರಮಂಟಪದ ವರ್ಣನೆ .... .... .... | 91 |
| ಶ್ರೀಕೃಷ್ಣನು ಕಂಸನ ಶಸ್ತ್ರಶಾಲೆಯಲ್ಲಿರುವ ಆಯುಧಗಳನ್ನು ನೋಡಿದುದು—ಶ್ರೀಕೃಷ್ಣನು ಕಂಸಚಾಪಕ್ಕೆ ತಿರುವೇರಿಸಿ ಬೊಬ್ಬಿರಿದುದು .... .... .... | 92 |
| ಶ್ರೀಕೃಷ್ಣನು ಕಂಸನ ಬಿಲ್ಲನ್ನು ಮುರಿದುದು—ಕಂಸನು ಮಂತ್ರಿಗಳೊಡನೆ ಆಲೋಚಿಸಿದುದು, ಕಂಸನು ಕರಿಶಿಕ್ಷಕರನ್ನು ಕರೆಯಿಸಿ ಹೇಳಿದುದು .... .... .... | 93 |
| ಕಂಸನು ಆನೆಯನ್ನು ಹೊಗಳಿದ ಕರಿಶಿಕ್ಷಕರನ್ನು ಬೀಳ್ಕೊಟ್ಟು ಅಂತಃಪುರಕ್ಕೆ ಹೋದುದು—ರಾಮಕೃಷ್ಣರ ರಾತ್ರಿಯಿರವು—ಕಂಸನಿಗೆ ಒದಗಿದ ದುರ್ನಿಮಿತ್ತಗಳು .... .... | 94 |
| ಅಕ್ರೂರನು ಚಿಂತಿಸುತ್ತಿದ್ದುದು .... .... | 95 |


೭ನೆಯ ಸಂಧಿ.—


| | |
| --- | --- |
| ಏಳನೆಯ ಸಂಧಿಯ ಸೂಚನೆ—ನಿಶಾಂತದ ವರ್ಣನೆ .... | 95 |
| ಕೋಳಿಗಳ ಕೂಗಿನ ವರ್ಣನೆ—ಸೂರ್ಯೋದಯದ ವರ್ಣನೆ—ಅಕ್ರೂರನು ಕಂಸನರಮನೆಗೆ ಬಂದುದು .... .... | 96 |
| ಕಂಸಪ್ರಬೋಧವರ್ಣನೆ—ಕಂಸನು ತನ್ನೋಲಗಕ್ಕೆ ಬಂದುದು, | |

ವಿಷಯಗಳು ಪುಟ


ಕಂಸನು ಮಂತ್ರಿಗಳಿಗೆ ಹೇಳಿದುದು .... .... 97

ಮಂತ್ರಿಗಳು ತನ್ನಭಿಪ್ರಾಯವನ್ನು ಹೇಳಲು ಮೆಚ್ಚಿದ ಕಂಸನಿಗೆ ಅಕ್ರೂರನು ಹೇಳಿದುದು—ಕಂಸನು ತನ್ನ ಅಭಿಪ್ರಾಯವನ್ನು ಹೇಳಿದುದು .... .... .... 98

ಕಂಸನು ಸೌಧಾಗ್ರದಲ್ಲಿ ಕುಳಿತುಕೊಂಡು ಚಿಂತಿಸುತ್ತಿರ್ದುದು—ಮಂತ್ರಿಗಳು ನಿಖಿಳಬಲಸಹಿತವಾಗಿ ಮದ್ದಾನೆಯನ್ನು ತರಿಸಿ ನಿಲ್ಲಿಸಿದುದು—ಕುವಲಯಾಪೀಡಗಜದ ವರ್ಣನೆ—ನೋಡುವುದಕ್ಕಾಗಿ ಪೌರಜನರು ನೆರೆದುದು .... .... 99

ಶ್ರೀ ಕೃಷ್ಣಾದಿಗಳ ಸುಪ್ರಬೋಧ ವರ್ಣನೆ—ರಾಮಕೃಷ್ಣರು ಯಮುನಾನದಿಯಲ್ಲಿ ಸಂಧ್ಯಾವಂದನೆಯನ್ನು ಮಾಡಿಕೊಂಡು ಪಟ್ಟಣಕ್ಕೆ ಬಂದುದು—ಗೋಪಾದ್ಯುದ್ಘೋಷ ವರ್ಣನೆ—ಹರಿಬಲರು ಬಂದು ಕುವಲಯಾಪೀಡವನ್ನು ನೋಡಿದುದು .... 100

ಶ್ರೀ ಕೃಷ್ಣನು ಕುವಲಯಾಪೀಡವನ್ನು ವರ್ಣಿಸಿದುದು .... 101

ಶ್ರೀ ಕೃಷ್ಣನು ಬಲರಾಮನನ್ನು ಕುವಲಯಾಪೀಡಬಾಧೆಯನ್ನು ತಪ್ಪಿಸಲುಪಾಯವನ್ನು ಕೇಳಿದುದು—ಕುವಲಯಾಪೀಡ ಹರಿಬಲರ ಯುದ್ಧದ ವರ್ಣನೆ .... .... 102

ಕುವಲಯಾಪೀಡವಧ ವರ್ಣನೆ—ರಾಮಕೃಷ್ಣರು ಮಾವುತರನ್ನು ಹೊಡೆದು ನೃಪಮಂದಿರಕ್ಕೆ ಹೋದುದು—ಪುರಜನರು ಶ್ರೀಕೃಷ್ಣನನ್ನು ಸ್ತುತಿಸಿದುದು—ಅಕ್ರೂರನು ಶ್ರೀಕೃಷ್ಣನನ್ನು ಸ್ತುತಿಸಿದುದು .... .... .... 103

ಶ್ರೀ ಕೃಷ್ಣನು ಅಕ್ರೂರನಿಗೆ ಅಭಯವನ್ನು ಕೊಡುತ್ತಾ ಬಂದು ಕಂಸನಿಗೆ ಕಾವಲಾಗಿದ್ದ ದೈತ್ಯರೇ ಮುಂತಾದ ಚತುರಂಗ ಸೇನೆಯನ್ನು ನೋಡಿ ನಗುತ್ತಾ ಒಳಹೊಕ್ಕುದು .... 104

ಅಲ್ಲಿ ಮೊಳಗುತ್ತಿದ್ದ ವಾದ್ಯರವಕ್ಕೆ ಶ್ರೀ ಕೃಷ್ಣನು ನಗುತ್ತಿರ್ದುದು, ಅಲ್ಲಿಯ ಸುಭಟರು ಶ್ರೀ ಕೃಷ್ಣನನ್ನು ಬೇಡಿಕೊಳ್ಳುತ್ತಿರ್ದುದು, ದೈತ್ಯಹಲಾಯುಧರ ಯುದ್ಧದ ವರ್ಣನೆ .... .... 105

ಬಲರಾಮನು ಅನೇಕ ದೈತ್ಯರನ್ನು ಕೊಂದುದು—ಶ್ರೀ ಕೃಷ್ಣನು ಗೋಪರೊಡನೆ ಮಲ್ಲಮಂಟಪಕ್ಕೆ ಪ್ರವೇಶಿಸಿದುದು—ಮಲ್ಲಮಂಟಪದ ವರ್ಣನೆ .... .... .... 106

ವಿಷಯಗಳು ಪುಟ

ಮಲ್ಲರಂಗದ ಸುತ್ತಲಿಹ ಜನಗಳ ವರ್ಣನೆ .... .... 107

ಶ್ರೀ ಕೃಷ್ಣನು ವಸುದೇವದೇವಕಿಯರನ್ನು ನೋಡುತ್ತಾ ಕಳನಮಧ್ಯದಲ್ಲಿ ನಿಂದುದು—ಕಳನ ಮಧ್ಯದಲ್ಲಿ ನಿಂದ ಹರಿಬಲರವರ್ಣನೆ. 108

ಹಿರಿಯ ಜಟ್ಟಿಗಳ ಸಮೀಪದಲ್ಲಿ ಕಿರುಜಟ್ಟಿಗಳು ನೆರೆದುದು—ಕಿರುಜಟ್ಟಿಗಳ ನಿಲುವಿನ ವರ್ಣನೆ—ಚಾಣೂರಮುಷ್ಟಿಕರ ವರ್ಣನೆ. 109

ಹರಿಬಲರ ಬಾಹಾಸ್ಫಾಲನರವದಿಂದುಂಟಾದ ಕಾರ್ಯಗಳು—ಚಾಣೂರಮುಷ್ಟಿಕರು ಹರಿಬಲರನ್ನು ಕೆಣಕಿದುದು—ಹರಿಬಲರೊಡನೆ ಕ್ರಮವಾಗಿ ಚಾಣೂರ ಮುಷ್ಟಿಕರು ಯುದ್ಧ ಮಾಡತೊಡಗಿದುದು ... .... .... 110

ಹರಿಚಾಣೂರರ ಯುದ್ಧದ ವರ್ಣನೆ ಮತ್ತು ಹಲಧರ ಮುಷ್ಟಿಕರ ಯುದ್ಧದ ವರ್ಣನೆ .... ... .... 111

ಶ್ರೀ ಕೃಷ್ಣನು ಚಾಣೂರಮಲ್ಲನನ್ನು ಕೊಂದುದು .... 112

ಬಲರಾಮನು ಮುಷ್ಟಿಕನನ್ನು ಕೊಂದುದು—ಮಿಕ್ಕ ಮಲ್ಲರನ್ನು ಶ್ರೀ ಕೃಷ್ಣನು ಕೊಂದುದು—ಅಕ್ರೂರನು ಮಲ್ಲಪಡೆಯನ್ನು ಕೊಂದ ಹರಿಬಲರನ್ನು ನೋಡಿ ನುಡಿದುದು .... .... 113

ಪುರಜನರು ಹರಿಬಲರನ್ನು ಕೊಂಡಾಡಿದುದು—ಶ್ರೀ ಕೃಷ್ಣನು ರಾಮನೊಡನೆ ಕಂಸನ ಇದಿರಾಗಿ ನಡೆದು ತಮಂಗದಗ್ರವನ್ನು ಕಂಡು ಬೆರಗಾದುದು—ಆ ತಮಂಗದ ಅಗ್ರದಲ್ಲಿದ್ದ ಕಂಸನ ದುಸ್ಸ್ಥಿತಿಯನ್ನು ಶ್ರೀಕೃಷ್ಣನು ನೋಡಿದುದು—ಶ್ರೀಕೃಷ್ಣನು ತಮಂಗದ ಮೇಲಿದ್ದ ಕಂಸನನ್ನು ಜರೆಯಲು ಅವನು ಕೋಪಗೊಂಡುದು .... .. .... 114

ಕೋಪಿಸಿಕೊಂಡ ಕಂಸನು ತನ್ನ ಪರಿವಾರಕ್ಕೆ ನೇಮವನ್ನು ಕೊಡಲು ಅವರು ಹರಿಯನ್ನು ಮುತ್ತಿದುದು—ಶ್ರೀಕೃಷ್ಣನು ಕಂಸನೊಡನೆ ಮಾತಾಡಿದುದು .... .... .... 115

ಶ್ರೀಕೃಷ್ಣನು ತಮಂಗಕ್ಕೆ ನೆಗೆದು ಅಲ್ಲಿದ್ದ ಕಂಸನನ್ನು ಕೆಳಗೆಕೆಡಹಿ ತುಳಿದು ಕೊಂದುದು—ಬಿದ್ದ ಕಂಸನ ವರ್ಣನೆ .... 116

ಕಂಸನು ಸಾಯಲು ಇತರರು ಮಾಡಿದ ಕೆಲಸಗಳು .... 117

ಶ್ರೀಕೃಷ್ಣನು ಓಲಗಶಾಲೆಗೈತಂದು ಬಲರಾಮನನ್ನು ಉಪಚರಿಸಿದುದು—ಕಂಸಸತಿಯರ ಪ್ರಲಾಪದ ವರ್ಣನೆ, ಸೂರ್ಯಾಸ್ತ ವರ್ಣನೆ ಮತ್ತು ಅಕ್ರೂರನು ಇದ್ದ ರೀತಿ .... .... 118

ವಿಷಯಗಳು ಪುಟ

೮ನೆಯ ಸಂಧಿ.—

ಎಂಟನೆಯಸಂಧಿಯ ಸೂಚನೆ—ಪ್ರಾತಃಕಾಲದ ವರ್ಣನೆ ಮತ್ತು ಅಕ್ರೂರನು ಶ್ರೀಕೃಷ್ಣನನ್ನು ವಂದಿಸಿದುದು—ಶ್ರೀಕೃಷ್ಣನು ಅಕ್ರೂರನನ್ನು ಆದರಿಸಿ ಕೇಳಲು ಆತನು ಶ್ರೀಕೃಷ್ಣನೊಡನೆ ಹೇಳಿದುದು .... .... .... 119

ಶ್ರೀಕೃಷ್ಣನು ಅಕ್ರೂರನಿಗೆ ನಿರೂಪಿಸಿದುದು—ಅಕ್ರೂರನು ಉಗ್ರಸೇನನನ್ನು ಕರೆದುಕೊಂಡು ಬಂದು ಶ್ರೀಕೃಷ್ಣನನ್ನು ಕಾಣಿಸಿದುದು—ಶ್ರೀಕೃಷ್ಣನು ಉಗ್ರಸೇನನಿಗೆ ರಾಜ್ಯವನ್ನು ಕೊಟ್ಟು ವಸುದೇವನ ಮನೆಗೆ ಬಂದುದು .... .... 120

ರಾಮಕೃಷ್ಣರು ವಸುದೇವದೇವಕಿಯರಿಗೆ ವಂದಿಸಿದುದು—ಶ್ರೀಕೃಷ್ಣನು ದೇವಕಿಯೊಡನೆ ಮಾತಾಡಿದುದು .... .... 121

ದೇವಕಿಯು ರಾಮಕೃಷ್ಣರನ್ನು ನೋಡಿ ಸಂತೋಷಪಟ್ಟುದುದು—ದೇವಕಿಯ ಸಂತೋಷವನ್ನು ನೋಡಿ ವಸುದೇವನು ಸುಮ್ಮಾನದಿಂದ ಶ್ರೀಕೃಷ್ಣನೊಡನೆ ಹೇಳ್ದುದು .... .... 122

ವಸುದೇವನು ಶ್ರೀ ಕೃಷ್ಣ ಗೋಪಾಲಬೃಂದ ನಂದಪುತ್ರ, ನಂದಗೋಪರನ್ನು ಮನ್ನಿಸಿ ಹರ್ಷದಿಂದಿರ್ದುದು—ಚಂದ್ರೋದಯದವರ್ಣನೆ 123

ಅಕ್ರೂರನು ಶ್ರೀಕೃಷ್ಣನಿಗೆ ವಿಜ್ಞಾಪಿಸಿದುದು—ಶ್ರೀ ಕೃಷ್ಣನು ಅಕ್ರೂರನೊಡನೆ ನಡೆದುದು .... .... .... 124

ಶ್ರೀಕೃಷ್ಣನ ಅಕ್ರೂರಗೃಹಾಗಮನದ ವರ್ಣನೆ—ಶ್ರೀ ಕೃಷ್ಣನು ಅಕ್ರೂರನ ಮನೆಯ ಬಾಗಿಲಿಗೆ ಬರಲು ಆ ಮನೆಯ ಮುತ್ತೈದೆಯರು ಆರತಿಯೆತ್ತಿದುದು—ಅಕ್ರೂರನು ಶ್ರೀ ಕೃಷ್ಣನನ್ನು ಸ್ತುತಿಸಿದುದು .... .... .... 125

ಶ್ರೀಕೃಷ್ಣಾಕ್ರೂರರ ಸಲ್ಲಾಪದ ವರ್ಣನೆ—ಅಕ್ರೂರಪತ್ನಿಯು ಶ್ರೀ ಕೃಷ್ಣಾದಿಗಳನ್ನು ಆದರಿಸಿದುದು .... .... 126

ಅಕ್ರೂರನು ಶ್ರೀಕೃಷ್ಣನನ್ನು ಮನೆಯೊಳಗೆ ಕರೆದುಕೊಂಡು ಬಂದುದು—ಅಕ್ರೂರನ ಪತ್ನಿಯು ಶ್ರೀಕೃಷ್ಣನ ಉಪಚಾರಕ್ಕೆ ತಕ್ಕವಸ್ತುಗಳನ್ನು ಸಿದ್ಧಪಡಿಸಿ ಕೃಷ್ಣಾಗಮನವನ್ನು ನಿರೀಕ್ಷಿಸುತ್ತಿರ್ದುದು .... .... .... 127

ಶ್ರೀಕೃಷ್ಣನು ಅಕ್ರೂರನ ಮನೆಯೊಳಗೆ ಸಿದ್ಧಪಡಿಸಿದ್ದ ಸಿಂಹಾಸನ

ವಿಷಯಗಳು ಪುಟ

ವನ್ನೇರಿದುದು—ಅಕ್ರೂರನು ಶ್ರೀಕೃಷ್ಣಪರಿವಾರವನ್ನು ಸತ್ಕರಿಸಿ ಕೃಷ್ಣಾಂಘ್ರಿಯನ್ನು ಪೂಜಿಸುತ್ತಾ ಸ್ತೋತ್ರ ಮಾಡಿದುದು. 128

ಶ್ರೀಕೃಷ್ಣನು ಅಕ್ರೂರನನ್ನು ಹೊಗಳಿದುದು—ಅಕ್ರೂರನು ಶ್ರೀಕೃಷ್ಣನನ್ನು ಆರೋಗಣೆಗೆ ಕರೆದು ಸಪರಿವಾರನಾದ ಅವನನ್ನು ಭೋಜನಮಾಡಿಸುತ್ತಾ ಸ್ತುತಿಸಿದುದು—ಶ್ರೀಕೃಷ್ಣನು ಅಕ್ರೂರನೊಡನೆ ಸರಸಸಲ್ಲಾಪವನ್ನಾಡುತ್ತಾ ಭೋಜನಮಾಡಿಬಂದು ರತ್ನಖಚಿತಾಸನವನ್ನೇರಿ ತಾಂಬೂಲಾದಿಗಳನ್ನು ತೆಗೆದುಕೊಂಡುದುದು .... .... .... 131

ಶ್ರೀಕೃಷ್ಣನು ಉಗ್ರಸೇನನಿಗೆ ಕರ್ತವ್ಯೋಪದೇಶವನ್ನು ಮಾಡಿ ಮನೆಗೆ ಅವನನ್ನು ಕಳುಹಿದುದು .... .... 134

ಶ್ರೀಕೃಷ್ಣನು ಅಕ್ರೂರನಿಗೆ ಅಭಯವನ್ನು ಕೊಟ್ಟು ಗೋಕುಲಕ್ಕೆ ಪ್ರಯಾಣಮಾಡಿದುದು .... .... .... 136

# ಶುದ್ಧಿ ಪತ್ರಿಕೆ.

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
| --- | --- | --- | --- |
| 29 | 8 | ಯ | ಯು |
| ,, | 9 | 1ಕೇಳುವೊಡೆ | 1ಕೇಳುವೊಡೆ |
| 37 | 3 | ರೂವಿಸಿ | ರೂಪಿಸಿ |
| 39 | 9 | 2ದಿರು2 ನೈಜರೂಪದಲಿ | 2ದಿರು ನೈಜರೂಪದಲಿ2 |
| 45 | 25 | ಈ ಪದ್ಯಗಳು | † ಈ ಪದ್ಯವು |
| 46 | 23 | ಈ ಪದ್ಯವು | † ಈ ಪದ್ಯವು |
| 51 | 3 | ಸ್ಮರಿಪೆನು* | ಸ್ಮರಿಪೆನು |
| 52 | 10 | ರಂಜಸಿ | ರಂಜಿಸಿ |
| 59 | 8 | ತೀರದಲಿ1 | ತೀರದಲಿ |
| 104 | 26 | ಕೆದುಗಳ | ಕ್ಮೆದುಗಳ |
| 114 | 26 | ವಿಗಡ | 4ವಿಗಡ |
| 115 | 12 | ತನ್ನಯು | ತನ್ನಯು |
| 121 | 26 | ಒ.* | ಒ. |
| 124 | 4 | ನಿಕಗೆ2 | 2ನಿಕಗೆ2 |
| 126 | 8 | 1ಹಿರಿಯುತುಂ | 1ಹಿರಿಯುರುಂ1 |
| 130 | 8 | ಸಂದೆರಂಗಿನ | 5ಸಂದೆರಂಗಿನ |

ಶ್ರೀಃ

# ಅಕ್ರೂರಚರಿತ್ರೆ.

## ಮೊದಲನೆಯ ಸಂಧಿ.

ಸೂ|| ಶ್ರೀಯುಥಸನವತರಿಸಿ ದೈತ್ಯನಿ
ಕಾಯುವನು ಸಂಹರಿಸಿ ದಿವಿಜರ
ಕಾಯಿದಕ್ರೂರಂಗೆ ತನ್ನಯ ನಿಜವ ತೋರಿಸಿದ ||

ಶ್ರೀರಮಣನಮೃತಾಬ್ಧಿಮಂದಿರ
ನೀರಜಾಸನಜನಕ ಜಗದಾ
ಧಾರ ಫಣಿಪರ್ಯಂಕನಹಿರಿಪುಗಮನನಸುರಹರ |
ಧಾರಿಣೀಧರ ವರಸುದರ್ಶನ
ವಾರಿರುಹಕೌಮೋದಕೀಧರ
ನಾರದಪ್ರಿಯ ಸಲಹುಗೆಮ್ಮ ಮನೋನುರಾಗದಲಿ || ೧

ಸೋಮ ಸೋಮಕಲಾವಿಭೂಷಣ
ಸೋಮಸಖ ಸೋಮಾಶನಾರ್ಚಿತ
ಸೋಮಮಯ ನುತ ಪೂತ ಪಾವಕನೇತ್ರ ಸುಚರಿತ್ರ ||
ಕಾಮಹರ ಕಾಮಿತಫಲಪ್ರದ
ಸೋಮನಘವನದಾವ ಮಂಗಳ
ನಾಮ ಶಂಕರ ಸಲಹುಗೆಮ್ಮ ಮನೋನುರಾಗದಲಿ || ೨

ಪರಶುಧರ ಫಣಿರತ್ನಭೂಷಣ
ಕರಿವದನ ಕಮನೀಯಲಕ್ಷಣ
ವರದಪಾಶಾಂಕುಶಕಲಡ್ಡುಗದಿಂದೆ ಕರವೆಸೆವ |

ದುರಿತತರುನಿರ್ಮೂಲ ನಿಸ್ನಯು
ಶರಣರಘಸಂಹಾರ ಪುರಹರ
ವರತನುಜ ಗಣನಾಥ ಕರುಣಿಸು ಮತಿಗೆ ಮಂಗಳವ ॥ ೩

ತಾಮರಸಭವನರಸಿ ಭಾರತಿ
ಸಾಮಜಾನನ ವಿಷಮಶರ ನಿ
ಸ್ಸೀಮವೇದವ್ಯಾಸಮುನಿ ಸುರಗುರುಗಳೊಲವಿನಲಿ ।
ರಾಮಣೀಯಕಮತಿಗೆ ನಯಸುಖ
ಕಾಮಿತಾರ್ಥಜ್ಞಾನಸರಸೋ
ದ್ದಾಮಚತುರೋಕ್ತಿಯನು ನೀಡುಗುಪಕ್ರಮಂಗಳಲಿ ॥ ೪

ಕವಿಕುಮಾರವ್ಯಾಸರಾಯನ
ಕವಿತೆಜಾಣರ ಸೊಬಗು ರಸ
ಭಾವವನು [1] ಸದಲಂಕೃತಿ [1]ಯನತಿಮಧುರೋಕ್ತಿಕೌಶಲವ ।
ಸವಿನುಡಿಯ ಗಮಕಿಗಳ [2] ಚರಣಾ
ಬ್ಜವನು ಪಿಡಿ [2] ದಕ್ರೂರಚರಿತೆಯ
[3] ವಿವರಿಸಿದ [3] ನಾಸೋಮನಾಥಕವೀಂದ್ರನೊಲವಿನಲಿ ॥ ೫

ಧರೆಯರಿಯಲಾಕೃಷ್ಣಚರಿತದ
ಶರಧಿಯೊಳಗಕ್ರೂರಚರಿತೆಯ
ನೊರೆವೆನಚ್ಯುತಭಕ್ತರೆಲ್ಲರ ಚರಣಕಭಿನಮಿಸಿ ।
ಗರುವರತಿಕೋವಿದರು ಹಿರಿಯರು
ಸರಸರಿದನಾದರಿಸಿ ತಪ್ಪನು
ಪರಿಹರಿಸಿ ತಿದ್ದುವುದು ಮೆರೆವುದು ನಿಮ್ಮ ಸದ್ಗುಣವ ॥ ೬

ಕೃತಿಗೆ ಮೊದಲೆಂತೆನೆ ಸುಧಾಬ್ಧಿ
ಸ್ಥಿತಜಗದ್ಗುರು ವಿಷ್ಣು ಲೋಕ
ಸ್ಥಿತಿಗತಿಯನಾರೈದು ನಡಿಸುವ ದಿವ್ಯಮೂರ್ತಿಯಲಿ ।

---

1 ಪದಲಾಂಕೃತಿ, ಓ. 2 ಚರಣಾಂಬುರುಹವಿಡಿ, ಓ. 3 ವಿರಚಿಸಿದ, ಓ.

ಕ್ರತುಗಳಿಂದೋಲೈಸಿಕೊಳುತಹಿ
ಪತಿಯ ಮೇಲೊಲವಿಂದೆ ಪವಡಿಸಿ
ಸತಿಸಹಿತವೀಪರಿಯ ಜಗವನು ಪಾಲಿಸುತಲಿರ್ದ || ೭

ಕೇಶಿ[1] ಮೊದಲಾದಸುರರವನಿಯ
ಬೇಸರಿಸಿ ಮಗುಳ್ದು ಬಂದಾ
ವಾಸದಲಿ ದಳ್ದುಳಿಸಿ ಶಕ್ರನ ಮುರಿದು ಸುಮನಸರ |
ದೇಶದಿಂದರೆಯಟ್ಟೆ ದೈವ
ದ್ವೇಷವನು ನೆರೆ ಬಲಿದು [2]ಹೆಚ್ಚಿಕ[2]
ರಾಸಿಗಳ ಝಳಪಿಸುತೆ [3]ಪದ[3]ವಿಡುತಿರ್ದರವನಿಯಲಿ || ೮

ಭೂವನಿತೆ ದಾನವರ ಭಾರಕೆ
ಹೇವರಿಸಿ ಬ್ರಹ್ಮಂಗೆ ಮೊರೆಯಿಡ
ಲಾವನಜಭವನವಮೃತಜಲಧಿಗೆ ಸುರರುಸಹಿತೈದಿ |
ಶ್ರೀವರಂಗರಿಪಿದೊಡೆ ದೇವರ
ದೇವನಭಯವ ಕೊಟ್ಟು ಬಂದಪೆ
ನೀವು ಧರಣಿಯಲು[illegible] ಹೋಗಿರಿಯೆನುತೆ ನೇಮಿಸಿದ || ೯

ಬಳಿಕವಾತ್ರಿದಿವೌಕಸರು ಭೂ
ವಳಯದಲಿ ಗೋಪಾಲವೇಷಗ
ಳೊಳಿವರು ಸಲೆ ನಿಖಿಳನಿಗಮಪ್ರತತಿ ಪಶುವಾಗಿ |
ಸುಳಿದುವದಿತಿಕಶ್ಯಪರವನಿ
ಯೊಳಗುದಿಸಿದರು ಯಾದವರ ಕುಲ
ದೊಳಗೆ ವಸುದೇವೆಂಬ ದೇವಕಿಯೆಂಬ ಪೆಸರಿನಲಿ || ೧೦

ತಂದೆಯನು ಸೆರೆಗುಯ್ದು ಸೋದರ
ವೃಂದವನು ಕಡೆಗಣಿಸಿ ದೈತ್ಯರ
ಬಂಧುಕೃತ್ಯವ ಬಲಿದು ಧರಣಿಯೊಳುಳ್ಳ ಭೂಭುಜರ |

---

1 ಕಂಸ, ಬ. 2 ಹೆಚ್ಚಿದ, ಬ. 3 ಮದ, ಬ.

ಬಂದಿವಿಡಿದಚ್ಯುತವಿರೋಧದಿ
ಮುಂದುಗಾಣದೆ ದೇವಕಿಗೆ ಹರಿ
ಬಂದು ಪುಟ್ಟುವ ಕೇಳಿ ಶಂಕಿಸುತಿರ್ದನಾ ಕಂಸ || ೧೧

ಬಳಿಕ ಹರಿ ಶೇಷಾಹಿಸಹಿತ.
ಗ್ಗಳೆಯ ಮಾಯೆಯ ಕೂಡಿಕೊಂಡಿಳೆ
ಗೊಲಿದು ಬಂದನು ಕಂಸನೊಡಹುಟ್ಟಿದಳ ಜಠರದಲಿ |
ಬಳೆಯುತಿರ್ದನು ಮುನ್ನ ಬಲನಾ
ಲಲನೆಯುದರದಲಂದು ರೋಹಿಣಿ
ಗೊಲಿದು ಹುಟ್ಟಲು ಮೇಲೆ ಹರಿಯವತರಿಸಿದನು ಬಳಿಕ || ೧೨

ಯದುಕುಲದ ವಸುದೇವ [1] ದೇವಕಿ [1]
ಗುದಿಸಿ ತಾಯ್ತಂದೆಗಳ ದುಃಖೋ
ದಧಿಯ ಬತ್ತಿಸಿ ಕಂಸನಿಕ್ಕಿದ ಬಂಧನವ ಬಿಡಿಸೆ ||
ಪುದಿದಿರುಳು ಗೋಕುಲದ ನಂದನ
ಸದನದಲಿ ನಿಜಸುತನನೊಪ್ಪಿಸಿ
ಮುದವಿಗಲು ವಸುದೇವ ಮಾಯಾದೇವಿಯಿರೆ ತಂದ || ೧೩

ಈಪರಿಯಲಾನಂದಗೃಹದಲಿ
ಶ್ರೀಪತಿಯ ಬಚ್ಚಿಟ್ಟು ಮಾಯಾ
ರೂಪಿಯಹ ದುರ್ಗಾಂಬಿಕೆಯ ಕೊಂಡುಯ್ದು ತವಕದಲಿ |
ಕಾಪಿನವರರಿಯದವೊಲಾಮಧು
ರಾಪುರಿಯ ಭವನವನು ಹೊಗೆ ನಾ
ನಾಪರಿಯಲೊದರಿದಳು ಸತಿ ಬ್ರಹ್ಮಾಂಡವೊಡೆವಂತೆ || ೧೪

---

* ಕಾ ಪುಸ್ತಕದಲ್ಲಿ ಇದೇ ಮೊದಲನೆಯ ಪದ್ಯವಾಗಿದೆ. ಸೂಚನೆಯೂ ಆದಿಯ ಹನ್ನೆರಡು ಪದ್ಯಗಳೂ ಅದರಲ್ಲಿಲ್ಲ.

1 ದೇವಂ, ಬ.

ನ್ವನಿಗಳವೆಳದು ಸು
ತ್ರಾಮರಿಪುವೈತಂದು ಶಿಶುವಿಹ
ಸೀಮೆಗೊಬ್ಬನೆ ಪೋಗಿ ಕಾಲ್ವಿಡಿದರೆಯೊಳಪ್ಪಳಿಸ ।
ಹಾ ಮರುಳೆ ಹಗೆಯುತ್ತಲೈದನೆ
ತಾಮಸದಲೇಕೆನ್ನ ಕೊಂದಪೆ
ಹಾ ಮದಾಂಧ [1] ಎನುತ್ತೊದೆದು ಹಾರಿದಳು ಗಗನಕ್ಕೆ [1] ॥ ೧೫

ಅದಕೆ ಸಿಗ್ಗಾಗುತ್ತ ಹಗೆಯನು
ಸದೆವೊಡಾವುದುಪಾಯವೆನುತುವೆ
ಮದಮುಖನು ತನ್ನಾಪ್ತರಾಕ್ಷಸಮಂತ್ರಿಗಳ ಕರಿಸಿ ।
ಉದಧಿವಳಯದಲೈದಿ ಶಿಶುವಿಹ
ಸದನದೊಳರಸಿ ಕೊಲುವುದು ವಿಹಿತ
ವಿದು ನಿಮಗೆ ನೀಂ ಹಿತವರಾದೊಡೆಯೆಂದನಾಕಂಸ ॥ ೧೬

ಇಂತು ನೇಮಿಸಿ ಕಳುಹಿ ಚಿಂತಾ
ಕ್ರಾಂತನಾದನು ಬಳಿಕವಿತ್ತಲು
ಕಂತುಪಿತನರ್ಭಕಶಿರೋಮಣಿಯಾಗಿ ಗೋಕುಲವ ।
ಸಂತಸದೊಳೊಂದಿಸುವ ನಂದನ
ಕಾಂತೆಯುತ್ಸಂಗದಲಿ ಬಳೆಯುತ
ನಂತಸಹಿತವೆ ಕೃಷ್ಣನೆಸೆದನು ಬಾಲಲೀಲೆಯಲಿ ॥ ೧೭

ಅರುಣಸರಸಿಜವನದೊಳಾಡುವ
ತರುಣಹಂಸನೊ ಮೇಣು ಗಿರಿಪರಿ
ಸರದೊಳೆಸೆವ ಮೃಗೇಂದ್ರಶಾಬವೊ ಹೂತಮಲ್ಲಿಗೆಯೊ ।
ಸುರಭಿಯಲಿ ಝೇಂಕರಿಪ ವರಷ
ಟ್ಚರಣನೋ ಗೋಕುಲದ ಸುಖದಂ
ಕುರವೊ ಬಳೆಯುತೆ ಕೃಷ್ಣನಿರ್ದನು ನಂದಭವನದಲಿ ॥ ೧೮

1 ಯೆನುತ್ತೆ ಹಾಯ್ದಳು ಗಗನಮಂಡಲಕೆ, ಬ.

ಮರಣಭಯದಲಿ ಕಂಸನಟ್ಟಿದ
ದುರುಳಪೂತನಿ ಶಕಟ ಧೇನುಕ
ತುರಗರೂಪದ ಕೇಶಿ ವತ್ಸಾಸುರ ಬಕಾಸುರರ ।
ಪರಿವಿಡಿಯಲೇ ಕೊಂದು ಗೋಪರ
ನೆರವಿಯಲಿ ನಲಿದಾಡಿ ನಂದನ
ತರುಣಿಗರ್ಭಕನೆನಿಸಿ ಪಳ್ಳಿಯೊಳಿರ್ದನಸುರಾರಿ ॥ ೧೯

ಬಾಯೊಳಗೆ ಬ್ರಹ್ಮಾಂಡಕೋಟಿಯ
ನಾಯಶೋದೆಗೆ ತೋರಿಯಾಗಳ
ಮಾಯದಿಂದವೆ ಮರಸಿ ಗಗನದ ಶಶಿಯ ಪಿಡಿವೆಂತು ।
ತಾಯಿಗೊಲವೆಂತೋರಿ ಮರವಾ
ದಾಯಮಾರ್ಜುನರಿಗೆ [1] ವಿಶಾಪವ
ನೀಯೆ ಗೋಕುಲ ಪೊಗಳೆ ಪಳ್ಳಿಯೊಳಿರ್ದನಸುರಾರಿ ॥ ೨೦

ಕಾಳಿಯನ ಶಿರದಲ್ಲಿ ಹರಿ ನಿಜ
ಲೀಲೆಯಲಿ ಕುಣಿದಾಡಿ ನವಮೇ
ಘಾಳಿಯಿಂ ಮಳೆಗರೆದ ಶಕ್ರನ ಗರ್ವವನು ಮುರಿದು ।
ತೋಳಿನಲಿ ಗೋವರ್ಧನಾದ್ರಿಯ
ನೇಳಂದಿನ ಧರಿಸಿರ್ದ ಗೋಪೀ
ಬಾಲೆಯರೊಳೊಡಗೂಡಿ ಸುಖದಿಂದಿರ್ದನಸುರಾರಿ ॥ ೨೧

ಬೊಮ್ಮ ಕರುವಿಂಡುಗಳ ಮಕ್ಕಳ
ಸುಮ್ಮನಡಗಿಸಲಿದನರಿದು ಹರಿ
ನಿರ್ಮಿಸಿದನಾಕ್ಷಣಕೆ ಪ್ರತಿವತ್ಸಗಳ ಬಾಲಕರ ।
ಬೊಮ್ಮ ಬಳಿಕಾಹರಿಯ ಮಹಿಮೆಯ
ಪೆರ್ಮೆಯರಿಯುತೆ ಬಂದು ಚರಣಕೆ
ಸುಮ್ಮನೆರಗಿದ ನುತಿಸಿ ಭಯಭಕ್ತಿಯಲಿ ಬೀಳ್ಕೊಂಡ ॥ ೨೨

---

* ಈ ಪದ್ಯವು ಕಾ ಪುಸ್ತಕದಲ್ಲಿಲ್ಲ.

[1] ದೇಯೆರ್ಭಾನರಿಗೆ. ಬ.

ಈತೆರದೊಳಚ್ಯುತನು ದೈತ್ಯ
ವ್ರಾತವನು ತವೆ ಕೊಂದು ಭುವನ
ಖ್ಯಾತಿ ಮಿಗೆ ಗೋಪಾಲವೇಷದೆ ಕೃತ್ಯಧರನಂತೆ ।
ಪ್ರೀತಿಯಿಂ ಸುರಭಿಗಳ ಕಾಯುತೆ
ನೂತನಕ್ರೀಡೆಗಳೊಳೊಪ್ಪಿಹ
ಮಾತ ಕೇಳಿದು ಕಂಸನದಟಳಿದಳುಕಿ ಚಿಂತಿಸಿದ ॥ ೨೩

* ಮೊದಲನೆಯ ಸಂಧಿ ಮುಗಿದುದು.

## ಎರಡನೆಯ ಸಂಧಿ.

ಸೂ॥ ಹರಿಯು ಕರೆ ಹೋಗೆಂದು ಕಂಸಾ
ಸುರ ನಿರೂಪಿಸಿ ಕಳುಹೆ ಮನದಲಿ
ಹರುಷ ಮಿಗಲಕ್ರೂರ ಬಂದನು ಕಂಡನಚ್ಯುತನ ॥

ಇದು ಮಹಾಪಾತಕದ ನೆತ್ತಿಯು
ಸದೆವ ದಡಿಯಿದು ಸಕಲಸುಕೃತದ
ಸದನವಿಹಪರಸುಖದ ಫಲಸಾರಕ್ಕೆ ಹೊಣೆಕಾರ ।
ಚದುರಿನಿಕ್ಕೆ ಸಭೀಷ್ಟಭಾವಗ
ಳೊದಗು ನೀತಿಯ ಕೂಟ ಬಹುಳಾ
ಭ್ಯುದಯಸೂಚಕ ಕೇಳ್ ಸಭೆಗಕ್ರೂರವರಚರಿತೆ ॥ ೧

* ಓ. ಪುಸ್ತಕದಲ್ಲಿ ಮೊದಲನೆಯ ಸಂಧಿ ಇಲ್ಲಿಗೆ ಮುಗಿದಿದೆ. ಕಾ ಪುಸ್ತಕದಲ್ಲಿ ಮುಗಿದಿಲ್ಲ. ಓ ದಲ್ಲಿರುವ ಮೊದಲಿನ ಎರಡು ಸಂಧಿಗಳೂ ಸೇರಿ ಕಾ ದಲ್ಲಿ ಮೊದಲನೆಯ ಸಂಧಿಯಾಗಿದೆ. ಆದುದರಿಂದ ಓ ದಲ್ಲಿ ಒಟ್ಟು ಎಂಟು ಸಂಧಿಗಳೂ ಕಾ ದಲ್ಲಿ ಏಳೇ ಸಂಧಿಗಳೂ ಇವೆ.

ತನಗೆ ಹಗೆಯಹ ದೇವಕೀನಂ
ದನನ ಭುಜಸಾಹಸವ ಕೇಳಿದು
ವೊನೆಯಲಗು ಕಿಬ್ಬಸುರಿನಲಿ ಮಸೆದೋರಿದಂದದಲಿ ।
ತನುವನಹಿ ಪಿಡಿದಂತೆ ಚಿಂತಾ
ವನಧಿಯಲಿ ಮನಮುಳುಗಿ ನಾರದ
ಮುನಿಯ ನುಡಿ ತಲೆದಾಗಿತೆನುತಳವಳಿದನಾಕಂಸ ॥ ೨

ಮದವಳಿದ ಗಜದಂತೆ ಬಲುಪಿಂ
ಗಿದ ಮೃಗಾಧಿಪನಂತೆ ಕಡುಪಾ
ರಿದ ದಿವಾಕರನಂತೆ ಪಲುಗಳು ಕಳೆದ ಫಣಿಯಂತೆ ।
ಸುದತಿಯರ ಖತಿಯಾದ ನರನಂ
ತಧಿಕಚಿಂತೆಯ ತಾಳ್ದು ನಾನಾ
ವಿಧದುಪಾಯವನೆಣಿಸುತೋಲಗಶಾಲೆಗೈತಂದ ॥ ೩

ಕರಿಸಿದನು ತನ್ನಾಪ್ತದೈತ್ಯೇ
ಶ್ವರರನಕ್ರೂರಾದಿಯಾದವ
ಪರಿಜನವನಖಿಳಪ್ರಧಾನರ ನೀತಿಕೋವಿದರ ।
ಸರಸಕವಿಗಳ ಸೂರಿಗಳನಾ
ಪುರದ ಹಿರಿಯರ ದುರ್ಗಪತಿಗಳ
ಕರಿತುರಗಶಿಕ್ಷಕರ ಸಜ್ಜನವಾಸಿನೀಜನರ ॥ ೪

ಈ ಪರಿಯಲೆಲ್ಲರ ಕರಿಸಿ ಮಧು
ರಾಪುರಾಧಿಪನಾಸನದೆ ಪರಿ
ತಾಪದಲಿ ಪರರರಿಯದಂತಿರೆ ಬಹಳದುಗುಡದಲಿ ।
ಕೋಪಿಸುತೆ ನಸುನಗುತೆ ಹೆದರುತೆ
ಭೂಪಲಕ್ಷಣವಡಗೆ ಸಭೆಯಲಿ
ಕಾಪುವಡೆದವನಂತೆ ಚಿಂತಿಸುತಿರ್ದನಾಕಂಸ ॥ ೫

ಅಸುರನೋಲಗಶಾಲೆಯನು ವ
ರ್ಣಿಸುವೊಡೆನಗಳವಲ್ಲ ಶಕ್ರನ
ಶಶಿಧರನ ಕಮಲಜನ ಲಕ್ಷ್ಮೀರಮಣನೋಲಗವ ।
ಮಸುಳಿಸುವ ನಿಂದಿಸುವ ಮರುಳಾ
ಡಿಸುವ ನಗುವ ವಿಚಿತ್ರವಿಭವದ
ಲೆಸೆದು ಗರ್ಜಿಸುತಿಹುದು ಹುಲಿ ನೆಲಸಿರ್ದ ಗುಹೆಯಂತೆ ॥ ೬

ಅವನ ಸಭೆ ಗರಳಾಮೃತಂಗಳ
ಸವಿಯವೊಲ್ನರಸಿಂಹನಿಕರದ
ಗವಿಯವೊಲ್ನವಚೂತ ಬೊಬ್ಬುಲಿ ಬೆಳವ ವನದಂತೆ ।
ದಿವಿಜರಿಪುಗಳು ಯಾದವರು ಭೂ
ದಿವಿಜಕುಜನರು ಜಾತಿಮೂರ್ಖರು
ಕವಿಗಳಂದೊಪ್ಪಿರೆ ಸಖೇದಪ್ರೀತಿಮಯವಾಯ್ತು ॥ ೭

ಆಸಭೆಯಲಿಕ್ರೂರನೆಂಬ ಮ
ಹಾಸಚಿವನತಿಹಿತನು ಶುಚಿ ವಿ
ಶ್ವಾಸವಿನಯವಿಭೂಷನಗಣಿತನೀತಿಯೊಳು ನಿಪುಣ ।
ದೋಷರಹಿತನು ಸುಬಲ [1] ಸುತ [1] ಧರ
ಣೀಶ ಕೆಲದಲಭಿಜ್ಞನಿರೆ ಕಂ
ಡಾಸುರಾಧಿಪ ಕಂಸ ನುಡಿಸಿದನುಚಿತವಚನದಲಿ ॥ ೮

ಎಲೆ ಯದೂತ್ತಮ ನಮ್ಮ ಹಗೆ ಗೋ
ಕುಲದೊಳಚ್ಯುತನಾಗಿ ನಂದನ
ನಿಲಯದಲಿ ಬಳೆದೊಲಿದು ಮಾನುಷಲೀಲೆಯನು ನಟಿಸಿ ।
ಬಲುಗಡಿಯ ರಕ್ಕಸರನೊಬ್ಬರ
ನುಳಿಯಲೀಯದೆ ಕೊಂದ ನಾವಿ
ನ್ನುಳಿವುಪಾಯವ [2] ದೇನೆನುತ್ತ [2] ಮುರಾರಿ ಚಿಂತಿಸಿದ ॥ ೯

1 ಸುತ, ಬ. ಕಾ. 2 ಕಾಣೆನೆಂದ, ಕಾ.

ಏಕೆ ಜೀಯ ವೃಥಾ ಮನೋವ್ಯಥೆ
ಸಾಕು ಬಿಡುಬಿಡು ಧರೆಯ ಭಾರವ
ನೂಕಲೋಸುಗ ಬಂದು ಹರಿ ಕೃಷ್ಣಾಭಿಧಾನದಲಿ ।
ಗೋಕುಲದೊಳವತರಿಸಿ ದೈತ್ಯಾ
ನೀಕವನು ಸವರಿದನು ನೀ ಮುನಿ
ದಾಕುವೂರನ ಕೂಡೆ ಸೆಣಸುವುದುಚಿತವಲ್ಲೆಂದ ॥ ೧೦

ಲೇಸನಾಡಿದೆ ದಾನಪತಿ ವಿ
ಶ್ವಾಸಿ ನೀನೆಂದೆನ್ನ ಚಿತ್ತ
ಕ್ಲೇಶವನು ವಿಸ್ತರಿಸಿ ನುಡಿದೊಡೆ ಸಫಲವಾಯ್ತೆನಗೆ ।
ವಾಸುದೇವನ ಮೇಲೆ ನಿನಗಭಿ
ಲಾಷೆಯುಂಟೆಂದರಿಯೆವೈ ನಾ
ವೈಸಲೇ ಕಡುಮೂರ್ಖರೆಂದಮುರಾರಿ ಖತಿಗೊಂಡ ॥ ೧೧

ಎನಲು ನಗುತಕ್ರೂರ ನುಡಿದನು
ದನುಜಪತಿ ಚಿತ್ತೈಸು ನಾನಿ
ನ್ನನುವನರಿವೊಡೆ ನುಡಿದೆ ಹರಿಬಗೆ ಚಿಂತೆ ನಿನಗೇಕೆ ।
ಮನುಜ [1] ಗಿನುಜರ [1] ಪಾಡೆ ವಾಸವ
ಧನದರನು ಬೆದರಿಸುವ ನಿನಗೀ
ಬಿನುಗುಗಳ ಹಗೆಮಾಡಿ ನುಡಿವುದು ನೀತಿಯಲ್ಲೆಂದ ॥ ೧೨

ಎಂದೊಡೆಂದನು ಕಂಸ ಹಗೆ ಬಡ
ವೆಂದಹಂಕರಿಸುವರೆ ನಾನಾ
ಛಂದದಲಿ ಜಯಿಸುವುದು ಸನ್ಮತ ರಾಜನೀತಿಯಲಿ ।
ಬಂಧುತನದಲಿ ದಾನದಲಿ ಬಲು
ಪಿಂದೆ ಕುಹಕೋಪಾಯದಲಿ ಕೊಲು
ವೆಂದವನು ಪೇಳನಲು ನಗುತಕ್ರೂರನಿಂತೆಂದ ॥ ೧೩

1 ದಿವಿಜರ, ಬ,

ನೀನರಿಯದಿಹ ನೀತಿಗಳನ
ಜ್ಞಾನಿಗಳು ನಾವೆತ್ತ ಬಲ್ಲೆವು
ಭಾನುವಿನ ಸಾಮರ್ಥ್ಯವುಂಟೇ ಮಿಂಚುಬುಳುವಿಂಗೆ ।
ಏನನಾದೊಡಮರಿಪು ಕೈಕೊಂ
ಡಾನದನು ಸಲೆ ಮಾಳ್ಪೆನೆಂದಾ
ದಾನಪತಿ ಕೈಮುಗಿದು ನುಡಿದೊಡೆ ಕಂಸನಿಂತೆಂದ ॥ ೧೪

ಹಗೆ ಹಸುಳೆಯೆಂದುಳುಹಲಾಗದು
ಹಗೆ ಶರಣುಹೊಗೆ ನಂಬಲಾಗದು
ಹಗೆ ಹಿತವನನುಕರಿಸಿ ಮನ್ನಿಸೆ ಹಿಗ್ಗಿ ಮೈಮರೆದು ।
ಹಗೆಯಲೆಚ್ಚರುಗುಂದಲಾಗದು
ಹಗೆಯ [1] ಹಿತವರ ನುಡಿಸ [1] ಲಾಗದು
ಹಗೆ ತನಗೆ ಮರಣಾಂತವೆಲೆ ಅಕ್ರೂರ ಕೇಳೆಂದ ॥ ೧೫

ತನ್ನ ಕಾರ್ಯಾಧೀನದಿಂ ಹಗೆ
ಮನ್ನಿಸುವನೊಳಪೊಕ್ಕು ತನ್ನಯ
ಕನ್ನೆಯರನೊಲಿದೀವೆನೊಡನುಂಡತಿಹಿತವನೆನಿಸಿ ।
ಮುನ್ನ ಮಾಡಿದ ವೈರಬಂಧದ
ಬನ್ನವನು ನೆನೆನೆನೆದು ಜೀವಕೆ
ನನ್ನಿಯಂ ಕಂಡಲ್ಲದಿರನಕ್ರೂರ ಕೇಳೆಂದ ॥ ೧೬

ಹಗೆಯನುರಗನ ಜಾರವನಿತೆಯ
ನಗ್ಗಡುಮಕ್ಕಳನಲೆವ ರೋಗವ
ಜಗಳವಾಡುವ ನೆರೆಯ ಮನ್ನಿಸಲರಿಯದವನಿಪರ ।
ತಗರ ನೆರವಿಯ ಸೋರುತಿಹಮಾ
ಳಿಗೆಯ ನಂಬಿದ ಮೂಢನಿಕರಕೆ
ವಿಗಡ ತಪ್ಪದು ಕೆಲವುದಿನಕಕ್ರೂರ ಕೇಳೆಂದ ॥ ೧೭

1 ನೇಹವ ಬಳೆಸ, ಖ.

ಎನಗೆ ಹಗೆ ವಸುದೇವಸುತನಾ
ತನವಿನಾಶವನೈದಿಸುವುದೊಂ
ದನುವ ನಿಶ್ಚೈಸಿದೊಡೆ ಬಿಡುವುದು ಚಿಂತೆಯಿಂದೆನಗೆ ।
ಮನವ ವಂಚಿಸಬೇಡ ನುಡಿಯೆನೆ
ದನುಜನುಗ್ರತೆಗಂಡು ಕೃಷ್ಣನ
ಘನತೆಯನು ನೆನೆನೆನೆದು ಸೈವೆರಗಾದನಕ್ರೂರ ॥ ೧೮

ಈತನಿಂಗಿತವರಿತು ದೈತ್ಯ
ವ್ರಾತಪರಿವೃಢ ಕಂಸ ನುಡಿದನು
ಭೀತನೀನಚ್ಯುತನ ದೆಸೆಗದ ಬಲ್ಲೆ ನಾ ಮುಳಿದು ।
ಆತುರದಿ ಸೆಣಸುವೊಡೆ ಮಿಗೆ [1] ನವ
ನೀತತಸ್ಕರ ನೆನಗಿದಿರೆ ನಯ
ನೀತಿಯಿಂದಾದರಿಸಿ ಕರೆಯೆಂದಸುರ ನೇಮಿಸಿದ ॥ ೧೯

ಅದಕೆ ಜೀಯ ಹಸಾದವೆಂದನು
ಯದುಕುಲೋತ್ತಮದಾನಪತಿ ಹರಿ
ಪದವ ಕಾಣ್ಬ ನಿಯೋಗವಾಯ್ತೆಂದಧಿಕಹರ್ಷದಲಿ ।
ಚದುರಿನಿಂದವರೊಡನೆ ನುಡಿವುದು
ಮಧುರೆಯಲಿ ಧನುಪರ್ವಸಂಭ್ರಮ
ವದಕೆ ಕೃಷ್ಣನ ಕರೆಯಲಟ್ಟಿದರೆಂದು ಹೇಳೆಂದ ॥ ೨೦

ಎಂದು ನೇಮಿಸಿ ರಥವ ಕೊಟ್ಟೊಲ
ವಿಂದೆ ಕಳುಹಿದನತ್ತಲಾ ಅರ
ವಿಂದಸಖನಸ್ತಮಿಸಿದನು ಕೋಡಗಲೆ ಚಕ್ರಯುಗ ।
ಕಂದಿದುವು ತಾವರೆಗಳಧಿಕತ
ಮೋಂಧ ಹೆಚ್ಚಿತು ಜಾರೆಯರು ನಲ
ವಿಂದೆ ಹೆಚ್ಚಿದರೆಸೆದುವುಡುನಿಕುರುಂಬವಭ್ರದಲಿ ॥ ೨೧

1 ಆ ತರುಣನೊಳು ಸೆಣಸುವೊಡೆ, ಕಾ.

ದೀಪ ಮೆರೆದುವು ನಿಳಯನಿಳಯದೊ
ಳಾಪತಂಗನ ದೂತರಂತಿರೆ
ತಾಪಸರು ನಿಜಕೃತ್ಯದಲಿ ನಿಶ್ಚಿಂತಮನರಾಗಿ ।
ಶ್ರೀಪತಿಯ ಭಜಿಸಿದರು ಧರಣಿಯ
ತಾಪವೆಡಗಲು ಚಂದ್ರನುದಯಿಸಿ
ಲೋಪಿಸಿದನಾತಮವನುರೆ ಬಿಳಿದಾಯ್ತು ಭುವನತಳ ॥ ೨೨

ಅಂದಿನಿರುಳಕ್ರೂರ ತನ್ನಯ
ಮಂದಿರಕೆ ನಡೆತಂದು ಪರಮಾ
ನಂದಮಯಶರಧಿಯಲಿ ಮುಳುಗುತೆ ಶಿರವನೊಲೆದೊಲೆದು ।
ಇಂದು ನಾ ಸುಖಿಯಾದೆನಾಗೋ
ವಿಂದನನು ಕಣ್ಣಾರೆ ಕಂಡಪೆ
ನೆಂದು ನಲಿನಲಿದಾಡುತಿರ್ದನು ತನ್ನ ಮನದೊಳಗೆ ॥ ೨೩

ಅಂಧನಕ್ಷಿಯ ಪಡೆದವೊಲು ಸತಿ
ನಂದನನ ಪೆತ್ತಂತೆ ಯತಿ ಸುರ
ಸಿಂಧುವನು ಕಂಡಂತೆ ಕೃಪಣನು ನಿಧಿಯ ಪಡೆದಂತೆ ।
ಮಂದಮತಿಗಳು ಗುರುಪದವ ನಲ
ವಿಂದೆ ಕಂಡಂದದಲಿ ಪರಮಾ
ನಂದಮನದಲಿ ಮುಂದುಗಾಣದೆಯಿರ್ದನಕ್ರೂರ ॥ ೨೪

ಅಸುರನಾಳ್ದಂದೆನ್ನನತಿಕೋ
ಪಿಸುವನೋ ತನ್ನಾತನೆಂದೆನ
ಗೊಸೆವನೋ ಸರ್ವಾತ್ಮನರಿಯನೆ ಭಕ್ತರಿಂಗಿತವ ।
ಪೆಸರುಗೊಂಡೊಡೆ ಭವಭವವ ತ
ಪ್ಪಿಸುವ ಹರಿ ಕಣ್ಣಾರೆ ಕಂಡೊಡೆ
ಬಿಸುಡುವನೆ ತಾನಾಗಲೆನುತಕ್ರೂರ ಪುಳಕಿಸಿದ ॥ ೨೫

ಆವನೊಬ್ಬನ ಚರಣವನು ನಿಗ
ಮಾವಳಿಗಳಜಮುಖ್ಯದೇವರು
ತಾವುಗಾಣಿಸಲರಿಯರಾಶುಕನಾರದಾದಿಗಳು ।
ಭಾವದಲಿ ನಿರ್ಧರಿಸಲರಿಯದ
ದೇವದೇವೋತ್ತಮನ ನಾಳಿನ
ಜಾವದಲಿ ಕಂಡಪೆನೆನುತ್ತಡಿಗಡಿಗೆ ಬೆರಗಾದ ॥ ೧೬

ಬಿಟ್ಟನೀಪರಿ ನಿದ್ರೆಯನು ಮನ
ಮುಟ್ಟಿ ಕೃಷ್ಣನ ನೆನೆದು ಪಾಪದ
ಬೆಟ್ಟವನು ಹುಡಿಗುಟ್ಟಿ ಸೂರ್ಯೋದಯದ [1] ಪರಿವಿಡಿಯ [1] ।
ದಿಟ್ಟಿಸುತೆ ವಿಜ್ಞಾನಪದವಿಗೆ
ಕಟ್ಟೊಡೆಯನಾದಂತೆ ಶಂಕೆಯ
ಬಿಟ್ಟು ಸಂಭ್ರಮಿಸುತ್ತೆ ಗಮನೋದ್ಯೋಗಪರನಾದ ॥ ೧೭

ಹರಿಯ ನೆನೆವಕ್ರೂರನಂತ ತಿ
ಮಿರಗಳೊಡನಾತಿಮಿರ ಹರಿಯಿತು
ಪರಮವೈಷ್ಣವರಾಸ್ಯಪಂಕಜದೊಡನೆ ಸರಸಿರುಹ ।
ಅರಳಿದುವು ಸುಕವಿಯ ಮನೋರಥ
ಸಿರಿಯು ಕೂಡೆ ರಥಾಂಗ ಕೂಡಿದು
ವರರೆ ರವಿಯುದಯಿಸಿದನಿಂದ್ರದಿಶಾದ್ರಿಶಿಖರದಲಿ । ೧೮

ವಿದಿತಸಂಧ್ಯಾವಂದನೆಯ ಹರಿ
ಪದಸಮಾರಾಧನೆಯನಾರವಿ
ಯುದಯದಲಿ ಪುಳಕಿಸುತೆ ಮಾಡಿ ಮನೋನುರಾಗದಲಿ ।
ಸದನವನು ಬೀಳ್ಕೊಂಡು ಶುಭಲ
ಗ್ನದಲಿ ರಥವೇರಿದನು ಬಹುಳಾ
ಭ್ಯುದಯಲಂಪಟನೆಣಿಸುತ್ತೈದಿದನಚ್ಯುತನಗುಣವ ॥ ೧೯

---

1 ಪರಿವಿಡಿದು, ಟ.

ಸತ್ಯಜಯವೈಕುಂತದಲಿ ಸ
ರ್ವೋತ್ತಮನು ತಾನಾಗಿ ತೋರ್ಪ
ಸತ್ಯಪಾಲಕನೆನಿಸಿ [1] ಮಹದಾನಂದಮಯನಾಗಿ ।
ಮತ್ತೆ ನೆನೆವ ಗುಣತ್ರಯಂಗಳ
ಕೃತ್ಯದಲಿ ಬಹುರೂಪಿಯಹ ಸಂ
ಸ್ತುತ್ಯನೀಗೋಕುಲದೊಳಿಹುದಚ್ಚರಿಯೆನುತೆ ನಡೆದ ॥ ೩೦

ಜಗದ ಜೀವರ ತಂದೆಯೆನಿಪಾ
ಮಗನ ಪಡೆದನು ನಾಭಿಯಲಿ ನಸು
ನಗೆಯೊಳಗೆ ತಾ ಪಡೆದನಲಸದೆ ಮಾಯೆಯೆಂಬವಳ ।
ಮಗಳ ಭುವನಪವಿತ್ರೆಯೆನಿಸುವ
ಮಗಳ ಪಡೆದನು ಚರಣದಲಿ ತಾ
ಮಗನೆನಿಸಿ ತೋರುವುದಿದಚ್ಚರಿಯೆನುತೆ ಬರುತಿರ್ದ ॥ ೩೧

ಪರಮಪುರುಷೋತ್ತಮನು ಕಮಲೋ
ದರನು ಕೈವಲ್ಯಾಧಿಪತಿ ಪಂ
ಕರುಹನಾಭನಚಿಂತ್ಯನದ್ವಯನಸಮಶರಜನಕ ।
ದುರಿತಕೋಲಾಹಲನು ನಾಕಾ
ಮರಕುಲಪ್ರಭುವಂದ್ಯನೆನಿಸುವ
ಹರಿಯ ಕಂಡೊಡೆ ಧನ್ಯನೆನುತಕ್ರೂರ ನಡೆತಂದ ॥ ೩೨

ಹರಿಪದವನರ್ಚಿಸದೆ ಹರಿಯಾ
ಶರಣರೊಡನೆ ಸಖಿತ್ವವಿಲ್ಲದೆ
ಮುರಹರನ ಕೀರ್ತಿಸದೆ ಲಕ್ಷ್ಮೀಧರನನೀಕ್ಷಿಸದೆ ।
ಶರಧಿಶಯನನ ಗುಣಕಥೆಯನಾ
ದರಿಸಿ ಕೇಳದೆ ಹಿರಿಯತನದಲಿ
ಬೆರೆವ ನರನಿಹಪರಕೆ ಬಾಹಿರನೆನುತೆ ಬರುತಿರ್ದ ॥ ೩೩

1 ಸತ್ಯಶಾಶ್ವತನೆನಿಸಿ, ಕ.   * ಈ ಪದ್ಯವು ಕಾ. ದಲ್ಲಿಲ್ಲ.

ಹರಿಯ ನೆನೆಯದ ಮನ ಮುರಾರಿಯ
ಚರಣವನು ಪೂಜಿಸದ ಕೈ ಭೂ
ಧರನ ಹೊಗಳದ ಜಿಹ್ವೆ ವಿಷ್ಣುಕ್ಷೇತ್ರಯಾತ್ರೆಗಳ |
ಚರಿಸದಂಘ್ರಿಗಳಿಂದಿರೇಶನ
ಬಿರುದ ಕೇಳದ ಕಿವಿಗಳವು ಜೀ
ವರಿಗೆ ಪೂರ್ವದ ಹಗೆಗಳೆನುತಕ್ರೂರ ನಡೆತಂದ || ೩೪

ಈತೆರದೊಳಚ್ಯುತನ ಮಹಿಮ
ಖ್ಯಾತಿಯನು ಕೊಂಡಾಡಿ ಹಿಗ್ಗುತೆ
ನೂತನಾಳಾಪದಲಿ ಬರೆ ಬರೆ ಮುಂದೆ ದೂರದಲಿ |
ಜಾತಿರತುನವ ಧರಿಸಿ ತೊಳಗುವ
ಜಾತರೂಪದ ತೊಡವಿನಂತೆ ಮ
ಹಾತಿಶಯವಿಭವದಲಿ ಮೆರೆದುದು ಪಳ್ಳಿ ಹರಿಸಹಿತ || ೩೫

ಪರುಸವಿಹ ಗಿರಿಯಂತೆ ಸಿತಪಂ
ಕರುಹವಿಹ ಕೊಳದಂತೆ ವರಸುರ
ತರುವೆಸೆವ ವನದಂತೆ ಕೇಸರಿಯಿರ್ಪ ಗುಹೆಯಂತೆ |
ಪರಮವೈಷ್ಣವನಿರ್ಪ ಸಭೆ [1] ವೊಲು
ತರಣಿಯಿಹನಭ [1] ದಂತೆ ನಂದನ
ತರುಣನಿಹ ಪೆರ್ಮೆಯಲಿ ಮೆರೆದುದು ಪಳ್ಳಿ ಪುರವೆನಿಸಿ || ೩೬

ಸುತ್ತ ಬಳಸಿದ ಚೂತಕುಜದೊ
ತ್ತೊತ್ತಿನಲಿ ಪೂತೆಸೆವ ಮಲ್ಲಿಗೆ
ನರ್ತಿಸುವ ನವಿಲುಲಿವ ಕೋಗಿಲೆ ಗಳಪುವರಗಿಳಿಯ |
ಮೊತ್ತ ಮೊರೆವ ಮದಾಳಿ ರಮಿಸುವ
ಮತ್ತಹಂಸಗಳಿಂದೆ ಮೆರೆದು ಯ
ದೂತ್ತಮನ ಕಣ್ಮನವ ಸೆಳೆದುದು ಗೋಕುಲೋದ್ಯಾನ || ೩೭

1 ಯಂತರಣಿಯಿಹವನ, ಬ.

ಶೇಷನಂತೆ ಸಹಸ್ರಸಂಖ್ಯೆಯ
ಗೋಸಮಾಜದಿನೊಪ್ಪಿ ತೋರಿದು
ದಾಸರಿತ್ಪತಿಯಂತೆ ಮೆರೆದುದು ಘೋಷಮುದ್ರೆಯಲಿ |
ಅಸುರೇಶ್ವರನಂತೆ ಸುಲಲಿತ
ಗೋಸಮನ್ವಿತವಾಗಿ ತೊಳಗಿತು
ಘೋಷವಕ್ರೂರನ ಮನೋರಥವಿದಿರಲೆಸೆವಂತೆ || ೩೮

ಬಂದನೀಪರಿ ದಾನಪತಿ ಗೋ
ವಿಂದನಿಹ ಗೋಕುಲವನೀಕ್ಷಿಸಿ
ಸಂದಣಿಪ ಹರುಷದಲಿ ರಥದಿಂದಿಳಿದು ತವಕದಲಿ |
ನಂದನರಮನೆಗಾಗಿ ಬರೆ ಗೋ
ವೃಂದ ಹೊಕ್ಕುದು ಪುರವ ಬಳಿಕರ
ವಿಂದಸಖ ಪವಡಿಸಿದನಾವಾರುಣಿಯ ತೋಳಿನಲಿ || ೩೯

ವಸುಮತಿಯ ಬಿಸುಪಾರೆ [1] ಯಾತು [1]
ಪ್ರಸರವಳಿನಿಂ ಪಾರೆ ಕಮಲಿನಿ
ಬಸವಳಿದು [2] ಸೀರೇರೆ [2] ರಜನೀನಾರಿ ತಲೆದೋರೆ |
ಅಸತಿಯರು ನಲವೇರೆ ಕೈರವ
ದೊಸಗೆವೆರೆಗಳು ಸಾರೆ [3] ಕಡುರುಚಿ [3]
ಬಿಸಜಸಖ [4] ತಾ ಜಾರಿದನು ಪಶ್ಚಿಮಮಹಾಂಬುಧಿಗೆ [4] || ೪೦

ಹರಿ ತನಗೆ ನಿಜ ಗೋಪಮುದ್ರೆಯ
ಹರಿ ಸಲಿಸೆ ಕಮಳಾನುರಾಗೋ
ತ್ಕರುಷ ನಮ್ಮಬ್ಬರಿಗೆ ಸರಿ ತಮವೈರಿಯೆಂದೆನಿಸ |
ಬಿರುದು ಸರಿ ದ್ವಿಜರಾಜತೇಜೋ
ಪಹರಣದಿಂ ದೆಸೆಗೆಟ್ಟೆ ನಾನೆಂ
ದುರುಳಿ ಕೃಷ್ಣಸ್ಮರಣೆಯಿಂದಪರಾರ್ಣವಕೆ ನಡೆದ || ೪೧

1 ಕೋಕ, ಕಾ. 2 ಬಾಯಾರೆ, ಕಾ. 3 ಕಂಡಾ, ಕಾ. 4 ಜಾರಿದನುವರುಣ ದಿಶಾದ್ರಿಸುಂದರಕೆ, ಕಾ.

ಹರಿಯು ತೇಜಃಪುಂಜಕಿದಿರಲಿ
ಸ್ಮರಿಸಲಾವುದದಿಂದು ಪೂರ್ವದ
ತರುಣಿಯನು ಬಿಟ್ಟಪರಕಾಂತಾಮಾರ್ಗದೊಳಗೈದಿ ।
ಮರುಳುತನದೊಂದಧಿಕರೌದ್ರತೆ
ವೆರಸಿ ಬಾಳ್ವುದಿದೇನೆನುತೆ ಪಂ
ಕರುಹಸಖನಂಬರವ ಬಿಟ್ಟಿಳಿತಂದನಂಬುಧಿಗೆ ॥ ೪೨

ದೆಸೆದೆಸೆಯು ಬಾಸಣಿಸಿ ನಡೆದುದು
ಮಿಸುಪ ಸಂಧ್ಯಾರಾಗ ಖಗಮೃಗ
ವಿಸರ ತರುಕೋಟರಕೆ ಸಾರಿದುವಳಿಗಳಬ್ಜಿನಿಯ ।
ಬಿಸುಟುವುಡುನಿಕುರುಂಬವಭ್ರದೊ
ಳೆಸೆದುದವನಿಯನ್ನದೆ ಕತ್ತಲೆ
ಮುಸುಕಿದುದು ದೀಪಾಳಿ ಮೆರೆದುವು ನಿಳಯನಿಳಯದಲಿ ॥ ೪೩

ಇಂತು ರವಿಯಸ್ತಮಿಸಲಾಯದು
ಮಂತ್ರಿ ಕೃಷ್ಣನ ಕಾಣ್ಬ ಭರದಲಿ
ಮುಂತೆ ಬರುಬರುತಿದಿರಲೊಪ್ಪುವ ನಂದನರಮನೆಯ ।
ಸಂತಸದೊಳೊಳಪೊಕ್ಕು ಗೋಪರ
ತಿಂತಿಣಿಯುಲಾಸುರಭಿನಿಕರದ
ಪಂತಿಗಳಲಚ್ಯುತನ [1]ಚಿಹ್ನೆಯ ನೋಡುತೈತಂದ[1] ॥ ೪೪

ಹೊಳೆವ ಕಿರು[2]ದೋಳು[2]ಗಳ ನಿರಿಗೊಂ
ಡೆಳವ ಗಡ್ಡದ ಗುಜುರುಮೀಸೆಯ
ನಲಿವ ಮಣಿಕುಂಡಲದ ಮಿಂಚುವ ತನುಭವತಾಳಿಕೆಯ ।
ನೆಳದ ಬೆನ್ನಿನ ಬೆರಳ ಮಿಸುನಿಯ
ಹಳಕುಮುದ್ರೆಯ ಗೋಪವೃದ್ಧರು
ಕೆಲಬಲದ ಕೇರಿಗಳೊಳೊಪ್ಪಿರೆ ಕಂಡನಕ್ರೂರ ॥ ೪೫

1 ಕಾಂಚನ ನಗುತಲೈತಂದ, ಬ.   2 ಡೊಳ್ಳು, ಕಾ.

ಹಗಡುಗಣ್ಣಿಯು ಮುರಿವ ಕಡೆಗೋ
ಲುಗಳ ತಿದ್ದುವ ಹಾವಣಿಯು ಗೂ
ಟಗಳ ಕೆತ್ತುವ ಮೂಗುನೇಣಿನ ಹುರಿಯ ಪಿಡಿದುಡಿವ ।
ಮೊಗವಡವ ಮಾಡುವೆರಮನೆಹ
ಟ್ಟಿಗಳ ಕುಳಿತೆವರುಗಳ ತಿದ್ದುವ
ಬಗೆಯಲೊಪ್ಪುವ ಗೋವಳರನಕ್ರೂರನೀಕ್ಷಿಸಿದ ॥ ೪೬

ಹಟ್ಟಿಹಟ್ಟಿಯು ಮುಂದೆ ಗೋಪರು
ಗೊಟ್ಟುಗುಳಿಸೆಂಡುಗಳ ಕುಣಿಪಿನ
ಚಿಟ್ಟು [1] ಮರೆಹೊಳದಿಪ್ಪ [1] ನಾಹಿಡಿಗವಡೆಗಳನೊಲಿದು ।
ಅಟ್ಟಿ ಮುಟ್ಟುವ ಸುತ್ತುಗವಡೆಯು
ನೊಟ್ಟಜೆಯಲಂದಾಡುತಿರಲವ
ದಿಟ್ಟಿಸಿದನಕ್ರೂರನತಿಬಲ ಬಾಲಲೀಲೆಗಳ ॥ ೪೭

ತಾಯುಬರವನು ಹಾರಿ ಹರಿದಂ
ಜೇಯೆನುತೆ ಹಟ್ಟಿಗಳ ಸುತ್ತನ
ವಾಯಿಯುಲಿ ಪರಿವಾಡಿ ಮಿಗೆ ಪುಟನೆಗೆದು ಮೋಳಸುತೆ ।
ಆಯುಸದಿ ಕುದಿವಳ್ಳ ವ್ರೋಯಿಗ್ಗಿನ
ಮೇಯಲರಿಯದ ವತ್ಸವೆಂದಾ
ತ್ರೀಯು ಮೊದಲೆಂಬಂತೆ ಮೆರೆದಿರೆ ಕಂಡನಕ್ರೂರ ॥ ೪೮

ಕೊರಳ ಘೊಂಬಟ್ಟಗಳ ಬೆಳ್ಳಿಯ
ಮುರುಹುಗಡಗವ ಜೋಲ್ವಹುಬ್ಬಿನ
ನರೆದಲೆಯ ಸೆರೆಯುಬ್ಬಿದಂಗದ ಗೆರೆಯ ನಿರಿಗೆಗಳ ।
ತೆರಳಿದಾಸ್ಯದ ಬತ್ತಿದೆವೆ ತಾ
ನಿರುವ ಕಂಗಳ ಕಳದ ದಂತದ
ಪರಮಗೋಪರ ಕಂಡು ನಸುನಗುತಿರ್ದನಕ್ರೂರ ॥ ೪೯

1 ಮುರುಹಿಳಿದಿಪ್ಪ, ಬ.

ಮಿಸುಪ ಹೊಂಗೇದಗೆಯ ತುರುಬಿನ
ಕುಸುರಿಗೆಲಸದ ಕರ್ಣಪತ್ರದ
ನೊಸಲ ಕಸ್ತೂರಿಯ ಪಿಣಿಲ ಕಚವಕ್ರವಲ್ಲಿಗಳ ।
ತ್ರಿಸರದೇಕಾವಳಿಯ ಮದನನ
ಮಸೆದ ನನೆಯಂಬುಗಳನೇಳಿಸು
ತೆಸೆವಪಾಂಗದ ಸತಿಯರೊಪ್ಪಿರೆ ಕಂಡನಕ್ರೂರ ॥ ೫೦

ಕೆಂದೆ ಬೆಳತಿಗೆ ಕಾಳ ಕಪಿಲೆ ಸು
ನಂದೆ ನಂದಿನಿ ಚಂಚೆ ಹುಂಡೆ ಮು
ಕುಂದೆ ಕಿರುಗೆಚ್ಚಲಿನ ಜನ್ನಿಗೆ ಜಾಲೆ ತನಿಹುಲಚಿ ।
ಮುಂದೆ ತಾನ್ಯೈತಪ್ಪ ಮುದಿಯೊಳ
ಗಂದಿ ಸುರಭಿಯೆನಿಪ್ಪ ಪಶುಗಳ
ಗೊಂದಣವನಕ್ರೂರನೀಕ್ಷಿಸಿ ಪೊಗಳುತೈತಂದ ॥ ೫೧

ಕರೆವ ಕಟ್ಟುವ ಲಾಲಿಸುವ ಮೈ
ದುರಿಸಿ ದಳಯಿಕ್ಕಿಸುವ ಕರುಗಳ
ಕರೆಕರೆದು ಮುಂಡಾಡಿ ಕಟ್ಟುವ ಪರಸಿ ತೊಪಿರಿವ ।
ಸರಳಿಸುವ ಹೋರಿಗಳ ಬೆನ್ನಲಿ
ಹರಿವ ಹದುಳಿಸಿ ಹಾಲ ಹರವಿಯ
ತೆರಳಚುವ ಲೀಲೆಯಲಿ ಹರಿಯಿರೆ ಕಂಡನಕ್ರೂರ ॥ ೫೨

ಸುಳಿಗುರುಳ ಪೆರೆನೊಸಲ[1] ನಾಟಿಸಿ[1]
ಹೊಳೆವ ಕಂಗಳ ಮಿಸುಪ ಕದಪಿನ
ಲುಳಿತನಾಸಾಪುಟದ ಬಿಂಬಾಧರದ ಸೀಮೆಯಲಿ ।
ತೊಳಪ ದಶನಾವಳಿಗಳೊಪ್ಪುವ
ಗಳದ ಸಿರಿ ನೆಲಸಿರ್ಪವಕ್ಷ
ಸ್ಥಳದ ಕೃಷ್ಣನ ಕಂಡು ಪುಳಕಿತನಾದನಕ್ರೂರ ॥ ೫೩

1 ನಾದಿಸಿ, ಖ.

ತೋಳೆರಡು ನಾಲ್ಕೆನಿಸಿ ತೋರುವ
ನೀಲಮೇಘಶ್ಯಾಮನುದರದ
ಮೂಲೆಯಲಿ ಬ್ರಹ್ಮಾಂಡಕೋಟಿಯ [1] ಧರಿಸಿ ಲಾಲಿಸುವ [1] ।
[2] ಲೋಲ [2] ನಖಿಳಮುನೀಶ್ವರರ ಹೃದ
ಯಾಲಯದೊಳಡಿಯಿಡುವ ಬಡಗೋ
ಪಾಲನಚ್ಯುತನಹುದೆನುತ ಮೈಯ್ಯಿಕ್ಕಲನುವಾದ ॥ ೫೪

* ಕಾಮದಲರಿಂದೆಸೆವ ಕಬರಿಯ
ಬಂಧವನು ತೆತ್ತಿಸಿದ ಪೀಲಿಯ
ಚಂದ್ರಿಕೆಯ ಮುಡಿಗಟ್ಟ ಮುಸುಕಿದ ತುಂಬಿಗುರುಳುಗಳ ।
ಚಂದನದ ಕತ್ತುರಿಯ [3] ತಿಗುರಿನೊ
ಳಂದ [3] ವೇರಿದ ಗಳದಲೊಪ್ಪಿಹ
ನಂದತನಯನ ಕಂಡು ಮೈಯ್ಯಿಕ್ಕಿದನು ಹರುಷದಲಿ ॥ ೫೫

ದೇವ ಜಯ ಜಯ ಜಯ ಜನಾರ್ದನ
ಸಾವುಹುಟ್ಟಿಲ್ಲದ ಜಗನ್ಮಯ
ಕಾವುದೈ ಶರಣಾಗತರ ಕರುಣಾರ್ಣವ ಮಹಾಮಹಿಮ ।
ಶ್ರೀವಧೂವರ ಸಲಹು ಕೃಷ್ಣ ಕೃ
ಪಾವಲೋಕನದಿಂದೆ ರಕ್ಷಿಸು
ದೇವಕೀಸುತ ಎನುತ ಹೊರಳಿದನಚ್ಯುತಾಂಘ್ರಿಯಲಿ ॥ ೫೬

ಮೀರಿದಪ್ಪಿದ ಹರ್ಷಪಾರಾ
ವಾರದಲಿ ಮನಮುಳುಗಿ ಹರಿಪದ
ವಾರಿಜಕೆ ನಿಜತನುವನೊಪ್ಪಿಸಿ ವಿಕಳಭಾವದಲಿ ।
ಆರು ತಾನಿದಿರಾರದೆಂಬ ವಿ
ಚಾರವಳಿದಾರೂಢಯೋಗಿಯ
ಭಾರಣೆಯಲಕ್ರೂರನೆಸೆದನು ಭಕ್ತಕೇಳಿಯಲಿ ॥ ೫೭

---

[1] ನಿರಿಸಿಕೊಂಡಿಹನ, ಬ. [2] ಬಾಲ, ಕಾ.
* ಈಪದ್ಯವು ಬ. ಪುಸ್ತಕದಲ್ಲಿಲ್ಲ. [3] ತಿಲಕದಲಂಧ್ರ, ಕಾ.

ಮರೆದೊರಗಿದರ್ಭಕನೊ ಸಮರಸ
ದೆರಕದಿನಿಯನೊ ವಿಷ್ಣುಭಕ್ತಿಯ
ಪರಮಸೀಮಾಸ್ತಂಭವೋ ಸಂಸಾರವಿಭ್ರಮವ ।
ತೊರೆದ ಸಮ್ಯಗ್ಜ್ಞಾನಿಯಂತಃ
ಕರಣವೋ ಪೇಳೆನಲು ಕೃಷ್ಣಂ
ಗೆಱಗಿ ಸೈವೆಱಗಾಗಿ ಪುಳಕಿತನಾದನಕ್ರೂರ ॥ ೫೮

ಕಂಡು ಹರಿ ನಸುನಗುತೆ ಭಕ್ತನ
ಮಂಡೆಯನು ಹಿಡಿದೆತ್ತಿ ನಿಜದೋ
ರ್ದಂಡದಲಿ ಬಿಗಿಯಪ್ಪಿ ತನುವಿನ ಧೂಳಿಯನು ತೊಡೆದು
ಚಂಡರುಚಿತಾಪದಲಿ ಬಳಲಿದೆ
ಯುಂಡಹೊಲಬಿಲ್ಲಹಹ ದೇಹವ
ದಂಡಿಸುವೆಯೇಕೆಂದು ಮಧುರೋಕ್ತಿಯಲಿ ಮನ್ನಿಸಿದ ॥ ೫೯

ಸುರರಿಗಭಯವನೀವ ಕರದಿಂ
ದೊರಸಿದನು ವೃಜಿಮರನಾಸಂ
ಸಿಗುಹನಿಲಯಳನಪ್ಪುವುರದಿಂದೊಲಿದು ಬಿಗಿಯಪ್ಪಿ ।
ಹರಚತುರ್ಮುಖರೊಡನೆ ನುಡಿವಾ
ವರ ರಸೋಕ್ತಿಯ ನುಡಿದು ಕಂಸಾ
ಸುರನ ಮಂತ್ರಿಯ ಮನ್ನಿಸಿದನಸುರಾರಿಯುಚಿತದಲಿ ॥ ೬೦

ಮನ್ನಣೆಗೆ[1] ಮಿಗೆಯುಕ್ಕಿ[1] ಮುಂದಿಪ
ಪನ್ನಗಾರಿಧ್ವಜನ ಹೊಗಳುತೆ
ಧನ್ಯನಾದೆನೆನುತ್ತೆ ಮುಕುಟವನೊಲೆದು ಮುದದಿಂದೆ ।
ತನ್ನೊಳಗುಹೊರಗಚ್ಯುತನ ಸಂ
ಪನ್ನತೆಯನೀಕ್ಷಿಸುತೆ ಬೆರಗಿನ
ಬಿನ್ನಣದಲಕ್ರೂರನೆಸೆದನು ದಿವ್ಯಮುನಿಯಂತೆ ॥ ೬೧

[1] ಮನವುಬ್ಬಿ, ಕಾ.

ಸಂದಣಿಸಿ ಪರಿಪರಿದು ನೋಡುತೆ
ನಿಂದಗೋಪರ ನೇವಿ ನೇಮಿಯು
ಹಿಂದೆ ಕವಿಕವಿದಡರಿ ನೋಡುವ ಗೋಪಕಾಂತೆಯರ ।
ನಂದನಾಪ್ತರನಾಯಶೋದೆಯು
ಬಂಧುವರ್ಗವ ಕಂಡು ಮನದಲಿ
ವಂದಿಸುತೆ ಹರಿಸಹಿತ ಬಂದನು ನಂದನಿದ್ದೆಡೆಗೆ ॥ ೬೧

ನಂದನಿದಿರೆದ್ದಡಿಗೆರಗಿ ನಿಜ
ಮಂದಿರಕೆ ಕೊಂಡುಯ್ದು ಪೂರ್ವದ
ಬಂಧುದರ್ಶನ ಘಟಿಸಿತೆನಗೆಂದಾದರಿಸಿ ಬಳಿಕ ।
ಗಂಧಪುಷ್ಪಾದ್ಯಖಿಳವಸ್ತುವ
ಮುಂದಿರಿಸಿ ಕಾಲ್ತೊಳೆದು ಬದುಕಿದೆ
ನೆಂದು ತಾನನುನಯದಿ ನುಡಿದನು ಮಧುರವಚನದಲಿ ॥ ೬೨

ಏನು ಹದುಳವೆ ಬಂದಕಾರ್ಯವ
ನೂನವಾವುದು ನಾವು ಪೂರ್ವದ
ಲೇನು ಸುಕೃತವ ಮಾಡಿದೆವೊ ನಿಮ್ಮಂಘ್ರಿದರ್ಶನಕೆ ।
ಮಾನನಿಧಿ ಬಳಲಿದಿರೆನುತೆ ಸ
ನ್ಮಾನದಲಿ ಸಂತೋಷವಡಿಸಿ ಮ
ನೋನುರಾಗದಲವನನುಪಚರಿಸಿದನು ವಿನಯದಲಿ ॥ ೬೩

ಅದಕೆ ಹರುಷಿತನಾಗಿ ನುಡಿದನು
ಯದುಚಮೂಪತಿ[1] ನಂದ[1] ಕೇಳ
ಭ್ಯುದಯ ಕೈವಶವಾಯ್ತು ಲಾ ಬಳಿಕೀಜನಾರ್ದನನ ।
ಸದನದಿಂದೊಳಗಿರಿಸಿ ಶಿಶುಭಾ
ವದಲಿ[2] ಪಾಲಿಸಿ[2] ತಂದೆಯೆನಿಸುವ
ಪದವಿ ಪೂರ್ವದ ಸುಕೃತಫಲ ನಿನಗೆಂದನಕ್ರೂರ ॥ ೬೪

1 ನಿನಗೆ, ಕಾ. 2 ಲಾಲಿಸಿ, ಕಾ,

ಈಪರಿಯಲಕ್ರೂರ ಮಧುರಾ
ಳಾಪದಲಿ ಕೊಂಡಾಡಿ ಪಳ್ಳಿಯ
ಗೋಪರೆಲ್ಲರ ಕರಿಸಿ ಮಜ್ಜನಭೋಜನಾಂತ್ಯದಲಿ ।
ಚಾಪದುತ್ಸವ[1] ವೆಂದು[1] ಕಂಸ ನಿ
ರೂಪಿಸಿದ ವೃತ್ತಾಂತವನು ನಾ
ನಾಪರಿಯ ಚತುರೋಕ್ತಿಯಲಿ ವಿಸ್ತರಿಸಲನುವಾದ ॥ ೬೬

ಎರಡನೆಯಸಂಧಿ ಮುಗಿದುದು

## ಮೂರನೆಯ ಸಂಧಿ

ಸೂ॥ ಪರಮಧರ್ಮರಹಸ್ಯನೀತಿಯ
ಪರಿಪಿಡಿಯಲಕ್ರೂರದೇವಂ
ಗೊರೆದು ಹರಿ ಮಧುರಾಪುರಕೆ ತೆರಳಿದನು ಬಲಸಹಿತ ॥

ಧರಣಿರುಹನಿಕರದಲಿ ಚಂದನ
ಸುರತರುಗಳಿಪ್ಪಂತೆ ಮುನಿಗಳ
ನೆರವಿಯಲಿ ವಾಲ್ಮೀಕಿವೇದವ್ಯಾಸರಿರ್ಪಂತೆ ।
ಹರಿವನದಿನಿವಹದಲಿ ಯಮುನಾ
ಸುರನದಿಗಳಿಪ್ಪಂತೆ ಬಲಕೃ
ಷ್ಣರುಗಳೊಪ್ಪಿಹ ಗೋಪಸಭೆಗಕ್ರೂರನಿಂತೆಂದ ॥ ೧

1 ಕೇಂದು, ಕಾ.

ಮಧುರೆಯಲಿ ಕಾರ್ಮುಕಮಹೋತ್ಸವ
ವದು ನಡೆವುದದುಭುತವು ನೀಂ ಬಂ
ದದರ ವಿಭವವನೀಕ್ಷಿಸುವುದೊಗ್ಗಾಗಿ ವಿನಯದಲಿ ।
ದಧಿ ಘೃತಾಮೃತ ಘಟಗಳನು ಕೊಂ
ಡೊದಗಿ ಬಹುದೀಬಲಮುಕುಂದರ
ನುದಯದಲಿ ನಮ್ಮೊಡನೆ ಕಳುಹುವುದೆಂದನಕ್ರೂರ ॥ ೨

ಬಿಲ್ಲಹಬ್ಬದ ಚೆಲುವೆ ಬಳಿಕಾ
ಮಲ್ಲಯುದ್ಧದ ದಂಡಿಯನು ಕಂ
ಡಲ್ಲದೀಬಲಕೃಷ್ಣರಿಹರೇ ಕೇಳಿಲಂಪಟರು ।
ಅಲ್ಲಿಗಿವರನು ರಥವನೇರಿಸಿ
ಮೆಲ್ಲನೊಡಗೊಂಡುಯ್ವೆನೆನೆ ಹೊಲ
ಬಲ್ಲೆನುತ [1]ಮನದೊಳಗೆ ಚಿಂತಿಸುತಿರ್ದನಾ ನಂದ[1] ॥ ೩

ಆಹಹ ತರುಣರ ಕಳುಹಿ ನಾ ನಿ
ರ್ವಹಿಸಬಲ್ಲೆನೆ ಕಂಸನಗರಿಯ
ಬಹುಳವಿಭವವನೆನ್ನ ಮಕ್ಕಳು ನೋಡಿ ಫಲವೇನು ।
ಬಹುವಿಧದ ಗೋರಸವ ಕೊಂಡಾಂ
ಬಹೆನು ತರುಣರ ಚಿಂತೆ ಬೇಡೆನೆ
ಗಹಗಹಿಸಿ ನಗುತಿರ್ದನಾ ಯದುಮಂತ್ರಿ ಮನದೊಳಗೆ ॥ ೪

ಕಳವಳಿಸುತೀಮಾತ ಕೇಳುತೆ
ಲಲಿತಚಂದ್ರದ ಬೈತಲೆಯ ಥಳ
ಥಳಿಸುವೋಲೆಯ ಕಾಲ ಪರಳುಂಗುರದ ಮುಂಟಿಕೆಯ ।
ಹಲವು ಕಡಗದ ಹೊನ್ನ ಕಂಕಣ
ದುಲಿಯ ಹೊಸಹುಟ್ಟಿಗೆಯ ಮುಸುಕಿನ
ನಳಿನಮುಖಿ ಬಳುಕುತ್ತ ಬಂದಳು ಗೋಪಿ ದುಗುಡದಲಿ ॥ ೫

1 ಘಣಿಯುಗಿದ ಪಾಘದೊಳಿರ್ದನಾನಂದ, ಕಾ.

ಲೇಸು ಲೇಸಕ್ರೂರ ನೃಪಕಂ
ಸಾಸುರನ ಹೊರೆಗೆನ್ನ ಮಕ್ಕಳ
ಬೋಸರಿಸಿ ಕೊಂಡುಯ್ವ ಬೆಡಗಿನ ಭಂಗಿ ಲೇಸಾಯ್ತು ।
ದೇಶದೊಡೆಯರ ಕೂಡೆ ಗೋಕುಲ
ವಾಸಿಗೆತ್ತಣ ನಂಟು ಹೇಳೆನು
ತಾಸುದತಿ ತಲ್ಲಣಿಸಿ ನುಡಿದಳು ರೋಷಧೈರ್ಯದಲಿ ॥ ೬.

ಹೀನರೈ ನೀವಕಟಕಟ ತವ
ಸೂನುಗಳವಿಕ್ರಮವ ನೋಡುವೊ
ಡಾನಕಿನಭವನರಿಯನದ ನೀವರಿಯುವರೆ ಅಂದಾ ।
ದಾನವರನರೆಯಟ್ಟಿ ಕೊಂದರು
ಮಾನವರು ನೆರೆ ಮರೆದಿರೇ ಸುತ
ರಾನಿಶಾಚರಕಂಸನನು ಲೆಕ್ಕಿಸುವರಲ್ಲೆಂದ ॥ ೭

ಹರಿ ನಿಮಗೆ ಮಗನಲ್ಲ ದನುಜಾ
ಮರರ ಲೆಕ್ಕಿಪನಲ್ಲ ಹಾಕ್ಕಿನ
ತರುಣನೆಂದೆಣಿಸದಿರಿ ಸಾಕ್ಷಾದ್ವಿಷ್ಣು ನರನಾಗಿ ।
ಧರೆಯ ಭಾರವನಿಳುಹಲೆಂದವ
ತರಿಸಿದನು [1] ನಾಳಿನಲಿ [1] ಕಂಸಾ
ಸುರನ ಸಂಹರಿಸುವನು ನೀವಿದಕಂಜಬೇಡೆಂದ ॥ ೮

ಎಂದು ನಂದಯಶೋದೆಯರ ಹೃದ
ಯಾಂಧಕಾರವ ಬಿಡಿಸೆ ಕೈರವ
ಬಂಧುವಿಳೆಯ ತಮೋಂಧವನು ಬಿಡಿಸಿದನು ಬಳಿಸಲಿಸಿ ।
ನಂದಭವನಕೆ ದಾನಪತಿಯೈ
ತಂದನರಿವೆನೆನುತ್ತೆ ಕೇಳರ
ವಿಂದರಿಪುವೈತಂದವೋಲೆಸೆದಿರ್ದನಭ್ರದಲಿ ॥ ೯

---

1 ನಳಿನಾಕ್ಷ, ಬ.

ಇಂದಿರೆಯು ಬಹುರೂಪುದಳೆದರ
ವಿಂದನಾಭನ ವೇಣುನಾದವ
ನಿಂದಿರಾದಿದಿವೌಕಸರ ಗೋಪಾಲಲೀಲೆಗಳ ।
ಚಂದವನು ನೋಡುವೆನೆನುತಲಾ
ನಂದಮಿಗಲ್ಕೈತಂದಳನೆ ಬಳಿ
ಕಂದಿನಿರುಳೊಪ್ಪಿದುದು ಚಂದ್ರಿಕೆ ಭುವನಜನ ನಲಿಯೆ ॥ ೧೦

ಪಸರಿಸಿದ ಬೆಳುದಿಂಗಳಲಿ ನಿಂ
ದಸುರಹರನುತ್ಸಾಹಿಸುತೆ ರಾ
ಕ್ಷಸನ ಮಂತ್ರಿಯು ಕರೆದು ನುಡಿಸಿದನುಚಿತವಚನದಲಿ ।
ಅಸುರಪತಿ ಸುಕ್ಷೇಮಿಯೇ ಮ
ನ್ನಿಸುವನೇ ನೀಂ ಬಂದ ಕೃತ್ಯವ
ಸಸಿನೆ ಹೇಳೆನೆ ದಾನಪತಿ ಬಿನ್ನೈಸಿದನು ನಿಜವ ॥ ೧೧

ದೇವ ನೀನವತರಿಸಿದಂದವ
ದೇವಮುನಿ ಪೇಳಿದೊಡೆ ಮರ್ಕಟ
ಹಾವ ಕಂಡಂದದಲಿ ಸಿಡಿಮಿಡಿಗೊಂಡು ರಕ್ಕಸರ ।
ಸಾವನಡಿಗಡಿಗೆಣಿಸಿ ಬಡವೆಸು
ದೇವನನು ಕೊಲಲೆಂದು ಝೋಂಪಿಸ
ಲಾವು ಮಾಣಿಸಿ ಕಳುಹಿದೊಡೆ ಬಳಿಕಸುರನಿಂತೆಂದ ॥ ೧೨

ಬಿಲ್ಲ ಹಬ್ಬದ ನೆವದಲರಿಗಳ
ಭುಲ್ಲವಿಸಿ ತಾ ಹೋಗು ಕೊಲಿಸುವೆ
ನಿಲ್ಲಿ ವಿವಿಧೋಪಾಯದಲಿ ಮರೆಯೇಕೆ ದಿಟವೆಂದು ।
ಖುಲ್ಲನೆನಗೆ ನಿರೂಪಿಸಿದೊಡಾ
ನೊಲ್ಲೆನೆನ್ನದೆ ಬಂದೆನಲಸದೆ
ಬಲ್ಲಬಟ್ಟೆಯ ಕಾಣ್ಬುದೆಂದಕ್ರೂರ ಕೈಮುಗಿದ ॥ ೧೩

ಅಸುರನೆಮ್ಮನು ಕೊಲಲಿ ಮೇಣ್ಕ್ರ
ಸ್ನಿಸಲಿ ನಾನದಕಂಜೆ ನೀ ಶಂ
ಕಿಸದೆ ಹೆದರದೆ ಚಕಿತನಾಗದೆ ನಮ್ಮನೊಡಗೊಂಡು ।
ಬಿಸಜಸಖನುದಯದಲಿ ನಡೆ ನಾಂ
ಸಿಸುಗಳೆಂದುಮ್ಮಳಿಸಬೇಡೆನೆ
ನಸುನಗುತೆ ಕೃಷ್ಣಂಗೆ ಬಳಿಕಕ್ರೂರನಿಂತೆಂದ ॥ ೧೪

ದೇವ ಬಿನ್ನಹ ನೀತಿಧರ್ಮವು
ನೀವರಿಯದಿಹುದಿಲ್ಲ ಮೂರ್ಖರು
ನಾವು ನಿಮಗೆ ಯಥಾಸ್ಥಿತಿಯ [1] ಲಂಜಿಕೆ [1] ಯನರುಹಿದೊಡೆ ।
ಭಾವದಲಿ ಚಿಂತಿಸದೆ ಮೇಗಣ
ಸಾವಿಗಂಜದೆ ಹೋಹ ನಡೆಯೆಂ
ಬೀವಿರಾಗವ ನೀತಿಯನು ವಿಸ್ತರಿಸಿ ಹೇಳೆಂದ ॥ ೧೫

ಮರುಳೆ ಕೇಳಕ್ರೂರ ಪಣೆಯಲಿ
ಸರಸಿಜೋದ್ಭವ ಬರೆದ ಬರಹವ
ಮರಳಿ ತೊಡೆವೊಡೆ ಶಕ್ತನೇ ಮಾನವರ ಪಾಡೇನು ।
ಸಿರಿದರಿದ್ರತೆ ದುಃಖಸುಖವಾ
ವರಣಿಯುವವಸ್ಥೆಗಳಿವು ಜೀ
ವರಿಗೆ ಪೂರ್ವದ ಕರ್ಮಫಲವಕ್ರೂರ ಕೇಳೆಂದ ॥ ೧೬

* ಎಲ್ಲಿ ಸುಖ ಜೀವರಿಗೆ ವೇದನೆ
ಯೆಲ್ಲಿ ಜೌವನದೇಳಿಗೆಯು ಸಿರಿ
ಯೆಲ್ಲಿ ಮುಪ್ಪಿನ ತಪ್ಪಿನಪಜಯವಾವ ದೇಶದಲಿ ।
ಅಲ್ಲಿಗಯ್ದುವುದು ವಿಧಿ ಪುರಾಕೃತ
ವೊಲ್ಲೆನೆಂದೊಡೆ ಬಿಡದದಿದನಾ
ಬಲ್ಲೆ ಭಯಬೇಡೆಂದನಕ್ರೂರಂಗೆ ಮುರವೈರಿ ॥ ೧೭

---

1 ನಂಬುಗೆ, ಕಾ      * ಈ ಪದ್ಯವು ಬ. ದಲ್ಲಿಲ್ಲ

ಕೇಳಿ ಹರುಷಿತನಾಗಿ ಹರಿಗೆ ವಿ
ಶಾಲಮತಿ ಕೈಮುಗಿದು ಲಕ್ಷ್ಮೀ
ಲೋಲ ಕರುಣಿಸು ಸಕಲಧರ್ಮರಹಸ್ಯನೀತಿಗಳ |
ಹೇಳು ನಿನ್ನಯ ನಿಜವನೆನೆ ಶ್ರುತಿ
ಜಾಲದರ್ಥವನರುಹಿ ಭಕ್ತನ
ಪಾಲಿಸುವೆನೆಂದಸುರರಿಪು ಯದುಮಂತ್ರಿಗಿಂತೆಂದ || ೧೮

ಎನಗೆ ನಿಜ ಬೇರಿಲ್ಲ ನಿನ್ನಯ
ಮನದ ಕೊನೆಯಲಿ ನೋಡು ಪಿಕ್ಕನ
ಘನತೆಯನು [1] ಕೇಳುವೊಡೆ ಕಿವಿಯೆರಡಲ್ಲಿಗೈದುವುವು |
ಮನುಜಭವದಲಿ ಬಂದು ಮುನ್ನಿನ
ಘನವಿಳಾಸವ [2] ಕೇಳ್ದು [2] ದನುಚಿತ
ನಿನಗೆ ವಂಚಿಸಲಮ್ಮೆನೆಲೆಅಕ್ರೂರ ಕೇಳೆಂದ || ೧೯

ಶ್ರುತಿಗಳಿಗೆ ಮೈಗುಡದೆ ತರ್ಕ
ಪ್ರತತಿಗಳ ಜೋಳ್ಳೈಸಿ ಮುನಿಗಳ
ಮತಿಗಗೋಚರನಾಗಿ ಮಹದಾನಂದವಿಭವದಲಿ |
ಮತಹಲವನ [3] ವೆಗಡಿಸಿ [3] ತಾನ
ಪ್ರತಿಮನಾರಾಯಣನೆನಿಸಿ ಸಂ
ತತ [4] ನಪರದೊಳಗಿಹೆನು [4] ನಾನಕ್ರೂರ ಕೇಳೆಂದ || ೨೦

ಮತ್ತೆ ವಿಶ್ವಾತ್ಮಕನೆನಿಸಿ ಸ
ರ್ವೋತ್ತಮೋತ್ತಮನಾಗಿ ಧರಿಸಿ ಗು
ಣತ್ರಯವ [5] ನೀ [5] ಜಗದ ಜನನ ಸ್ಥಿತಿ ಲಯಂಗಳಿಗೆ |
ಕರ್ತೃವಹ ಸರಸಿರುಹಭವ ಪುರು
ಷೋತ್ತಮೇಶ್ವರ ನಾಮದಲಿ ಬಹು
ಮೂರ್ತಿಯಲಿ ಸಂಭ್ರಮಿಸುತಿಹೆನಕ್ರೂರ ಕೇಳೆಂದ || ೨೧

1 ನೀ ಕೇಳು, ಓ. 2 ಕೇಳ್ವು, ಓ. 3 ಳವಡಿಸಿ, ಕ.
4 ಪರಂಪರದೊಳಿಹೆ, ಕ. 5 ನಿಜ, ಓ.

ಭುವನವೆನ್ನಾಧೀನ ನಾನಾ
ಭುವನದಲಿ ಪರಿಪೂರ್ಣನಾ [1]ವಾ
ಸವ ಶಶಾಂಕ [1]ಹುತಾಶನಾಂತಕರಾದಿಯಾದವರು ।
ವಿವರಿಸುವೊಡೆನ್ನಂಶ ಮಿಕ್ಕನ
ದಿವಿಜ ನರ ಪನ್ನಗ ಮುನೀಂದ್ರ
ಪ್ರವರದಲಿ ಬಹುರೂಪಿಯಹೆನಕ್ರೂರ ಕೇಳೆಂದ ॥ ೨೨

ಅಸುರರನು ಮರ್ದಿಸುವ ನೆವದಲಿ
ವಸುಧೆಯೊಳಗವತರಿಸಿ ನಾನಿ
ರ್ಮಿಸಿದೆ ಧರ್ಮಾಧರ್ಮವರ್ಣಾಶ್ರಮವನಾರೈದು ।
ಸಿಸುತನದ ಲೀಲೆಯಲಿ ಯೌವನ
ದೆಸಕದಲಿ ವಾರ್ಧಕದವಸ್ಥೆಯೊ
ಳೆಸೆದು ಮುನ್ನಿನ ನಿಜದೊಳಹೆನಕ್ರೂರ ಕೇಳೆಂದ ॥ ೨೩

ಎನ್ನ ಗುಣವಿಕ್ರಮವ ಕೀರ್ತಿಸಿ
ಧನ್ಯವಹ ನರವಿಯಲಿ ನೆಲಸಿಹೆ
ನೆನ್ನ ವಲ್ಲಭೆ ತೊಳಸಿಯೆಲ್ಲಿಹಳಲ್ಲಿ ನಾನಿಹೆನು ।
ಎನ್ನ ಮಗಳಿಪ ಠಾವ ಬಿಡೆ ಸಂ
ಪನ್ನ ಸಾಲಗ್ರಾಮಶಿಲೆಯಲಿ
ಭಿನ್ನಪಂಕಜವನದೊಳಿಹೆನಕ್ರೂರ ಕೇಳೆಂದ ॥ ೨೪

ಹಾಡಿದೊಡೆ ಹರುಷಿಸುವೆ ಮಿಗೆ ಕೊಂ
ಡಾಡಿದೊಡೆ [2]ಹೆಚ್ಚು ವೆನು ಜಾನಿಸಿ[2]
ನೋಡಿದೊಡೆ ಸಂತುಷ್ಟನಹೆನರ್ಚಿಸಿದೊಡತಿಮೆಚ್ಚಿ ।
ಬೇಡಿದುದನೂಲಿದೀವೆ ನೆನೆದೊಡೆ
ಕೂಡಿಕೊಳ್ವೆನು ತರ್ಕಶಾಸ್ತ್ರದ
ವೇಡೆಗಾನೊಳಗಾಗೆನೆಲೆ ಅಕ್ರೂರ ಕೇಳೆಂದ ॥ ೨೫

[1] ಗೀಭುವನಕೇಶ, ಬ. [2] ಮೆಚ್ಚುವೆನು ರಾಗದೆ. ಬ.

ಭೂತದಯೆಗುಂದದೆ ಮದುಕ್ತಿಯು
ಮಾತನಾಡದೆ ಮರೆದುಮಾದು
ನೀರ್ತಿಯಲಿ ನಡೆಯದೆ [1] ದುರಾಚಾರದಲಿ ವರ್ತಿಸದೆ [1] ।
ಕಾತರಿಸಿ ಧನದಾಸೆಯಲಿ ಮನ
ಧಾತುಗುಂದದೆ ಪರಸತಿಗೆ ಮನ
ವೋತು ಕೂಡದೆ ಬಾಳ್ವನೆನ್ನವನಾತ [2] ತಾನೆಂದ [2] ॥ ೨೬

ಅಲಸಿಕೆಗೆ ಮೈಗುಡದೆ ಲೋಭದ
ಬಲೆಗೆ ಬೀಳದೆ ಚಿತ್ತದಲಿ ಸಂ
ಚಲತೆಯಿಲ್ಲದೆ ಮತ್ಪದಾಂಬುಜಸೇವೆಯನು ಬಿಡದೆ ।
ಹಲವ ಬಯಸದೆ ಪುಣ್ಯಪಾಪದ
ನೆಲೆಯ ನರಿದಿಹಪರವ ಗೆಲುವ
ಗ್ಗಳೆಯನೆನ್ನವನಾತ [3] ತಾನ [3] ಕ್ರೂರ ಕೇಳೆಂದ ॥ ೨೭

ಸಿರಿಗೆ ಹಿಗ್ಗದೆ ಬಡತನಕೆ ಜ
ರ್ಝರಿತನಾಗದೆ ಪರರು ಕೀರ್ತಿಸೆ
ಬೆರೆತಿರದೆ ನಿಂದಿಸಿದವರ ತಾ ಮರಳಿ ನಿಂದಿಸದೆ ।
ಹಿರಿಯರಲಿ ಗರ್ವಿಸದೆ ತನುವನು
ಪಿರಿದು ವಿಶ್ವಾಸಿಸದೆ ಸತ್ಯವ
ತೊರೆಯದಿಹ ಸತ್ಪುರುಷನೆನ್ನವನಾತ [4] ತಾನೆಂದ [4] ॥ ೨೮

ಯೋಗಿಗಳ ಹಳಿಯದೆ ನೃಪಾಲರ
ಭೋಗವನು ಬಯಸದೆ ಕುಬುದ್ಧಿಯ
ನಾಗಳಾಲೋಚಿಸದೆ ನಿಜಸುಖರೊಡನೆ ವಂಚಿಸದೆ ।
ಭೋಗದಲಿ ಬೇಸರದೆ ಮನಗನು
ರಾಗವನು ತೊಲಗಿಸದೆ ಬಾಳ್ವಸ
ರಾಗಿಯೆನ್ನವನಾತ [5] ತಾನ [5] ಕ್ರೂರ ಕೇಳೆಂದ ॥ ೨೯

1 ಪರಾರ್ಥವನೋಡಬೇಂದೆನಿಸಿ, ಕಾ 2 ಕೇಳೆಂದ, ಕಾ. 3 ನೃಪ, ಕಾ.
4 ಕೇಳೆಂದ, ಕಾ. 5 ನೆಲೆಯು, ಕಾ.

ಬಂಧುಗಳನಳಲಿಸದೆ ಸಜ್ಜನ
ವೃಂದವನು ಝುಂಕಿಸದೆ ಗುರುಗಳ
ಮುಂದಹಂಕರಿಸದೆ ದುರಾಚಾರದಲಿ ವರ್ತಿಸದೆ ।
ಬಂದೆಡರನೀಕ್ಷಿಸದೆ ಲೋಗರ
ನಿಂದೆಗೊಳಗಾಗದೆ ಮಹೋತ್ಸವ
ದಿಂದೆಸೆವ [1] ಸುಚರಿತ್ರನೆನ್ನವನಾತ ತಾನೆಂದ [1] ॥ ೩೦

ಹಿಂದೆ ಮಾಡಿದ ಭವಭವಂಗಳ
ಹಂದುಗವು ಜೀವರನು ನಾನಾ
ಛಂದದಲಿ ಬೇಸರಿಸಿ ಕಾಡುವುದದಕೆ ಬೆಂಬಿಳ್ದು ।
ಮುಂದುಗಿಡದೆ ವಿಧಾತ್ರಲಿಖಿತವಿ
ದೆಂದು ಧೈರ್ಯದೊಳಿರ್ಪ ನರನ
ನ್ನಿಂದೆ ವೆಗ್ಗಳನಾತ ತಾನಕ್ರೂರ ಕೇಳೆಂದ ॥ ೩೧

ಅತಿಶಯದ ಸಂಸಾರಸುಖದು
ನ್ನತಿಯನನುಭವಿಸುತ್ತಲಿದು ಪರ
ಹಿತವೆ ಸಾಧನವೆಂದು ಜಲದಾಂಬುದದ ಪೋಳ್ಕೆಯಲಿ ।
ಪ್ರತಿದಿನದೊಳೊಂದೊಂದು ದಾನ
ವ್ರತವನಡಿಸುವ ನಿಯತಬುದ್ಧಿಯ
ಚತುರನೆನ್ನವನಾತ ತಾನಕ್ರೂರ ಕೇಳೆಂದ ॥ ೩೨

ಕರಚರಣಸುಶ್ಲಾಘ್ಯನಮಲಾಂ
ಬರವಿಲೇಪನಯುಕ್ತನತಿಬಂ
ಧುರವಚೋವಿನ್ಯಾಸಸುಮುಖನುದಾರನನಸೂಯ ।
ಸರಸಚೇತನನೆನ್ನ ನಾಮ
ಸ್ಮರಣಪರಿಣತನೆನಿಸಿ ಬಾಳುವ
ನರನು ಜೀವನ್ಮುಕ್ತನೆಲೆ ಅಕ್ರೂರ ಕೇಳೆಂದ ॥ ೩೩

[1] ಭಕ್ತರುಗಳೆನ್ನವರವರು ತಾವೆಂದ, ಬಿ.

ಆಗಮಂಗಳನರಿದು ನಿರ್ಮಳ
ಯೋಗದಂತ್ಯವ ತಿಳಿದು ಕಲ್ಪಿತ
ಭೋಗವಿದು ನೆಲೆಯೆಂದು ಬಗೆಯದೆ ಭಾವಶುದ್ಧಿಯಲಿ ।
ಲೋಗರೆನ್ನವರೆಂಬ ಭೇದವ
ನೀಗಿ ನಿಸ್ಪೃಹನಾಗಿ ಬಾಳ್ವ ಸ
ರಾಗಿ ಜೀವನ್ಮುಕ್ತನೆಲೆ ಅಕ್ರೂರ ಕೇಳೆಂದ ॥ ೩೪

ಘೋರತರಸಂಸಾರವಿದು ನಿ
ಸ್ಸಾರ ದೇಹವನಿತ್ಯ ಸಂಪದ
ನೀರ ಬುದ್ಬುದ ಸತಿಸುತರು ಸಂತಾಪಕಾರಿಗಳು ।
ಸಾರ ಸದ್ಗುರುವಚನ ಧರ್ಮವಿ
ಚಾರ ಮತ್ಪದಭಕ್ತಿಯೆಂದರಿ
ದಾರು [1] ನಡೆವರವರನುಪಮ [1] ರಕ್ರೂರ ಕೇಳೆಂದ ॥ ೩೫

ಅಂಗಜಂಗಳುಕದೆ ಧನಾಸೆಗೆ
ಬೆಂಗೊಡದೆ ಷಡ್ವರ್ಗವಿಮುಖದಲಿ
ಭಂಗವಡೆಯದೆ ಗುರು ನಿರೂಪಿಸಿದಂತೆ ಮತ್ಪದದ ।
ಸಂಗವನು ನಿರ್ಧರಿಸಿ ಸುಕೃತವ
ಸಂಗಡಿಸಿ ನಿಶ್ಚಿಂತರಾಗಿಹ
ಮಂಗಳೋತ್ಕಟಕರಪ್ರತಿಮರಕ್ರೂರ ಕೇಳೆಂದ ॥ ೩೬

ಭಾಷೆಯಲಿ ಹುಸಿಯದೆ ನಿರಂತ
ದ್ವೇಷವಿಲ್ಲದೆ ಮನದ ಕೊನೆಯಲಿ
ದೋಷವನು ಚಿಂತಿಸದೆ ಶ್ರುತಿವಾಕ್ಯದಲಿ ಶಂಕಿಸದೆ ।
ಲೇಸು ಹೊಲ್ಲಹವೆರಡನತಿವಿ
ಶ್ವಾಸಿಸದೆ ನಿರ್ಭೀತರಾಗಿಹ
ಭೂಸುರೋತ್ತಮರಪ್ರತಿಮರಕ್ರೂರ ಕೇಳೆಂದ ॥ ೩೭

---

[1] ನಡೆವವರಪ್ರತಿಮ, ಖ. ಕಾ.

ಪರರ ದುಃಖವ ಕೇಳಿ ಮನವಲಿ
ಹಿರಿದು ಚಿಂತಿಸಿ ಪರರ ಪದವಿಗೆ
ಹರುಷ ಮಿಗೆ ಹಾರೈಸಿ ಪರರವಗುಣವ ಲೆಕ್ಕಿಸದೆ ।
ಪರರ ಗುಣವರ್ಣನೆಯ ಮಾಡುತೆ
ಪರರು [1] ತಾವಾನೆಂಬ [1] ಭಾವವ
ಧರಿಸಿಹನು [2] ಷಣ್ಮುಕ್ತ [2] ನೆಲೆ ಅಕ್ರೂರ ಕೇಳೆಂದ ॥ ೩೮

ಕಲಹದಲಿ ಸ್ಥೈರಣೆ ನಿಜಾಂಗನೆ
ಯಲಿ ರತಿವ್ಯಾಪಾರ ಸೂರಿಗ
ಳಲಿ ನಿರಂತರಸಖ್ಯ ಪಾಪವ್ಯಸನದೊಳು ಭೀತಿ ।
ಬಲವಿಹೀನರೊಳಭಯ ಸಿರಿ ಸಂ
ಚಲಿಸುವೆಡೆಯೊಳು ಧೈರ್ಯ ಸಜ್ಜನ
ರೊಳು ವಿನಯ [3] ವುಳ್ಳವನೆ ಎನ್ನವನೆಂದನಸುರಾರಿ [3] ॥ ೩೯

ಪರಮತತ್ತ್ವವ ತಿಳಿದು ಧರ್ಮ
ಸ್ಮರಣೆಯನು ಬಲುಹಿಡಿದು ಭಕ್ತಿಯ
ಪರಿಮಿತಿಯ ಲೆಕ್ಕಿಸುತೆ ಸಜ್ಜನಸಂಗದೊಳು ಸುಖಿಸಿ ।
ಗುರು ನಿರೂಪಿಸಿದಾಗಮವನಾ
ಚರಿಸಿ ಹರುಷಿಪ ಶಾಂತನಾಗಿಹ
ಗರುವನೆನ್ನವನಾತ ತಾನಕ್ರೂರ ಕೇಳೆಂದ ॥ ೪೦

ನಿತ್ಯವಲ್ಲದ ದೇಹವಿದು ವಶ
ವರ್ತಿಯಾಗಿಹುದರಿದೆನುತೆ ನಿಜ
ಕೃತ್ಯ ಲೋಪಿಸದಂತೆ ಸನ್ಮಾರ್ಗದಲಿ ಸಂಚರಿಸಿ ।
ಹೊತ್ತುಗಳೆಯದೆ ಮತ್ಪದಾಂಬುಜ
ದತ್ತ ಚಿತ್ತವನಿರಿಸಿ ನುಡಿಯಲಿ
ಸತ್ಯಹೊದ್ದದೆ ಬಾಳ್ವನೆನ್ನವನಾತ ತಾನೆಂದ ॥ ೪೧

---
1 ತಾನೆಂತೆಂಬ, ಕಾ 2 ತಾಮುಕ್ತ. ಕಾ. 3 ವುಳ್ಳತನೆನ್ನವನಾತ ತಾನೆಂದ, ಕಾ.

ಸಕಲವೇದವನೋದಿ ಶಾಸ್ತ್ರ
ಪ್ರಕರದರ್ಥವನರಿದು ವಿದ್ಯಾ
ಪ್ರಕಟನೆನಿಸಿ ಸಮಸ್ತತೀರ್ಥಕ್ಷೇತ್ರದೊಳು ಗಮಿಸಿ ।
ಬಕನ ವೋಲ್ ಚರಿಸುತ್ತ ಮತ್ಪದ
ಭಕುತಿಯತ್ನವನುಳಿವ ನರ ಡಂ
ಬಕನವನ ಷಟ್ಕರ್ಮ ನಿಷ್ಫಲವೆಂದನಸುರಾರಿ ॥ ४०

ಏನುಮರಿಯದ ಮೂರ್ಖಜಡನ
ಜ್ಞಾನಿ ಪಾಮರನಾಗಲಲಸದೆ
ಮಾನಸದೊಳೆನ್ನಂಘ್ರಿಪೂಜೆಯ ಮಾಡಿ [1] ಹರ್ಷದಲಿ ।
ಮಾನಸದೊಳೇ [1] ಮತ್ಕಥಾಶ್ರವ
ಣಾನುರಾಗದೊಳಿಪ್ಪನರನೇ
ಜ್ಞಾನಿ ಸರ್ವೋತ್ಕೃಷ್ಟನೆಲೆ ಅಕ್ರೂರ ಕೇಳೆಂದ ॥ ४३

ಪರಹಿತವನೆಣಿಸದೆ ಸುವಿದ್ಯರ
ಸರಕುಮಾಡದೆ ಧರಣಿಯಮರರ
ಪರಿಭವಕೆ ಬೆದರದೆ ಕುಲಸ್ತ್ರೀಜನವ ಪಾಲಿಸದೆ ।
ಗುರುಮುಖದಿ ಪರಿಯದೆ ಮದೀಯ
ಸ್ಮರಣೆಯಿಲ್ಲದೆ ಕೆಡುವ ಕಾಯವ
ಹೊರೆವನರನಿಹಪರಕೆ ಬಾಹಿರನೆಂದು ಬಗೆಯೆಂದ ॥ ४४

ಹಿರಿಯರಿಗೆ ವಂಚಿಸದೆ ಮನದಲಿ
ಕರುಣವಿಲ್ಲದ ಧರ್ಮಮರ್ಮದ
ಪರಿವಿಡಿಯ ಲೆಕ್ಕಿಸದೆ ಮಾತಾಪಿತರ ರಕ್ಷಿಸದೆ ।
ದುರುಳತನವನು ಬಿಡದ ಲೋಗರ
ಸಿರಿಗೆ ಪರಿತಾಪಿಸುತೆ ಬಾಳುವ
ನರನು ಪಾಮರನಿಹಪರಕೆ ಬಾಹಿರನು ಬಗೆಯೆಂದ ॥ ४೫

---

1 ದೇಹದಲಿ ಮಾನವಿಲ್ಲ ರ, ಕ .

ಅತಿಥಿಗಳ ಮನ್ನಿಸದೆ ನಿಯಮ
[1] ವ್ರತದೆ ನಡೆಯದೆ ತೀರ್ಥಯಾತ್ರೆಯ
ಗತಿಯನೋಡದೆ ಸತ್ಯನುಡಿಗಳ ಮೀರಿ ಸಂಚರಿಸಿ [1] |
ಯತಿಪದವನರ್ಚಿಸದೆ ವಿಷಯ
ಸ್ಥಿತಿಯ ಲಂಪಟರಾಗಿ ಬಾಳುವ
ಮತಿವಿಕಳರಿಹಪರಕೆ ಬಾಹಿರರೆಂದು ಹರಿ ನುಡಿದ || ೪೬

* ನಿತ್ಯಕರ್ಮವ ಬಿಟ್ಟು ಸತ್ಯದ
ವರ್ತನೆಯನವಗಡಿಸಿ ಮಿಗೆ ದು
ರ್ವೃತ್ತನಾಗಿಯೆ ತರ್ಕದಲಿ ಕಂಡವರ ಧಿಕ್ಕರಿಸಿ |
ವಿತ್ತವನು ವೆಚ್ಚಿಸದೆ ಲೋಗರ
ಚಿತ್ತದಲಿ ಖಳನೆನಿಸಿ ಬಾಳುವ
ಮತ್ತನಿಹಪರದೂರನೆಲೆ ಅಕ್ರೂರ ಕೇಳೆಂದ || ೪೭

ಹುಸಿ ಪರಸ್ತ್ರೀವ್ಯಸನ ವೈಸಿಕ
ಪಿಸುಣತನವನ್ಯಾಯ ಕುಟಿಲ
ವ್ಯಸನ ಕುಹಕೋಪಾಯ ಮತ್ಸರ ಹಿಂಸೆ ಡಂಬತನ |
ಮಸುಳಿಸಿದ ಮತಿ ವಿತ್ತವಂಚನೆ
ವಿಷಮಗತಿಯುಹ ವಿಗಡವನು ವ
ರ್ಜಿಸದ ನರರಿಹಪರಕೆ ಬಾಹಿರರೆಂದು ಬಗೆಯೆಂದ || ೪೮
*

---

[1] ವ್ರತವನಾಚರಿಸದೆ ಸುತೀರ್ಥ ಪ್ರತತಿಯಲಿ ಮೀಯದ ಸುದಾನತ್ಯಾಗ ವಿಲ್ಲೆನಿಸಿ, ಕಾ.

* ಈ ಪದ್ಯವು ಓ. ಪುಸ್ತಕದಲ್ಲಿಲ್ಲ.

* ಈ ಪದ್ಯಗಳು ಕಾ. ಪುಸ್ತಕದಲ್ಲಿ ಹೆಚ್ಚಾಗಿ ದೊರೆಯುತ್ತವೆ.

ವಾದ ವಶ್ಯ ವಿಕಾರ ತಂತ್ರವಿ
ಭೇದ ವಿವಿಧದ್ಯೂತಕೇಳಿಯು
ವೇದಭೂತದ್ರೋಹಚಿಂತನೆ ಮತ್ತಥಾಕ್ಷೇಪ |

ಈ ಪರಿಯಲಂಬುಜಾಕ್ಷನತಿಸಂ
ಕ್ಷೇಪದಲಿ ನಿಜನೀತಿಹಿತವ ನಿ
ರೂಪಿಸಿದೊಡಕ್ರೂರನಧಿಕಮನೋನುರಾಗದಲಿ |
ಶ್ರೀಪತಿಗೆ ಮೆಯ್ಯಿಕ್ಕಿ ಮಧುರಾ
ಳಾಪದಲಿ ಕೊಂಡಾಡುತಿರೆ ಬಳಿ
ಕಾಣಡುವಣಾದ್ರಿಯಲಿ ಮೆರೆದುದು ಬಿಂಬ ಹಿಮಕರನ || ೪೯

ಸಿರಿ ತೊಲಗಿದವನಿಪನೊ ಭರಿಕೈ
ಮುರಿದ ದಂತಿಯೊ ನೇಹದಿನಿಯಳ
ವಿರಹಿಯೋ ವರ್ಣಾಶ್ರಮೋಚಿತಧರ್ಮವನು ತೊರೆದ |
ಪರಮಋಷಿಯೋ ಬತ್ತಿದಬ್ಜಾ
ಕರದ ಹಂಸನೊ ಪೇಳೆನಲು ಸಿತ
ಕಿರಣನೆಸೆದನು ವರುಣದಿಗ್ಭೂಧರದ ಶಿಖರದಲಿ || ೫೦

ದೋಷದೊಡೆತನವೊಂದು ಮಿತ್ರ
ದ್ವೇಷವೊಂದಂಬುಜಕೆ ಸೇರದ
ದೋಷವೊಂದಹಿಯೆಂಜಲೆನಿಸಿದ ನಿಂದೆ ಮತ್ತೊಂದು |
ದೋಷದಬಲೆಯರಾಸ್ಯದಲಿ ಸಂ
ಕ್ಲೇಶಿಯಾಗಿಹುದೊಂದೆನುತೆ ಶಶಿ
ಹೇಸಿ ಮೆಲ್ಲನೆ ಜಾರಿದನು ಪಡುವಣ ಸಮುದ್ರದಲಿ || ೫೧

---

ಪಾದರಿಯ ಸಂಸರ್ಗ ಕುತ್ಸಿತ
ಬಾಧೆಯಲಿ ಕಷಾಯನೀಶ್ವರೆನಿಸುವ
ರಾದುರಾತ್ಮಕರತ್ಯಧಮರಕ್ರೂರ ಕೇಳೆಂದ ||
ತನು ಸುಖದೊಳಿರ್ಪಂದು ಯೌವನ
ತನಗೆ ವಶವಾದಂದು ಕೈಕಾ
ಲಿನಲಿ ಬಲವಿರ್ಪಂದು ಮತ್ಪದಭಜನೆಯಿಲ್ಲೆನಿಸಿ |
ವನಿತೆಯರಿಗೊಲಿದಕೃತ್ಯತವಿಂ
ದನವರತ ಕೀರ್ತಿಸುತ ಭವಬಂ
ಧನದೊಳಿಹ ನರರತ್ಯಧಮರಕ್ರೂರ ಕೇಳೆಂದ ||

ನಳಿನರಿಪುವಸ್ತಮಿಸೆ ತಾರೆಗ
ಳಳಿದುವಾತನ ಕೂಡೆ ಕುಮುದಿನಿ
ಯಳಲಿ ಮರುಗಿದಳಸುವ ಬಿಟ್ಟಳು ಯಾಮಿನೀದೇವಿ ।
ಬಳಿಕ ರವಿಯುದಯಿಸಿದೊಡಾತನ
ಬಳಗದೊಸಗೆಯ ಕಂಡು ಹರಿ ಗೋ
ಕುಲದೊಳೆಲ್ಲರಿಗರುಹಿ ಗಮನೋದ್ಯೋಗಪರನಾದ ॥ ೫೦

ಮೂರನೆಯ ಸಂಧಿ ಮುಗಿದುದು.

## ನಾಲ್ಕನೆಯ ಸಂಧಿ.

ಸೂ॥ ಗೋಪ[1] ಕಾಂತೆ[1] ಯರುಗಳಲಂತ
ಸ್ತಾಪವನು ತಾಂ ಬಿಡಿಸಿ ದನುಜಕ
ಮೂಪತಿಯನೊಡಗೂಡಿ ನಡೆದರು ಬಲ ಮುರಾಂತಕರು ॥

ಏಳಿ ತಡವೇಕೆಂದು ಬಲಗೋ
ಪಾಲರೆಲ್ಲರ ಕರೆದು ಗೃತ ಮದು
ಹಾಲು ಮೊಸರನು ಪಣ್ಪಲವು ಸಹಿತುಯ್ದು ಬಹುದೆಂದು ।
ಹೇಳುತಿರಲಕ್ರೂರನಾಗಳ
ಮೇಳಯಿಸಿದನು ರಥವನಾವನ
ಮಾಳ್ಪಿ ಬಲರುತ್ಸಾಹಮಿಗೆ ಸಿಂಗರಿಸಿದರು ತನುವ ॥ ೧

1 ಕನ್ಯ, ಬ.

ಪರಿಮಳೋದಕದಿಂದೆ ತೊಳೆದರು
ಚರಣವದನವ ಸಿತಪೀತಾಂ
ಬರವನುಟ್ಟರು ಪೂಸಿದರು ಸಿರಿಗಂಧಕತ್ತುರಿಯ ।
ಅರುಣಮಯಗುಂಜೆಗಳ [1] ಮುಕ್ತಾ [1]
ಭರಣವನು ತೊಟ್ಟೆಸೆವ ಮಲ್ಲಿಗೆ
ಬಿರಿಮುಗುಳ ತುರುಬಿದರು ರಾಮ ಮುಕುಂದರೊಲವಿನಲಿ ‖ ೨

ಕರಿಮುಖನ ಸತ್ಕರಿಸಿ ನಿಂದರು
ಹರಿ ಹಲಾಯುಧರವರ ಗಡಣದ
ತರುಣಗೋವಳರೆಸೆದರವ [2] ದಿರು [2] ನೈಜರೂಪದಲಿ ।
ಪಿರಿಯರಹ ನಂದಾದ್ಯಖಿಳಗೋ
ಪರು ಸುವಿಸ್ತರದಿಂದೆ [3] ಗರ್ಭೋ
ತ್ಕರದ ಕಂಬಿ [3] ಯ ಮುಂದಿಸಹಿತೈತಂದರೊಗ್ಗಿನಲಿ ‖ ೩

ಹರಿ ಬಲರು ಬಂದಾಯಶೋದೆಯ
ಚರಣದಲಿ ಮೈಯ್ಯಿಕ್ಕಿ ನರರಿಗೆ
ಪರಮಧರ್ಮವಿದೆಂಬುದನು ತೋರಿಸುವ ಮಾಳ್ಕೆಯಲಿ ।
ಕರುಣವಚನದಲಂಜಿ ಮಧುರೆಗೆ
ತೆರಳಲೇನಾವಮ್ಮ ಎನೆ ಕಾ
ತರಿಸಿ ಗದ್ಗದಕಂಠದಲಿ ಮರುಗಿದಳು ಲಲಿತಾಂಗಿ ‖ ೪

ಮಗನೆ ನಾನೆಂತಗಲಿ ಬದುಕುವೆ
ನಗೆಗೆಡೆಯ ಮಾಡಿದೆಯಲಾ ನಂ
ಬುಗೆಯ ಕಿಡಿಸಿದೆ ಮುಪ್ಪಿನವಳನ್ನಾರ ಸೇರುವೆನು ।

---

1 ಮೌಕ್ತಿಕ, ಬ. ಕಾ.  2 ದಿರುನಿಜಸ್ವರೂಪದಲಿ, ಬ. ರನಿಜಸ್ವರೂಪದಲಿ, ಕಾ.  3 ಗರ್ಭೋತ್ಕರದಸುರಭಿ, ಬ.

ಮೊಗವನೀಕ್ಷಿಸಿ ಸಕಲದುಃಖವ
ಬಗೆಯುದಿದ್ದೆನು ಬಿಟ್ಟು ಹೋಹುದು
ಸುಗುಣವೆಲ್ಲೆಂದಬಲೆ ತುಂಬಿದಳಳಲಿ ಕಂಬನಿಯ ॥ ೫

ನೋಡಿ ಹಿಗ್ಗುವೆನಡಿಗಡಿಗೆ ಕೊಂ
ಡಾಡಿ ಹಾರೈಸುವೆನಕಟ ಮುಂ
ಡಾಡಿ ದಣಿಯೆನು ಬಹಳ ತಡೆದರೆ ಹಲವ ಹಂಬಲಿಸಿ ।
ಬಾಡುವೆನು ಬಂದಪ್ಪಿದೊಡೆ ಮೊಗ
ನೋಡಿ ಪುಳಕಿತೆಯಹೆನು ಪಾಪಿಯ
ಮಾಡಿ ವಿಧಿಯಗಲಿಸಿತೆ ನಿಮ್ಮನೆನುತ್ತ ಹಲುಬಿದಳು ॥ ೬

ತಾಯೆ ಶೋಕಿಸಬೇಡ ವಿವಿಧೋ
ಪಾಯದಲಿ ಬಂದಲ್ಲದಿರೆನಾ
ನೀಯವಸ್ಥೆಯ ಕಂಡು ನಿಲುವೆನೆ ಕಂಸನಗರಿಯಲಿ ।
ನೋಯದಿರು ಚಿತ್ತದಲೆನುತೆ ಕಮ
ಳಾಯತಾಂಬಕನಾಯಶೋದೆಯ
ಕಾಯವನು ತಕ್ಕೈಸಿ ಚರಣಕ್ಕೆರಗೆ ಹರಸಿದಳು ॥ ೭

ಅಸುರ ನಿಮಗುಪಹತಿಗಳನು ಚಿಂ
ತಿಸದಿರಲಿ ನೀಂ ವಿಜಯರಾಗಿರಿ
ವಸುಮತಿಯ ಪತಿಯಾಗಿ ರಿಪುಗಳ ಸೀಳಿ ಸಮರದಲಿ ।
ಹಸುಳೆಗಳು ನೀಂ ಕಂಸನತಿಸಾ
ಹಸಿಕನಿಂದಿರಿ ಬೇಗ ಬಹುದೆಂ
ದೊಸೆದು ಹರಸಿದಳಪ್ಪಿ ಮುಂಡಾಡಿದಳು ನಂದನನ ॥ ೮

ತುರುಗಳನು ಬೋಳೈಸಿ ನೇಹದ
ಕರುಗಳನು ಮುಂಡಾಡಿ ಘೋಷದ
ಹಿರಿಯರಿಗೆ ಕೈಮುಗಿದು ದಧಿದೂರ್ವಾಕ್ಷತೆಯ ಧರಿಸಿ ।

ಪರಿಪರಿಯ ವಿವಿಧಾರತಿಯನಾ
ದರಿಸಿ ಕೈಕೊಳುತಸುರಮಂತ್ರಿಯ
ಹೊರೆಗೆ ಬಂದಡರಿದನು ಹರಿ ಬಲಸಹಿತ ಮಣಿರಥವ ॥ ೯

ಕೊಳಲ ದನಿ ತಂಬಟದ ರವ ಗೋ
ವಳರ ಬೊಬ್ಬೆಯ ರಭಸ ಹರೆಗಳ
ಮೊಳಗು ಕಹಳೆಯ ನಾದವಕ್ರೂರನ ಜಯಧ್ವಾನ ।
ಬಲ ಮುಕುಂದರ [1] ತೊಡಕು [1] ಬೇಡೆಂ
ದುಲಿವ ಗೋಪರ ನಾದ ಮಿಗೆ ದಿಗು
ವಳಯವೆನು ತುಂಬಿದುದು ಹರುಷಿತನಾದ [2] ನಕ್ರೂರ [2] ॥ ೧೦

ಆಸಮಯದಲಿ ಗೋಕುಲದ ಸುವಿ
ಳಾಸಿನಿಯರಕ್ರೂರ ಮಾಡಿದ
ಪೈಸಿಕವಿದೇನೆಂದು ಮನದಲಿ ನೊಂದು ತವಕದಲಿ ।
ಓಸರಿಸಿದುಡುಗೆಗಳ ಕೆದರಿದ
ಕೇಶಬಂಧದ ಕಂದಿದಾಸ್ಯದ
ಸೂಸಿದಂತಃಕರಣದವರೈತಂದರೊಗ್ಗಿನಲಿ ॥ ೧೧

ಮಲ್ಲಿಗೆಯ ಮಾಧವಿಯ ಜಾಜಿಯ
ಮೊಲ್ಲೆಗಳ ಮಂಟಪದಲೆಮ್ಮಯ
ಲಲ್ಲೆನುಡಿಗಳ ಸಲಿಸುವಾತನನುಳಿದು ಬದುಕುವೆವೆ ।
ಎಲ್ಲಿ ಹರಿಯಿಹನಲ್ಲಿಯೇ ಸುಖ
ವಿಲ್ಲಿ ಕಾಮನ ನನೆಯ ಬಾಣದ
ಘಲ್ಲಣೆಗೆ ನಿಲಲಾರೆವೆನುತೈದಿದರು ಚಪಲೆಯರು ॥ ೧೨

ಶಶಿಮುಖಿಯರುತ್ಪಲದಳಾಕ್ಷಿಯ
ರೆಸೆವ ಬಿಂಬಾಧರೆಯರುಜ್ಜ್ವಲ
ದಶನೆಯರು ಗುರುಕುಚೆಯರಗ್ಗದ ಕಂಬುಕಂಠಿಯರು ।

1 ತೋಟಿ, ಕಾ.   2 ನಹಿರಾಯ, ಕಾ.

ಅಸಿಯ ನಡುವಿನ ನೀರೆಯರು ಲಂ
ಬಿಸುವ ಕಬರೀಭರೆಯರೊಪ್ಪುವ
ನಸುನಗೆಯ ಕಲಹಂಸಗಮನೆಯರೈದಿವರು ಕೂಡೆ ॥ ೧೩

ಅಂಗಜನ ಮಸೆದಲಗ ಪ್ರೋಲ್ವ ರ
ಥಾಂಗಮಿಥುನಸ್ತನೆಯರತನುವಿ
ನಂಗನೆಯನಳುಕಿಸುವ ಗುರುಜಘನೆಯರು ಮನ್ಮಥನ ।
ಸಂಗರದೊಳೋಡಿಸುವ ಕಲ್ಪಲ
ತಾಂಗಿಯರು ಮದನನ ಶರೌಘನಿ
ಷಂಗಕಬರೀಭರೆಯರೈದಿದರಾಜನಾರ್ದನನ ॥ ೧೪

ಬಾಲೆಯರು ಯುವತಿಯರನಂಗನ
ಕೇಳಿಯಲಿ ಕೋವಿದೆಯರಿಚ್ಛೆಯ
ಪಾಲಿಸುವ ಬಾಲಕಿಯರೊಗ್ಗಿಸಿ ಮುನಿವ ಚದುರೆಯರು ।
ಆಳಿಗೊಳ್ ರಂಜಿಸುವ ಜಾಣಿನ
ಮೇಳದುದ್ದಂಡೆಯರು ಜೊತ್ತಿನ
ಸೂಳುಪಾಳಿಯೊಳಂಗನೆಯರೈದಿದರು ಗೋಪತಿಯ ॥ ೧೫

ಕರೆವ ಕೆಲಸವ ಬಿಟ್ಟು ಕಡೆವುದ
ಮರೆದು ಮಕ್ಕಳನುಳಿದು ಗಂಡರ
ತೊರೆದು ಮದನನ ಮದವಿಕಾರದಲಖಿಳಗೋಪಿಯರು ।
ನಿರಿಯನೋಸರಿಸುತ್ತಯಚ್ಯುತ
ನೆರಕೆಯಲಿ ಕಳವಳದ ಕರಣದ
ಲರಸುತೈದಿದರತ್ಯಧಿಕವಿರಹಾನುತಾಪದಲಿ ॥ ೧೬

ಮೊಲೆಯಲುಗೆ ಮುಡಿ ಸಡಿಲೆ ಕೊನೆಮುಡಿ
ಬಳಲೆ ಮಣಿಮೇಖಲೆಯ ಕಿಂಕಿಣಿ
ಕಳಲೆ ಸುಳಿಗುರುಳಳುರೆ ಮುಖದಲಿ ಬೆಮರ ಬಿಂದುಗಳು ।

---

* ಈ ಪದ್ಯಗಳು, ಓ. ಪುಸ್ತಕದಲ್ಲಿಲ್ಲ.

ಹೊಳೆಯೆ ಹೃದಯದೊಳಸಮಶರಶಿಖಿ
ಬಳೆದು ತಳವೆಳಗಾಗಿಸಲು ಗೋ
ವಳನನಂದರಸುತ್ತೆ ಬಂದರು ಗೋಪಕಾಂತೆಯರು ॥ ೧೭

† ನೋಡುವರು ಬೆರಗಾಗಿ ಬೆದರುತೆ
ಕೂಡೆ ಕರೆವರು ಕೃಷ್ಣ ಎನುತುವೆ
ಓಡುವರು ಮುಂದಿರ್ದ ಕಲು ಮುಳ್ಳು ಹಳ್ಳವೀಕ್ಷಿಸದೆ ।
ಬಾಡಿ ನಿಲುವರು ತಳಿತಮಾವನು
ಕೂಡೆ ಬಂದಪ್ಪುವರು ಕಾಮನ
ಬೀಡದೀ ಮರನೆಂದು ಹರಿವರು ಹಾರಿ ದೆಸೆದೆಸೆಗೆ ॥ ೧೮

† ನಡೆವ ಭರದಿಂದೆಡಹಿ ಬೀಳುವ
ರೊಡೆದ ವದನವನೊತ್ತಿಯೇಳ್ವರು
ಹಿಡಿಯ ನಡುವಿನ ಜಡಿವ ಕುಚಗಳ ಬಳಲ್ವ ಮುಡಿವಿಡಿಯ ।
ಮಡದಿಯರು ತಮತಮಗೆ ನೆರೆ ಮೊರೆ
ಯಿಡುತೆ ಜೀವವ ನಿಲಿಸಲರಿಯದೆ
ತಡೆಬಡದೆ ಗೋಪಿಯರು ನಡೆದರು ಕೃಷ್ಣನಿದ್ದೆಡೆಗೆ ॥ ೧೯

† ಮುತ್ತಿನೋಲೆಯ ಮೂಕುತಿಯ ಪಿಗೆ
ಹತ್ತುಕಟ್ಟಿದ ತರಳಮೌಕ್ತಿಕ
ದುತ್ತಮದ ಮಾಣಿಕದ ಮಣಿಗಳ ಸರದ ಹೆರೆನೊಸಲ ।
ಹತ್ತಿಸಿದ ಬಟ್ಟುಗಳ ಸಿರದಲಿ
ತೆತ್ತಿಸಿದ ಸಸಿರವಿಯ ಕಿರಣದ
ಮತ್ತಗಜಗಮನೆಯರು ಹರಿದರು ಹರಿದು ಹರಿಯೆಡೆಗೆ ॥ ೨೦

† ಕಾಲ ಕಡಗದ ಮೇಲೆಯಂದುಗೆ
ಕೀಲಿಸಿದ ಕಡೆಯಗಳ ಮುರಿಗೆಯ
ಮೇಲೆ ಕಟ್ಟಿದ ಗೆಜ್ಜೆಗಳ ಬೆರಳುಗುರುಪಿಲ್ಲಿಗಳ ।

---

† ಈಪದ್ಯಗಳು ಕಾ. ದಲ್ಲಿಲ್ಲ.

ಕಾಲ ಗತಿಗಳ ಕಣ್ಣ ಚೆಲುವಿನ
ಬಾಲೆಯರು ಬನದೊಳಗೆ ಬಂದರು
ಕಾಲ ಶೋಣಿತದೋರಣದೊಳಬಲೆಯರು ದುಗುಡದಲಿ ॥ ೨೧

† ಉಟ್ಟ ಸೀರೆಯ ಮರೆದು ಲಜ್ಜೆಯ
ಬಿಟ್ಟು ಮನ್ಮಥನುಪಟಳಕೆ ಕಂ
ಗೆಟ್ಟು ಮನದನುಗೆಟ್ಟು ಹೊಟ್ಟೆಯ ಹಿಡಿದು ನಡೆತಂದು ।
ಅಟ್ಟಹಾಸದ ಶೋಕದಲಿ ಮರ
ವಟ್ಟು ಗೋಪಿಯರೆಲ್ಲ ಕೃಷ್ಣನ
ನಿಟ್ಟಣಿಸಿದರು ದೃಷ್ಟಿಯಲಿ ಬಿಡುವೆನಿಯು [1] ತೆರವಿನಲಿ [1] ॥ ೨೨

ಕೊಸಲ ಬೆಮರಿನ ನಿಮಿರ್ದ ಕುರುಳಿನ
ಮಸುಳಿಸುವ ಬಿಳುಗಣ್ಣ ಬಸವಳಿ
ಪ್ರಸಿರ ಬರತಧರದ ಮಿಡುಂಕುವ ಕಂಬುಕಂಧರದ ।
ಮಸುನಿಗೊಡವೆನಲೆಸೆವ ಕುಚಯುಗ
ವಸವುಭಾರದಲುಡಿವ ನಡುವಿನ
ಸಸಿಮುಖಿಯರೊಗ್ಗಂದು ಬಳಿವಿಡಿದೈದಿತಚ್ಯುತನ ॥ ೨೩

* ಥಳಥಳಿಸುವೆಳವಿಾನ ಡಾಳವ
ಗೆಲುವ ಕಂಗಳ ಕೋಕಕುಚಯುಗ
ದಳಕುಟಿಲಕುಂತಳದ ಸುಳಿನಾಭಿಯ ವಳಿತ್ರಯದ ।
ಜಲಜವದನದ ಕಮಲಸಮಪದ
ತಳದ ವರಕಳಹಂಸಗಮನದ
ಲಲನೆಯರು ಬೆಂಬಿಡದೆ ಬಳಿವಿಡಿದಿರ್ದರಚ್ಯುತನ ॥ ೨೪

* ಕಳಶಕುಚ ನಡನಡುಗೆ ಮೇಲುದು
ತೊಲಗೆ ನಡೆ ದಡದಡಿಸೆ ನೇವುರ
ವುಲಿಯೆ ನೊಸಲಿನ ತಿಲಕ ನಸುಬೆಮರೇರೆ ತವಕದಲಿ ।

---

† ಈಪದ್ಯವು ಕಾ. ದಲ್ಲಿಲ್ಲ. 1 ತವಕದಲಿ. ಬ.
* ಈಪದ್ಯಗಳು ಬ. ಪುಸ್ತಕದಲ್ಲಿಲ್ಲ.

ಸೆಳೆನಡುವು ಸಲೆ ಬಳುಕೆ ಮತಿ ಸಂ
ಚಲಿಸೆ ದುಗುಡದ ಭಾರದಲಿ ಗೋ
ಕುಲದ ಸತಿಯರು ಬಂದರಾಗಚ್ಯುತನ ಸಮ್ಮುಖಕೆ ॥ ೨೫

ತರಳೆಯೊಬ್ಬಳು ಬರಲು ಕಂಡುರೆ
ಪುರುಳಿ ಕೋಗಿಲೆ ತುಂಬಿಗಳ್ ಬಂ
ದುರವಣಿಸಿ ಮೊರೆದೆರಗೆ ಕೋಪಿಸಿ ನೂಕಿ ನಡೆತರಲು ।
ಹರಿಣ ಹರಿ ಹಂಸೆಗಳು ಹರಿತರ
ಉರರೆ ಹರಿಗಂಡಂಜಿ ಕರದೊಳು
ಹರಿಯೆ ಹರಿ ನಾನಾಹರಿಯೆ ನೋಡೆಂದು ತೋರಿದಳು ॥ ೨೬

ತಳಿರು ನೆತ್ತರ ಕಾರೆ ಸಾಲಿನ
ಹೊಳೆವ ತಾರೆಯು ಹಾಗೆ ಕದಳಿಗೆ
ಬಳೆದು ಬಳಲಿಕೆ ತೋರೆ ಕಮಲದ ನಡುವೆಯುರಿಯೇರೆ ।
ಎಳಲತೆಯು ನೆರೆ ತಾರೆಯಮೃತದ
ಕಳಸಗಳು ಹೆರಸಾರೆ ಚಂದ್ರನ
ಕಳೆಯು ತನಿಬಿಳುಪೇರೆ ಬಿದ್ದಳು ಹರಿಯ ಚರಣದಲಿ ॥ ೨೭

ಕಮಲದೊಳಗುರಿಯೇಳ್ವ ಶಿಖಿಯಲಿ
ಕಮಲ ಕಂದಲು ಕಮಲಕೆರಗುವ
ಭ್ರಮರಗಳು [1] ಕೆದರಿದುವು [1] ಕಮಲದೆ ಕುಮುದದೆಸಳಿನಲಿ ।
ಕಮಲಜನನಿಯು ಜಾರೆ ನನೆಗಳ
ಕಮಲವಾನಲು ಕಮಲವೈರಿಗೆ
ಕಮಲವೆರಡುಮ ನಿರಿಸಿ ಬಿದ್ದಳು ಕಮಲಯುಗಳದಲಿ ॥ ೨೮

ಕರಿದುಬಿಳಿದಿನ ಕಡೆಯ ಕೆಂಪಿನ
ದವಿಯ ತೀರದೆ ಸುತ್ತುವಳಯದೆ
ಹರನರಸಿ ಪರಿಹರಿದು ಜಾರುತೆ ಬೀಳುತಿರೆ ಕಂಡು ।

---

ಈ ಪದ್ಯಗಳು, ಕಾ. ಪುಸ್ತಕದಲ್ಲಿಲ್ಲ. 1 ಬೆಚ್ಚಿದುವು, ಕಾ

ಹರಿಯು ತನ್ನಾತ್ಮಜೆಯ ಹಸ್ತದೊ
ಳೊರಸಿ ತರುಣಿಯುನಪ್ಪಿ ಕರದಲಿ
[1] ಭರದೆ [1] ಕಪ್ಪುರವೀಯೆ ಕತ್ತುರಿಯಾಗೆ ಬೆರಗಾದ ॥ ೨೯

| ಸಸಿಯೊಳಗೆ ಬೆಳದಿರ್ದ ಸಂಪಗೆ
ಯೆಸೆವ ಪರಿಮಳವುಂಬ ತುಂಬಿಯು
ಮುಸುಕುತಿಹ ಭ್ರಮರಗಳ ಬಂಧನವಿಕ್ಕಿ [2] ನಡೆತಂದು [2] |
ಉಸಿರ ಧಗೆ ಸಂದಣಿಸಿ ನುಡಿಗಳ
ನುಸಿರಲಾರದೆ ಬೀಳ್ [3] ಸತಿ ಹರಿ
ಸಸಿಯು [3] ಕರದೊಳಗೆತ್ತಿ ಕಮಲವು ಕಂಡೆ ಬೆರಗಾದ ॥ ೩೦

ತುಂಬಿ ಕಚ್ಚಿದ ಕೇದಗೆಯು ಗರಿ
ತುಂಬಿ ತುಳುಕುವ ಮುಂಬನಿಯು ಸತಿ
ತುಂಬಿ ಮದನಾಸ್ತ್ರದಲಿ ಚಲ್ಲುತ್ತಿರಲು ಹರಿ ಕಂಡು |
ತುಂಬಿಗಳ ನೇವರಿಸಿ ತ್ತುಂಬಿದ
ಕುಂಭಕಲಶದ ತುದಿಯ ತುಂಬಿಯು
ಚುಂಬಿಸುವ ಮೌಕ್ತಿಕದ ತುಂಬಿಯು ಕಂಡು ಬೆರಗಾದ ॥ ೩೧

ಹರಿಯು ವಿರಹದಲೊಬ್ಬ ಸತಿಯಾ
ಹರಿಯು ಕೂಡುವೆನೆಂದು ಭರದಲಿ
ಹರಿಯುನುಂಗುತ ಹರಿಯನುಗುಳುತ ಹರಿಯುತಿರೆ ಕಂಡು |
[4] ಹರಿಯು [4] ಹರಿ [5] ತಂದಪರಿದಾ [5] ಕ್ಷಣ
ಹರಿಕರಿಯ ಬಂಧನವ ಬಿಡಿಸಲು
ಹರಿಯ ತರುಣಿಯು ಸರಸವನು ಹರಿ ನೋಡಿ ನಗುತಿರ್ದ ॥ ೩೨

---

1 ಕಿರಿದ. ಓ. 2 ನಡೆತರಲು. ಓ. 3 ಹರಿಯಾಸತಿಯ. ಓ.
ಈ ಪದ್ಯವು ಕಾ. ಪುಸ್ತಕದಲ್ಲಿಲ್ಲ.
4 ಹರಿಯ, ಓ. ಹರಿವು, ಕಾ. 5 ತಂದಡರೆಯಾ, ಓ.

ಅಳಿಯು ಬಳಗದ ಫಣಿಯು ಶಿರದಲಿ
ಯುಳಿಯುದಾಹಾರದಲಿ [1] ಯೆರಗುತಿ
ಹಳಿಯು [1] ಸರ್ವಮೋಹಕರದಳಿಗಳ ನೆಳಲ ಸತ್ತಿಗೆಯು |
[2] ಅಳಿಯು [2] ಗರಿಗಾಳಿಯುಲಿ ಕಳೆಯು
[3] ತ್ತಿಳಿಯು ಮಿತ್ರನ ಮಿತ್ರನುಬ್ಬೆಯು [3]
ನಳಿಯು ಬಲುಮೆಯು [4] ಲಂಗಜಾಸ್ತ್ರವ [4] ಗೆಲ್ಲುತ್ತೈದಿದಳು || ೩೩

ಹಗಲ ಚಂದ್ರನ ಕಂಡು ಬೇಗದ
ಉಗುವ ಶಿಲೆಗಳ ಸಾರವನು ಸತಿ
ಮೊಗೆದು ಕಮಲದೆ ಕಮಲಕೆರೆಯುಲು ಕಮಲದೆಳವೆರೆಯು |
[5] ತೆಗೆದು ಸಾರವ ತುಂಬೆ [5] ನೈದಿಲ
ಬಿಗುಹು ಸಡಿಲಲು ಕರ್ಣಭವನದ
ತಗಹು ತೆಗೆಯುಲು ಹರಿದಳಂಗನೆ ಹರಿಯು ತಂಪಿನಲಿ || ೩೪

ಉಟ್ಟ ಕಾವಿಯು ಸೀರೆ ಬೆನ್ನಲಿ
ಬಿಟ್ಟ ಜಡೆ ಹೆರೆನೊಸಲ [6] ಚಂದ್ರದ [6]
ಬಟ್ಟು ಸಿರದಲಿ ತೆತ್ತಿಸಿದ ರವಿಶಶಿಯು ಕಿರಣಗಳ |
ತೊಟ್ಟ ಭುಜಕೀರ್ತಿಗಳ ನಡುವೊಳು
ಕಟ್ಟ ಫಣಿನೇವಳವ ಹರಿತಹ
ದಿಟ್ಟೆಯುನು [7] ತೆಗೆದಪ್ಪಿ [7] ಹರಿ [8] ಹರರಂತೆಯೊಪ್ಪಿದರು [8] || ೩೫

ಬಾಲೆಯೊಬ್ಬಳು ಜಡೆಯು ಸರ್ಪನ
ಮೇಲೆ ಸಂಪಗೆಯುರಲ [9] ತುಂಬಿಯೆ [9]
ಕಾಲ ಭರಣವ ತೆಗೆದು ಪುಣುಗುಜವಾದಿಗಳ ಪೂಸಿ |

---

1 ಯೆರಗುವ ಅಳಿಯು. ಬ. ಕಾ. 2 ಗಿಳಿಯು, ಬ.
3 ಈ ಐದನೆಯುಪಾದವು ಮಾತೃಕೆಗಳಲ್ಲಿ ನಾಲ್ಕನೆಯ ಪಾದವಾಗಿದೆ.
4 ನಂಗಜಾಸ್ತ್ರದಿ. ಕಾ.
5 ತೆಗೆದು ಸಾರವತುಂಬಿ, ಬ. ತೆಗೆದಸಾರವ ತುಂಬಿ. ಕಾ.
6 ಭಸ್ಮದ, ಕಾ. 7 ತೆಗೆದಪ್ಪಿ, ಬ. ಕಾ. 8 ಹರನಂತೆಯೊಪ್ಪಿದನು. ಕಾ.
9 ತುರುಬಿಗೆ. ಕಾ.

ಕಾಳಗಕ್ಕಿದಿರಾದ ಕಾಮಗೆ
ಭಾಳದಲಿ ಬಲುನಳಿನದೆಸಳನು
ಮೇಳವಿಸಿ ಬರುತಿರಲು ಹರಿ ಮೆಚ್ಚಿದನು ನಸುನಗುತೆ ॥ ೩೬

ತುಂಬಿ ತುಂಬಿಯು ಚುಂಬಿಸುತೆ ಮಿಗೆ
ಬಿಂಬಫಲವನು ಗಿಣಿಗಳರಗುತೆ
ಕುಂಭಕುಚ [1] ವರಬಾಹು [1] ಭಾವಕೆ ಬಿಡದೆ ಮದಗಜವು ।
ಅಂಬು ಧನುವಿಗೆ ಮದನಮಧ್ಯಕೆ
ಬೆಂಬಿಡದೆ ಹರಿ ನಡೆಯ ಚಲುವಿಗೆ
ಯಿಂಬುಗೊಂಡಿರುತಿಹುವು ಹಂಸೆಗಳೊಬ್ಬ ಬಾಲಕಿಯ ॥ ೩೭

† ಮುಡಿಯು ಮಾಲೆಯು ಮೇಲೆ ಮೊರೆವಾ
ರಡಿಯು ಮೊಲ್ಲೆಯು ಸಾಲ ಸಡಗರ
ದಡಿಗೆ ಗಡಣಿಸಿ ನಡೆವ ಹಂಸಿಯು ನಲಿವ ನವಿಲುಗಳ ।
ಬಿಡದೆಯುಡರುವ ಫಣಿಯು ಬಳಲುವ
ತೊಡರುಗಾಲಿನ ತೊದಲುನುಡಿಗಳ
ಮಡದಿಯೊಬ್ಬಳು ಮುಂದುಗಾಣದೆ ನಿಂದು ಮರುಗಿದಳು ॥ ೩೮

† ನೋಡಲಮ್ಮಳು ತೆರೆದು ನಯನವ
ನಾಡಲಮ್ಮಳು ಮಾತುಗಳನುರೆ
ಮಾಡಲಮ್ಮಳು ಮಂದಗಮನವ ಮುಂದಕಡಿಯಿಟ್ಟು ।
ಕೂಡಲಮ್ಮಳ ಅಳಕನಿಚಯವ
ನೀಡಲಮ್ಮಳು ಬೀಸಿ ತೋಳನು
ಹೇಡಿ ಮನದಲಿ ಹೆದರಿ ನಿಂದಳು ಬಿಗಿದ ಬೆರಗಿನಲಿ ॥ ೩೯

ನುಡಿಗೆ ಬೆದರುತಿರಧರ ವೇಣಿಗೆ
ನಡುಗುತಿರೆ ಮುಖ ಮುಖಕೆ ಪದತಳ
ನಡುಗುತಿರೆ ನಡುವಿಂಗೆ ಕುಚ ದಂತಕ್ಕೆ ಕರಯುಗಳ ।

---

[1] ನಳಿತೋಳ, ಬ. ಕಾ  † ಈ ಪದ್ಯಗಳು ಕಾ. ಪುಸ್ತಕದಲ್ಲಿಲ್ಲ.

ನಿಡಿಯ ತೋಳಿಗೆ ನಯನ ನಾಸಿಕ
ದೆಡೆಗೆ ಕುಂತಳ ವಳುಕೆ ತನು ನಡೆ
ನಡುಗುತಿಪ ಭೀತಿಯೊಳು ಬಂದಳು ಪರಿದು ಹರಿಯೆಡೆಗೆ ॥ ೪೦

† ತಗಡ ಕಂಕಣನಿಗಳದೋಳಿಯ
ತಗಡು ಬಳತಾತಿಗಳ ಪಙ್ಕ್ತಿಯ
ಬಿಗಿದ ಉಳಿಸರಪಳಿಯ ಮುಂಗೈತಳದ ಮುರುಡಿಗಳ ।
ಬಿಗಿದ ನಳತೋಳುಗಳ ಬಂದಿಯ
ವಿಗಡಭುಜಕೀರ್ತಿಗಳ ಹಾರದ
ಸುಗುಣಕಾಂಚಿಯ ದಾಮದಬಲೆಯರೈದಿದರು ಹರಿಯ ॥ ೪೧

† ಹರಿ ಹರಿಯುತೊಬ್ಬೊಬ್ಬರೈದಿಯೆ
ಭರದೆ ಹರಿಯನು ಹಿಡಿದು ತಮ್ಮನು
ಮರುಳುಮಾಡಿಯೆ ಹೋಹ ಪರಿ ಲೇಸಾಯ್ತಿದಿಂದಿನಲಿ ।
ಮರಳು ಮನೆಗಳಿಗೆಂದು ಕೃಷ್ಣನ
ಬರೆ ಸೆಳೆದು ಬಿಗಿಯಪ್ಪಿ ಮುದ್ದಿಸಿ
ಚರಣವನು ಹಿಡಿ ಹಿಡಿದು ಬಿನ್ನೈಸಿದರು ಗೋಪಿಯರು ॥ ೪೨

† ಆಟ ನಿನ್ನೊಳು ನಯನ ತಣಿಯಲು
ನೋಟ ನಿನ್ನೊಳು ಮುನಿಸು ಹರಿಸದ
ತೋಟ ನಿನ್ನೊಳ ಎಮಗೆ ಕಾಮನ ಬೇಟ ನಿನ್ನೊಳಗೆ ।
ಕೂಟ ನಿನ್ನೊಳು ಕೂಡಿ ತಣಿಯದ
ಮಾಟ ನಿನ್ನೊಳು ಬಲಿದ ನೇಹದ
ಘಾಟ ನಿನ್ನೊಳಗೆಂದು ಮರುಗಿದರಖಿಳನಾರಿಯರು ॥ ೪೩

† ಎಳಲತೆಯ ಮನೆಗಳಲಿ ಹೊಳೆವೆಳ
ದಳಿರ ಹಾಸಿಕೆಗಳಲಿಯಿರುಬಿನ

---

† ಈ ಪದ್ಯಗಳು ಕಾ ಪುಸ್ತಕದಲ್ಲಿಲ್ಲ.

ಬಳಿಯ ಬಳ್ಳಿಯ ಮೇಲೆ ಹಂಸೆಯ ತುಳಿಯ ಹಾಸಿನಲಿ ||
ಎಳನಗೆಯ ಸೊಗಸಿನಲಿ ನಮ್ಮಯ
ಕಳಶಕುಚಮಧ್ಯದಲಿಯೊಪ್ಪುವ
ಸುಲಭಕೃಷ್ಣನೆ ನಿನ್ನ ಮರೆದಾವೆಂತು ಬದುಕುವೆವು || ೪೪

† ಮದುರಮಾವಿನ ಹಣ್ಣ ನರಗಿಳಿ
ಕರ್ದುಕಿ ಕಂಗಳ ಮುಚ್ಚಿ ಪಕ್ಕವ
ಬಿದಿರಿ ಸಾರವ ತೆಗೆವವೋಲಧರಾಮೃತವ ಸವಿದು |
ಹೃದಯತಾಪವ ಕಿಡಿಸಿ ಕಾಮನ
ಕದುಬಿದಿಸುಗೆಯ ನಿಲಿಸಿ ಕೂಟದ
ಚದುರುಗಳ ಸವಿಗಲಿಸಿ ತೊಲಗಿದೊಡೆಂತು ಬದುಕುವೆವು || ೪೫

† ತಿಳಿಗೊಳದ ತೀರದಲಿ ರಂಜಿಪ
ಪುಳಿನದಲಿ ಬೆಳದಿರ್ದ ಹವಳದ
ಸೆಳೆಯ ಮಂಟಪದೊಳಗೆ ಹಾಸಿದ ತಳಿರ ಪುಷ್ಪಗಳ |
ಹಲವು ಪರಿಮಳಗಳನು ಸೂಸುವ
ಸುಳಿವ ಮಂದಾನಿಲನ ಸಾರದ
ಲೊಲಿಸಿಯೊಲುಮೆಯ ತೋರಿ ತೊಲಗಿದೊಡೆಂತು ಬದುಕುವೆವು||

† ಸರಸದಲಿ ಸವಿನುಡಿಯ ಮಾತಿನ
ಹರುಷದಲಿ ಹದಿರುಗಳ ಮುನಿಸಿನ
ಮರಸಿನಲಿ ಮಚ್ಚಿಕೆಯ ಮಮತೆಯ ಮರುಕದೊಲವಿನಲಿ ||
ಎರಕದೊಳಗೆವೆಯಿಕ್ಕದೀಕ್ಷಿಸಿ
ಸುರತಸುಖವನು ತೋರ್ಪ ನಿರ್ಮಳ
ಪರಮಪುರುಷೋತ್ತಮನೆ ನಿನ್ನನದೆಂತು ಮರೆದಿಹೆವು || ೪೭

ನಿನ್ನ ಸಂಗವ ಮಾಳ್ಪನೆಂದಾ
ಮುನ್ನ ನೋಂತೆನು ಹಲವು ನೋಂಪಿಯ
ನನ್ನ ಹೊನ್ನಿನ ಬಹುಳದಾನದ ಪುಣ್ಯಫಲದಿಂದೆ |

† ಈ ಪದ್ಯಗಳು ಕಾ. ಪುಸ್ತಕದಲ್ಲಿಲ್ಲ.

[1] ನಿನ್ನ ಸಂಗವ ಮಾಡಿ ನಿನ್ನಯ
ಚೆನ್ನ ತೋಳಿನಲೊರಗಿ ಮೆಚ್ಚಿದ
ಕನ್ನೆಯನು ನೀನಗಲಿದೊಡೆ ನಾನೆಂತು ಸೈರಿಪೆನು * ॥ ೪೮

† ಬಿರಿದ ಬಾಯುರೆದೆರೆದ ಕಂಗಳ
ಜರಿದ ಸೀರೆಯ ಕೆದರಿದಳಕದ
ಸುರಿವ ಬೆವರಿನ ಸೂಸುವುರಿ ಹೊಯ್ವಳ್ಳಿಗಳ ಭರದ ।
ಹರಳುಮುಳುಕಲ್ಲುಗಳ ಗಾಯಕೆ
ಸುರಿವ ನೆತ್ತರ ಪದದ ಪದ್ಮಿನಿ
ಹರಿಯ ಚರಣಕೆ ಬಂದು ಬಿದ್ದಳು ದೇಹವನು ಮರೆದು ॥ ೪೯

† ಮತ್ತೆಯೇಳದೆ ಹರಿಯ ಚರಣಕೆ
ಹತ್ತಿದಂದದೊಳಿರಲು ಕರದಿಂ
ದೆತ್ತಿ ಕುಳ್ಳಿರಿಸುತ್ತೆ ಕಂಡನು ವಿಕಟಜೀವನೆಯ ।
ಚಿತ್ತರಿಸಿಯಾಕೆಯ ಗುಣಂಗಳ
ಮತ್ತೆ ವೈದಡವಿದೊಡೆಯಾಸತಿ
ಚಿತ್ತಜನ ಜರೆಯುತ್ತೆಯೆದ್ದಳು ಮತ್ತೆ ವೈಮುರಿದು ॥ ೫೦

ಕಮಲಗಳು ಕನ್ನಡಿಯ ಹಿಡಿಯಲು
ಕಮಲ ಹಿಮಕರನೊಳಗೆ ಬೆರಸಲು
ಕಮಲದಗ್ರದ ಸಸಿಯ ಸಸಿಯೊಳಗಿಟ್ಟು ಮುಂಡಾಡಿ ।
ಕಮಲಗಳ ಕೇದಗೆಯ ದಳದಲಿ
ಬಮರಗಳ ಸಂತೈಸಿ ಕೂಡುವ
ಕಮಲನಾಭನೆ ನಿನ್ನ ಮರೆದಾನೆಂತು ಸೈರಿಪೆನು ॥ ೫೧

---

1 ನಿನ್ನ ಪಾದವ ಸೇರ್ದೆ ಮುನ್ನಿನ
ಜನ್ಮದಲಿ ಮಾಡಿದ್ದ ಪಾಪವ
ಸನ್ನುತನೆ ತರಿದೊಟ್ಟದೆನು ನೀನಗಲುವುದು ತರವೇ. ಕಾ.

† ಈ ಪದ್ಯಗಳು, ಕಾ. ಪುಸ್ತಕದಲ್ಲಿಲ್ಲ.

ಪ್ರಾಣವಲ್ಲಭ ಕೃಷ್ಣ ಮನ್ಮಥ
ಜಾಣನೆಚ್ಚಂಬುಗಳು ಮನವನು
ಹೂಣಿಸಿದುವಾನಳಿಯೆ ಹೆಂಗೊಲೆ ನಿನ್ನ ತಾಗುವುದು ।
ಕಾಣೆನಾಸೆಯುನೆನ್ನ ಜೀವದ
ಕೇಣಿಕಾರನು ನೀನು ಕೇಳ್ಕೈ
ಮಾಣೆ ಸೈರಿಸೆನೆನುತೆ ಬಿಗಿಯುಪ್ಪಿದಳು ಲತೆಗಳಲಿ ॥ ೫೦

ಚಂದ್ರಕಾಂತದ ಚಂದ್ರಶಾಲೆಯು
ಚಂದ್ರಮನ ಬೆಳಗಿನಲಿ ಚಂದ್ರನ
ಚಂದ್ರನಿಂ ಮುಂಡಾಡಿ ಚಂದ್ರನ ಚಂದ್ರನಿಂ ಸವಿದು ।
ಚಂದ್ರಗೆಣೆಮಾಣಿಕವ ರಂಜಿಸಿ
ಚಂದ್ರಮನ ಚಕ್ರಾಂಕಕೀಯುತೆ
ಚಂದ್ರಮನ ಕಳೆಯರಿತು ನೆರೆ ಗೋವಿಂದ ಬಿಡಲಾರೆ ॥ ೫೩

† ಎಳೆಯ ಬಾಳೆಯ ಬನದ ಮಧ್ಯದ
ಹೊಳವೆ ಹೊಂದಾವರೆಯ ಕೊಳದಲಿ
ಬೆಳದ ಹೇಮದ ಲತೆಯ ನೆಳಲೊಳಗುಲಿವ ಖಗಕುಲದ ।
ಗಳರವದ ಚುಂಬನದ ಪಾರಿವ
ಗಳ ಯುಗವನೀಕ್ಷಿಸೊಲಿದೊಲುವೊಯು
ನೆಲೆಯರಿದು ಮಿಗೆ ಕೂಡಿ ತಣಿಯದೆ ಕೃಷ್ಣ ಬಿಡಲಾರೆ ॥ ೫೪

* ಲತೆಯು ಮೇಗಣ ಗಿರಿಗಳನೆ ಎಳ
ಲತೆಯ ಕಮಲದೆ ಪಿಡಿದು ಲತೆಯನು
ಲತೆಗಳಿಂದವೆ ಬಿಗಿದು ಲತೆಯೆರಡೇಕವೆಂದೆನಿಸಿ ।

---

† ಈ ಪದ್ಯಗಳು ಕಾ. ಪುಸ್ತಕದಲ್ಲಿಲ್ಲ.

*ಈ ಪದ್ಯವು ಓ. ಪುಸ್ತಕ ದಲ್ಲಿಲ್ಲ

ಲತೆಯ ಭೇದದ ಸುರಗಿಯಿಂ[1]ದ[1]ವೆ
ಲತೆಗೆ ಪಟುತರಲತೆಯನೇರಿಸಿ
ಲತೆಗೆಯೆಳಸಸಿಯೊತ್ತಿ ಕೂಡುವ ಕೃಷ್ಣ ಬಿಡಲಾರೆ ॥ ೫೫

† ತುಂಬಿವೆರಿಗಳ ದುಂಡುದಂಡೆಗ
ಳಂಬಿನೊಳಗೊರಗಿರ್ದ ತುಂಬಿಯ
ನಂಬುಜದೆ ನಸು ಸೆಳದು ಬಿಂಬವ ಸವಿದು ಮಧ್ಯದಲಿ ।
ತುಂಬಿಯನು ಕುಳ್ಳಿರಿಸಿ ತುಂಬಿದ
ಕುಂಭಕಳಶದ ಮೇಲೆ ತುಂಬಿಗೆ
ತುಂಬಿ ಕತ್ತುರಿಯಿಡುವ ಮಣಿಯನು ಕೃಷ್ಣ ಬಿಡಲಾರೆ ॥ ೫೬

† ನಳನದೆಸಳಲಿ ಹೊಳವ ಜಲಚರ
ದೊಳಗೆ ತೊಳಗುವ ಕರಿಯ ಚಂದ್ರನ
ಲಲನೆಯರು ತಣಿವಂತೆ ನಿನ್ನಯ ಚೆಲುವಿಕೆಯ ತೋರಿ ।
ಬಳಿಸಿ ಬೇಟವ ಬಳಕ ಕೂಟವ
ಕಲಿಸಿ ಯಿಚ್ಛೆಯ ಸಲಿಸಿ ಕಾಮನ
ಗೆಲಿಸಿ ಮನ·[ವನು ಸೆಳದ ಸುಂದರ ಕೃಷ್ಣ ಬಿಡಲಾರೆ] ॥ ೫೭

‡ ..............................................

† ನಡು ನಡುಗೆ ಬಳುಕುತ್ತ ಕುಚಯುಗ
ಜಡಿಯುಲತ್ತ ನಿತಂಬ ತಮ್ಮೊಳು
ಕಡುನಿರೋಧವ ಮಾಡಲೊಪ್ಪುವ ಕಬರಿ ನಸುನಗೆಯ ।
ಹೊಡಕರಿಸುತಿದೆ ಯಿವರ ಜಗಳವ
ಬಿಡಿಸು ನೀನೆಂದಚ್ಯುತನ ಕಾ
ಲ್ವಿಡಿಯ ಬಂದುದೆನಲ್ಕೆ ನೆರೆದುದು ವಲ್ಲವೀನಿವಹ ॥ ೬೫

[1] ದೆ, ಕಾ.   † ಈ ಪದ್ಯಗಳು ಕಾ. ಪುಸ್ತಕದಲ್ಲಿಲ್ಲ.

‡ ಒಲೆಯ ಪುಸ್ತಕದಲ್ಲಿಯೂ 57ನೆಯ ಪದ್ಯದ ಮುಂದೆ ಏಳು ಪದ್ಯಗಳನ್ನು ಬರೆಯದೆ ಸ್ಥಳವು ಬಿಡಲ್ಪಟ್ಟಿದೆ.

ಸೋತವರನಗಲಿಪ ಸುರದ್ವಿಷ
ನೀತನೆನಿಸಿ ಮದೀಯಚಿತ್ತ
ಪ್ರೀತಿಯನು ಧಿಕ್ಕರಿಸಿ ನಂದಯಶೋದೆಯರ ಮನವ ।
ಮಾತಿನಲಿ ಮೋಹಿಸಿದ ದುಷ್ಟಂ
ಗೀತಕೀಯಕ್ರೂರವೆಸರ
ಖ್ಯಾತಲೋಚನ ತಿಳುಹೆನುತೆ ಮುತ್ತಿತು[1] ಸತೀನಿವಹ[1] ॥೬೬

ಬಂದಖಿಳಗೋಪಿಯರು ಕೃಷ್ಣನ
ಹಿಂದು ಮುಂದಿಕ್ಕೆಲದೊಳಳುಕದೆ
ಸಂದಣಿಸಿ ಕೈ[2] ಮುಗಿದು[2] ಮುದ್ದಿಸಿ ಮುನಿದು ಮುಂಡಾಡಿ ।
ಇಂದುಪರಿಯಂತೆಮ್ಮ[3] ನಂಬಿಸಿ[3]
ಬಂದಿನಿಡಿದೀಗಗಲಿ ಹೋಹೊಡೆ
ಕೊಂದು ಹೋಗೆಂದೆನುತೆ ಹೊರಳಿದರಂಘ್ರಿಕಮಲದಲಿ ॥ ೬೭

* ಲೇಸು ಲೇಸೈ ಕೃಷ್ಣ ನಮ್ಮನು
ಗಾಸಿಗೆಯ್ಯುತೆ ಪೋಗುವರೆ ಈ
ಮೋಸಗಾರಿಕೆವಿದ್ಯೆಗಳನೆಮ್ಮಲ್ಲಿ ನಡಿಸುವೆಯ ।
ಈ ಸಮಯದಲಿ ಬಿಟ್ಟು ಹೋಹ ವಿ
ಲಾಸವಿದು ಲೇಸಾಯ್ತು ಜೀವದ
ಲಾಸೆ ನಮಗಿಲ್ಲೆನುತೆ ಮರುಗಿದರಖಿಳಗೋಪಿಯರು ॥

ನಿಲ್ಲಿ ನೀವಂಜದಿರಿಯೆನುತು
ತ್ಫುಲ್ಲಪಂ ಕಜನೇತ್ರನೆಲ್ಲರ
ಬುಲ್ಲವಿಸಿ[4] ಮೈದಡವಿ ಕಂಬನಿದೊಡೆದು ಬಿಗಿಯಪ್ಪಿ[4] ।

---

1 ಸಖೀನಿವಹ, ಓ. 2 ನೆಗಹಿ, ಕಾ. 3 ಚಿತ್ತವ, ಕಾ.
* ಈ ಪದ್ಯವು, ಓ. ಪುಸ್ತಕದಲ್ಲಿಲ್ಲ.
4 ಗಲ್ಲವನು ಸಿರಿಹಸ್ತದಲಿತಾಪಿಡಿದು, ಕಾ.

ಬಿಲ್ಲ ಹಬ್ಬದ ಮರುದಿವಸ ಬಂ
ದಲ್ಲದಿರೆ ನಿಮ್ಮಾಣೆಯೆನೆ ಸಿರಿ
ವಲ್ಲಭಂಗೊಬ್ಬೊಬ್ಬರರುಹಿದರಳಲಿ ನಿಜಮತವ ॥ ೧೯

ನಂದನಂದನ ನಿನ್ನೊಡನೆ ನಾಂ
ಬಂದೊಡಲ್ಲದೆ ಮಾಣೆನೆನಗೇ
ನೆಂದು ಬುದ್ಧಿಯ ಪೇಳ್ವ ವೈಸಿಕವೆನ್ನ ಕೂಡೇಕೆ ।
ತಂದೆತಾಯ್ಗಳ ಬಂಧುವರ್ಗದ
ಬಂದಿಗಳುಕದೆ ಬಂದೆನೆಲೆ ಗೋ
ವಿಂದ ಸಲಹೆಂದೊರ್ವಸತಿ ಕಾಲ್ವಿಡಿದಳಚ್ಯುತನ ॥ ೨೦

ನಿನ್ನೊಲವನಾಂ ಬಲ್ಲೆನೆಲೆ ಸಂ
ಪನ್ನ ಶಶಿಮುಖಿಯಾಡಿ ತೋರುವ್ರೊ
ಡೆನ್ನ ನಿನ್ನಲಿ ಭೇದವೇನಾನಾವನೆಂದರಿಯಾ ।
ಮನ್ನಣೆಯ ಮಾನಿನಿಯ [1] ರಲಿ [1] ಸಂ
ಪನ್ನೆಯನು ನಾನಗಲಿ ಬದುಕುವ್ರೊ
ಡೆನ್ನ ತನುವುಕ್ಕಿನಲಿ ಮಾಡಿತೆ ಕಾಂತೆ ಹೇಳೆಂದ ॥ ೨೧

ಮುರಮಥನ ಚಿಕ್ಕಂದಿನೆನ್ನನು
ಮರೆಯಲಾಗದು ಕಂಸನಗರಿಯ
ತರುಣಿಯರ ಸಂಭೋಗಕಾಲದೊಳೆನ್ನ ನೆನೆದಿಹುದು ।
[2] ವಿರಹದಲಿ ನಾನಳಿದೆನಾದೊಡೆ [2]
ಮರಳಿ ನೀನಿದ್ದಲ್ಲಿ ಪುಟ್ಟುವ
ವರವ ಕೊಡು ಬೇಳ್ಕೊಂಡೆನೆಂದೆರಗಿದಳು ಚರಣದಲಿ ॥ ೨೨

ಅವಳ ನುಡಿಗುರೆ ಮೆಚ್ಚಿ ಕಮಲಾ
ಧವನತಿಪ್ರೇಮದಲಿ ನುಡಿದನು
ಧವಳಲೋಚನೆ ನಿನ್ನ ಮರೆದಾನಲ್ಲಿ ನೆಲಸುವೆನೆ ।

---

1 ರತಿ, ಕಾ.    2 ಮರೆದೆಯಾದೊಡೆ ಪ್ರಾಣನೀಗುವೆ, ಕಾ.

ತವಕಿಸುವ ತನು ನಿಲ್ಲದೀಲವ
ಲವಿಕೆ ಬಿಡದೀದೇಹಸುಖದನು
ಭವ ಭಡಾಳಿಸಿ ಮರಳಿ ನಿನ್ನೆಡೆಗೆಳದು ತಪುದೆಂದ ॥ ೭೩

ಎಲೆ ಮನಃಪ್ರಿಯ ಕೃಷ್ಣ ಕೇಳೆ
ನ್ನುಳಿವನೊಲಿವೊಡೆ ನಿನ್ನ ಕಂಗಳ
ಬೆಳಗ ನಿನ್ನಧರಾಮೃತವ ನಿನ್ನಾಸ್ಯಪಂಕಜ [1] ದ [1] ।
ಚೆಲುವಿಕೆಯ ನೆನೆವವೊಲು ಮನವನು
ಸಲಿಸಿ ನೀಂ ಬಹದಿನಕೆ ಬಾ ಮೇ
ಣುಳಿದೊಡಲ್ಲಿಗೆ ಕರಿಸು ನಂಬಿದೆನೆಂದಳೊಬ್ಬ ಸತಿ ॥ ೭೪

ತರುಣಿ [2] ಕೇಳೆನ್ನೊಲವ [2] ನಾಂ ಬಿ
ಟ್ಟಿರೆ ಸಮರ್ಥನೆ ನಿನ್ನ ಯೌವನ
ಸರಸಿಜಾತಕ್ಕೆನ್ನ ಮನ ಮದು ಹಂಸನೆಂದರಿಯಾ ।
ನಿರುತವಿದು ನಿನ್ನಾಣೆ ಬಹೆನೊಂ
ದೆರಡುದಿವಸಕೆ ಚಿಂತೆ ಬೇಡೆಂ
ದೊರೆದು ನಂಬುಗೆಗೊಟ್ಟು ಕಳುಹಿದನಾಸುವಾಸಿನಿಯ ॥ ೭೫

ಎಲೆ ಜನಾರ್ದನ ಹೋಗು ನೀನದ
ಕಳುಕುವವಳಾನಲ್ಲ ಮಿಕ್ಕಿನ
ಲಲನೆಯರ ಪರಿಯೆಂದು ನೋಡದಿರೆನ್ನ [3] ಚಿತ್ತವನು [3] ।
ಕಲುಷವಿಲ್ಲ ಮನೋಜಬಾಣದ
ಕೊಲೆಗೆ ಸೈರಿಸಲಾರದೀತನು
ವಳಿದೊಡೆನ್ನಪರಾಧವಿಲ್ಲೆನುತಿರ್ದಳಬುಜಾಕ್ಷಿ ॥ ೭೬

ಕಂಬುಕಂಧರೆ ಕೇಳು ನಿನ್ನ ಮು
ಖಾಂಬುಜದ ಪರಿಮಳಕೆ ಮೋಹಿಪ
ತುಂಬಿಯಲ್ಲವೆ ಎನ್ನ ತನು ನಾನಾಡಿ [4] ಫಲವೇನು [4] ।

---

1 ವ, ಬ್ಯ, ಕಾ. 2 ಕೇಳ್ನಿನ್ನೊಲವ, ಕಾ. 3 ಚಿತ್ತದಲಿ, ಕಾ.
4 ದೀವಸತ, ಕಾ.

ನಂಬಲಾಪೊಡೆ ನಂಬು ಬಯಲ [1] ವಿ
ಡಂಬದವನಾನಲ್ಲ [1] ಕೋ ರಸ
ದಂಬುಲವನೆಂ [2] ದಪ್ಪಿ [2] ಕಳುಹಿದನಾ ಸುವಾಸಿನಿಯ ॥ ೭೭

ದೇವ ನಿನ್ನ ಮುಖಾಬ್ಜವನು ಬಿ
ಟ್ಟಾವಪರಿಯಲಿ ಹದುಳಿಸುವೆ ನೆನೆ
ನೀ ವಿಕಳ ಮದ್ದೆ [3] ರೆ [3] ದಪ್ಪೋಲರೆಗಳಿಗೆಮಾತ್ರದಲಿ ।
ಸಾವೆ ನೀನಗಲಿದೊಡೆ ಬಳಿಕಿ
ನ್ನಾವಮಾತಿನಲೇನು ಫಲ ತನು
ಬೇವುದಿದೆ [4] ಎನಗೆಂ [5] ದು ಹರಿದಳು ಸತಿಯು ಸುಯ್ಯಿಡುತೆ [5] ॥ ೭೮

ಗಂಧಸಿಂಧುರಯಾನೆ ಬಾ ಮನ
ಗುಂದದಿರು ಸುಯ್ಯದಿರು ಮುಖದಲಿ
ಕಂದಿದೇತಕೆ ಚದುರತನಕಿದು ನೀತಿಯೇ ನಿನಗೆ ।
ನಂದನಾಣೆ ಧನುರ್ಮಹೋತ್ಸವ
ದೊಂದಿರುಳೊಳಲ್ಲಿರ್ದು ಮರುದಿನ
ಬಂದು ನಿನ್ನೊಡನಲ್ಲದಿರೆನಬ್ಜಾಕ್ಷಿಕೇಳೆಂದ ॥ ೭೯

ಏತಕೆಲೆ ದನುಜಾರಿ ಠಕ್ಕಿನ
ಮಾತಿನಲಿ ಬೋಸರಿಸಿ ನಮ್ಮನು
ಬೂತುಮಾಡದೆ ಹೋಗು ನಿನ್ನಯ ಚಿಂತೆ ನಮಗೇಕೆ ।
ನೀ ತರುಣ ನಿನಗೊಲಿವುದೆಮ್ಮಯ
ನೀತಿ ಸಾಕಂತಿರಲಿ ಜೀವದ
ಭೀತಿಯೆಳ್ಳನಿತಿಲ್ಲೆನುತೆ ಬಿಸುಸುಯ್ದಳಬ್ಜಾಕ್ಷಿ ॥ ೮೦

ಆ ಕಮಲಲೋಚನೆಯ ಚಿತ್ತದ
ಜೋಕೆಯನು ಹರಿಯರಿದು ನಿಸ್ಪೃಹೆ
ಯೀಕೆ ಹದುಳಿಸಲರಿಯಳೆನುತೇಕಾಂತದಲಿ ಕರೆದು ।

---

1 ವಿಡಂಬದಲಿ ಫಲವಿಲ್ಲ, ಬ. 2 ದಿತ್ತು ಕಾ.
3 ಡೆ. ಬ. 4 ಬೇವುತಿದೆ, ಬ. 5 ದಸತಿಯನು ಮನ್ನಿಸುತ ಹರಿಯ, ಕಾ.

ಸಾಕು ಸತಿ ನಿಬ್ಬರದ ನುಡಿಗಳ
ದೇಕೆ ಹೃದಯವನರಿದು ಮತ್ತಾವಿ
ವೇಕತನದಲಿ ಮುಳಿಯಬೇಡೆಂದೆನುತೆ ಕೈಮುಗಿದ ॥ ೮೧

ಮರುಳ ಮಾಧವ ನಿನ್ನ ಗುಣಸೌಂ
ದರಿಯ ಕಂಡೊಡೆ ರಾಜಧಾನಿಯ
ತರುಣಿಯರು ಬರಲೀಯರದು ದಿಟವೆನ್ನ ಚಿತ್ತದಲಿ ।
ಮರಳಿ ನೀ [1] ಹದನರಿದು [1] ನೇಹದ
ಪರಿವಿಡಿಯ ಮಾತುಗಳನಾಡದೆ
ತೆರಳು ಮಧುರಾಪುರಿಗೆ ಬೇಗದೊಳೆಂದಳಿಂದುಮುಖಿ ॥ ೮೨

ಲಲನೆ [2] ಚಿತ್ತೈಸಲೆ [2] ನಿತಂಬಿನಿ
ಮುಳಿಯದಿರು ನಳಿನಾಕ್ಷಿ ಚಿತ್ತದ
ಕಲುಷವನು ಬಿಡು ಸುದತಿಯಳಲದಿ [3] ರಬಲೆ ಬಾಯೆಂದು [3] ।
ಬಲವು ಮಿಗೆ ಬಿಗಿಯಪ್ಪಿ ರಸದಂ
ಬುಲವನಿತ್ತು ಸರಾಗದಲಿ ಮುಡಿ
ಯಲರನೆಲ್ಲರಿಗಿತ್ತು ಹರಿ [4] ಗೋಪಿಯರ [4] ಬೀಳ್ಕೊಂಡ ॥ ೮೩

ಹಿಂದೆ ತುರುವಿಂಡುಗಳ ಕಾದಿಹ
ಮಂದಿಯನು ಪರುಠವಿಸಿ ಕಳುಹುತೆ
ಬಂದ ಹಿರಿಯರ ನಿಲಿಸಿ ಬಹ ಗೋವಳರ ಬೋಳೈಸಿ ।
ಮುಂದಣಧ್ವಕೆ ಬೋನವನು ತಹು
ದೆಂದು ನೇಮಿಸಿ ರಾಮಸಹಿತ ಮು
ಕುಂದ ತೆರಳಿದನಳ್ಳಿರಿವ ಬಹುವಾದ್ಯರಭಸದಲಿ ॥ ೮೪

ಬಳಿಕ ರಥವೆಚ್ಚಂಬಿನಂತು
ಚ್ಚಳಿಸಿ ಹಾಯ್ದುದು ಹಯದ ಖುರಪುಟ
ದಳಿತಭೂರಜ ಮುಸುಕಿತಭ್ರದೊಳರ್ಕಮಂಡಲವ ।

---

1 ಬಹುದರಿದು, ಕಾ. 2 ಚಿಂತಿಸದಿರು, ಕಾ.
3 ರಿನಿತುಮನನೊಂದು, ಓ. 4 ಗೋಕುಲವ, ಕಾ.

ಬಳಿಯಲ್ಲೈದಿಯೆ ಬಹವರನು ಕಂ
ಡಳವಳಿದು ಗೋಪಿಯರು ಬಿಡದು
ಮ್ಮಳಿಸುತುವೆ ನೆನೆಯುತ್ತುಮಿರ್ದರು ಹರಿಯ ಸದ್ಗುಣವ ॥೮೫॥

ನಾಲ್ಕನೆಯ ಸಂಧಿ ಮುಗಿದುದು.

---

## ಐದನೆಯ ಸಂಧಿ.

ಸೂ॥ ದನುಜಹರನಕ್ರೂರದೇವನ
ಮನದ ಭಕ್ತಿಗೆ ಮೆಚ್ಚಿ ತನ್ನಯ
ಘನತೆಯನು ತೋರಿದನು ಯಮುನಾನದಿಯ ತೀರದಲಿ[1] ॥

ಹರಿಯ ವಿರಹವ್ಯಥೆಯ ಸೈರಿಸ
ಲರಿಯದಾಗೋಪಿಯರು ಕಾಮನ
ಸರಳ ಬಂದಿಗೆ ತನುವನೊಪ್ಪಿಸಿ ದೀನಭಾವದಲಿ ।
ಮರುಗಿ ರಸದಂಬುಲವ ಗಂಧಾ
ಭರಣಸುಮನೋಗೀತವೆಲ್ಲವ
ತೊರೆದು ಧೃತಿಗೆಟ್ಟಳಲುತಿರ್ದರು ಬಹಳದುಗುಡದಲಿ ॥ ೧

ಸರಸಿರುಹ ಹಿಮಸಮಯದಲಿ ಮನ
ಮರುಗುವಂತೆ ರಥಾಂಗಕಾಂತೆಯು
ರಿರುಳು ಶೋಕಿಸುವಂತೆ ಕುಮುದಿನಿ[1] ಯುರ್ಯಮಾಂಗದಲಿ[1] ।
ಕೊರಗುವಂತೆ[2] ಘನಾಗಮದ ಸಿತ
ಕಿರಣನಂತೆ ಕವಿತ್ವಜನಮನ
ದಿರವುವೋಲ್[2] ವಲ್ಲಭೆಯರಿದ್ದರು ಹಲಪ್ರಚಿಂತೆಯಲಿ ॥ ೨

---

1 ರವಿಯು ರೌದ್ರದಲಿ. ಕಾ. 2 ಘನಾಮುದದಸಿತದೀಧಿತಿವಿನಂತೆ ಕಪಿಧ್ವಜನಗಳ ಯಿರದವೊಲು, ಓ. ತಘನಾಮುದದಸಿತದೀಧಿತಿವಿನಂತೆ ಕವಿತ್ವಕೃತಿಗಳ ಮನದ ವೋಲ್, ಕಾ.

* * *

ನೆನೆನೆನೆದು ಸಿಗ್ಗಾಗಿ ಸುಯ್ದಾ
ಸ್ತನದ ಬಳಗೆದೆಗುಂದಿ ಮನವಿ.
ಟ್ಟನವರತ ಹಂಬಲಿಸಿ ಕಂಬನಿದುಂಬಿ ತಾಪದಲಿ |
ಕನಸಿನಲಿ ಕಳವಳಿಸಿ ಮೂರ್ಛೆಗೆ
ಮನವ ತೆತ್ತವರಂತೆ ಮಧುಸೂ
ದನನ ವಿರಹದಲಿರ್ದರಾಗೋಪಿಯರು ವಂಗಡಿಸಿ ‖ ೩

ಸಿರಿಯುರಸನಿಹ ವರುಷ ತಾನೊಂ
ದರೆಗಳಿಗೆಯಾಗಿರ್ದ ದಾಹರಿ
ತೆರಳಿದೊಂದರೆಗಳಿಗೆ ಯುಗಶತವಾದುದಕಟೆನುತೆ |
ಹರುಷವನು ಬೀಳ್ಕೊಟ್ಟು ಚಿಂತೆಯು
ಕರೆದು ಮನ್ನಿಸಿ[1] ಮದನಶರಪಂ
ಜರದೊಳಹ ಸಾರಿಕೆವೊಲಿರ್ದರು [1] ನಿಖಿಳಗೋಪಿಯರು ‖ ೪

ಮುಳಿಸರಿದು ಮನ್ನಿಸುವನೊಲುಮೆಯು
ನೆಲೆಯರಿದು ಬೋಳೈಸಿ ಚಿತ್ತವ
ನೊಳಗುಮಾಡುವನಾಸೆಯರಿದಾಲಿಂಗಿಸುವನೊಲಿದು |
[2] ಕಲೆ [2] ಯರಿದು ಚುಂಬಿಸುವ ನಲಿದ
ಗ್ಗಳಿಸಿ ಕೂಡುವ ಮೇಲಣುಚಿತವ
ನುಳುಹದಿಹನೇನೆನುತೆ ಹಂಬಲಿಸಿದರು ತಮ್ಮೊಳಗೆ ‖ ೫

---

* ಗೋವಳರ ಕಾಂತೆಯರು ಕೃಷ್ಣನ
ಜೀವದನುವನು (ನೆನೆದು) ಕೃಷ್ಣರ
ಪೂವರನೆ ಮಿಗೆ ಕೃಷ್ಣಪುರುಷನೆಯೆಂದು ಮಕ್ಕಳನು |
ಜೀವತಮುವಲ್ಲಭರ ಕೃಷ್ಣಾ
ಎನ್ನುತಾಕಡೆ ತಿರುಗಿ ಕೃಷ್ಣನ
ಭಾವದಲಿ ಮುಳುಗಿರ್ದರುನ್ನತವಿರಹವಿಕಳದಲಿ ‖

ಎಂದೊಂದಶುದ್ಧಪದ್ಯವು ಕಾ. ಪುಸ್ತಕದಲ್ಲಿ ಎರಡನೆಯ ಪದ್ಯದ ಮುಂದೆ ಹೆಚ್ಚಾಗಿ ದೊರೆಯುತ್ತದೆ.

1 ಮನದ ಪದಪಂಕಜದೊಳಹ ಸಾರಿಕೆಯೊಳೊಪ್ಪಿತು, ಬ.

2 ಕಳೆ, ಬ.

ಸರಸದಲಿ ಸವಿನುಡಿಗಳಲಿ ಬೋ
ಸರಿಸುವುಚಿತೋಕ್ತಿಯಲಿ ಕೊಡುವಾ
ದರಣೆಯಲಿ ಮನ್ನಣೆಯ ಲಂಚಿಕೆಯಲಿ ವಿಳಾಸದಲಿ |
ಕರುಣಿತನದಲಿ [1] ಮದನಸುಖದಿಂ
ಬರಿವ [1]ಚಾತುರ್ಯದಲಿ ಕೃಷ್ಣನ
ಸರಿದೊರೆಯ ವಿಟನಾವನೆಂದಳಲಿದರು ಗೋಪಿಯರು || ೬

ಹಿಂಗಿದನು ಹರಿಯೆಂಬ ನುಡಿ ನಮ
ಗಂಗವಲ್ಲ ಮದೀಯಹೃದಯೋ
ತ್ತುಂಗಪೀಠದೊಳಕ್ಷಿಗಳೊಳೋರಂತೆ ಸೆರೆವಿಡಿದು |
ಭಂಗಪಡುವುದು ನೀತಿಯಲ್ಲೆನು
ತಂಗನೆಯರಚ್ಯುತನ ಕೂರ್ಮೆಯ
ಸಂಗವನು ನೆನೆನೆನೆದು ಸಂತೈಸಿದರು ತನುಮನವ || ೭

* * *

ಇಂತು [2] ಸೈರಿಸಿ [2] ಕೃಷ್ಣವಿರಹದ
ಚಿಂತೆಯನು ಪೊರಮಡಿಸಿ ಘೋಷದ
ಕಾಂತೆಯರು ಸ್ವೈರಣೆಯ ಸಂಭಾವಿಸಿದರಿಚ್ಛೆಯಲಿ |
ಕಂತುಪಿತನಕ್ರೂರಸಹಿತ
ಧ್ವಾಂತದಲಿ ಬರುತಿರ್ದ ಶಕುನದ
ಹಂತಿಗಳನೀಕ್ಷಿಸುತೆ ನಡೆದನು ವನದ ಮಧ್ಯದಲಿ || ೮

---

1 ಮನದಸುಖದಿಂಬರಿಯ, ಕಾ.

* ಗೋವಳರು ಮಿಗೆ ಕೃಷ್ಣವರ್ಣದ
ಜೀವದನುವನು ನೋಡಿ ಕೃಷ್ಣನ
ಭಾವದಲಿ ಮುಳುಗಿರ್ದರುನ್ನತವಿರಹವಿಕಳದಲಿ |
ಆವಪರಿಯಲಿ ನಮ್ಮ ದೇವನ
ಭಾವಿಸಿಯೆ ಕೊಂಡುಯ್ದನೆಮ್ಮಯ
ಜೀವದಾಸೆಯದೇತಕೆಂದರು ಗೋಪರುಳಿದವರು ||

ಅಪ್ರಕೃತವಾದೀಪದ್ಯವು, ಓ. ಪುಸ್ತಕದಲ್ಲಿ ಏಳನೆಯ ಪದ್ಯದ ಮುಂದೆ ಹೆಚ್ಚಾಗಿ ದೊರೆಯುತ್ತದೆ.

2 ಹದುಳಿಸಿ. ಕಾ.

ಚಾಲ ಚಂದನ ಪನಸ ವಟವುಂ
ತಾಲ ಕಗ್ಗಲಿ ನೆಲ್ಲಿ ತಡಸಂ
ಕೋಲಿ ಬೆಲೆವತ್ತಿಸೆವ ಸೂರ್ಯನಭಕ್ತ ಮುಳುಮುತ್ತ ।
ಹಾಲೆ ತದುಕೆಲೆಗಳ್ಳಿ ಗೊರವಿ ತ
ಮಾಲ ಬೊಬ್ಬುಳಿ ದಿಂಡೆಲವ ಕ
ದಾರ್ಳ ಗೇರ್ದಿಪ್ಪೆಗಳನೀಕ್ಷಿಸುತಸುರರಿಪು ನಡೆದ ॥ ೯

ತಾರೆ ತರಿಯು ಸಿತಾರ್ಕ ಕೇಸರ
ಗಾರೆ ಬಿಳಲಿಮ್ಮತ್ತಿ ಬಿಲ್ವ ಭ
ಯಾರಿ ಚಿಲ್ಪರೆನೇರಿಲೌದುಂಬರವು ಹೆಜ್ಜಾಲಿ ।
ಬೋರೆ [1] ಶಾಲ್ಮಲಿ [1] ನಗರೆ ಹೊನ್ನೆ ನ
ಮೇರು ಹಲುಮಾಣಿಕ್ಯ ಘನಗಾಂ
ಧಾರಿಗಳ ಮಧ್ಯದಲಿ ನಡೆದುದು ತೇರು ಮುರಹರನ ॥ ೧೦

ಇಕ್ಕರಿಸಿ ಬೆಳದಖಿಳವೃಕ್ಷದ
ತೆಕ್ಕೆಯಲಿ ವಂಗಡಿಸಿ ಚಾರುವ
ಸೊಕ್ಕಿದಾನೆಯ ಸೀಳ್ದು ಹರಹುವ ವಿಗಡಕೇಸರಿಯ ।
ಧಿಕ್ಕರಿಪ ಶರಭಗಳ ಡಾವಣಿ
ಲೆಕ್ಕಿಸದ ಭೇರುಂಡ ಸಹಿತಿವ
ಸಿಕ್ಕಿಸುವ ಲುಬ್ಧಕರ ನೀಕ್ಷಿಸುತಸುರರಿಪು ನಡೆದ ॥ ೧೧

ಮರೆ ಕಡವೆ ಕಾಳ್ಕೋಣ ಪೆರ್ಬುಲಿ
ಕರಡಿ ಮೊಲ ಸಾರಂಗ ಸೂಕರ
ಹರಿಣ ಮೊದಲಾದಖಿಲಮೃಗಗಳ ಕುಂಜರಾಜಿಗಳ ।
ನೆರವಿಗಳನರೆಯಟ್ಟಿ ಕೊಲಲು
ಬ್ಬರಿಪ ಬೇಡರ ದನಿಯ್ಕೆ ಹೊದರೆ
ದ್ದುರಿವ ದುವ್ವಾಳಿಗಳ ನೀಕ್ಷಿಸುತಸುರರಿಪು ನಡೆದ ॥ ೧೨

1 ಪಾಲ್ಮರ. ಕಾ.      * ಈ ೧೨ನೆಯ ಪದ್ಯವು ಬಿ. ಪುಸ್ತಕದಲ್ಲಿಲ್ಲ.

ಅಂಬರವನೆಂಡಲೆವ ಶೈಲನಿ
ತಂಬದಿಂದೊಸರ್ದಿಳಿವ ನಿರ್ಝರ
ದಿಂಬುವಿಡಿದವ್ವಳಿಪ ಕಾನನದುಚ್ಛಳಿಸಿ ಬೆಳದು |
ಲಂಬಿಸುವ ಪೆರ್ಬಿದಿರ ರವಕೆ ನಿ
ಗುಂಬಿಸುವ ರವಿರಥತುರಗವ ವಿ
ಡಂಬಿಸುವ ಮರ್ಕಟವನೀಕ್ಷಿಸುತಸುರರಿಪು ನಡೆದ || ೧೩

ಗಿರಿತರುವ್ರಜ ವಿಷ್ಣುಪದಸಂ
ಸ್ಪರುಶದಿಂದೊಪ್ಪಿದುದು ಕರಿಗಳು
ಹರಿವಿರೋಧದ [1]ಲರಿವಳಿದು ಕಡುಮೂಕ[1] ಭಾವದಲಿ |
ಚರಿಸುತಿರ್ದುವಶೇಷಮೃಗ ಭೂ
ಧರನ ಮೂರ್ತಿಯು ನೋಡಿ ಭವಸಾ
ಗರವ ಲೆಕ್ಕಿಸದಿರ್ದುವಾಪಪಿನಪ್ರದೇಶದಲಿ || ೧೪

ಆಡುವೆಳನವಿಲುಗಳನೊಸೆದುರೆ
ನೋಡುತಿಹ ವನನರರ ಮೋಹಿಸಿ
ಪಾಡುತಿಹ ಕೋಗಿಲೆಯನುತ್ಸಾಹಿಸುವ ಖಗಕುಲವ |
ಗಾಡಿಸುವ ಬನಗಳ್ತಲೆಯೊಳೂಡ
ಗೂಡುತಿಹ ಶಬರಿಯರ ತನ್ನೊಡ
ನಾಡಿಗಳಗರುಹುತ್ತೆ ನಡೆದನು ದಾನವಧ್ವಂಸಿ || ೧೫

ಕಾನನವನುಳಿದಸುರ [2] ಪುರದು [2]
ದ್ಯಾನಸೀಮೆಯನೈದಿ ಬರೆ ಮುಂ
ದಾನದೀಶ್ವರಿ ಯಮುನೆ ಯತಿಸಂರಂಭರಭಸದಲಿ |
ದಾನವಾರಿಯು ಕೀರ್ತಿಸುತೆ ಸು
ಮ್ಮಾನದಲಿ ಮೆಯ್ಯಿಕ್ಕಿದಂತಿರೆ
ದಾನಪತಿ ಪರಿತೋಷದಲಿ ತೋರಿದ ಜಗತ್ಪತಿಗೆ || ೧೬

---

1 ಳಿಳವಳಿದು ಕಡುಮೂರ್ಖಭಾವದಲಿ, ಕಾ, 2 ಹರನು, ಕಾ,

ದೂರದಲಿ ಹರಿ ಕಂಡನಘಸಂ
ಹಾರಿಯನು ಹರಿನೀಲಸನ್ನಿಭ
ವಾರಿಯನು ಭವಭಯವಿದಾರಿಯ ನಖಿಳಪಾತಕದ ।
ವೈರಿಯನು ಭಾಗೀರಥಿಯ ಹಿತ
ಕಾರಿಯನು ಸರಸಿರುಹಸಖನ ಕು
ಮಾರಿಯನು ಕಾಳಿಂದಿಯನು ಕಾಮಿತಫಲಪ್ರದೆಯ ॥ ೧೭

*
ಭುವನಭೂಷಣೆ ಯನಿಮಿಷಾಳ್ಯ
ತ್ಸವಸುಭಾಸಿನಿ ಪರಿತಮನುಮುನಿ
ನಿವಹಸುಲಲಿತಸುಖವಿಸ್ಫೋಷಿಣಿ ತನಗೆ ಮಾರ್ಗಲೆವ ।
ವಿವಿಧಕು [1] ಜವನಧೂತಕಾರಿಣಿ [1]
ಪವಣರಿಯಬಾರದವಿಹಾರಿಣಿ
ರವಿಜೆ ದೂರದೆ ತನುಜೆಯಂತಿರೆ ಕಂಡನಸುರಾರಿ ॥ ೧೮

ಹರಿಯ ಪದನಖದಿಂದೆ ಪುಟ್ಟಿದ
ಸುರನದಿಯ ಸಂಸರ್ಗದಿಂದು
ರ್ವರೆಗೆ ಪಾವನತೀರ್ಥವೆನಿಸಿದೆ ನಿಂದಿರೇಶ್ವರನ ।
ತೆರತೆರದ ಲೀಲೆಗಳನೀಕ್ಷಿಸಿ
ಪರಮಸುವ್ರತೆಯಾದೆನೆನ್ನೊಳು
ಸರಿನದಿಗಳಾರೆಂದು ಹೆಚ್ಚಿತು ಯಮುನೆ ಹರುಷದಲಿ ॥ ೧೯

ಬಂದು ಹರಿ ಸನ್ನಿಧಿಯೊಳಿಹ ಕಾ
ಳಿಂದಿಯಲಿ ರಥವಿಳಿದು ಗೋಪರ
ವೃಂದವನು ಬಳಲಿದಿರೆನುತೆ ಸನ್ಮಾನವಚನದಲಿ ।

---

* ಕಡುಗಡಲ ಸುಳಿಗಳ ತರಂಗದ । ಮಡುಗಡಲನನುಪೊಡವಿಗಚ್ಚರಿಯೆಂಬ ಪೆಂಪಿನಲಿ ॥ ಕಡಿವ ಕಾರ್ಗಡಲೇಳ ನಿಡುಮೊ । ಗ್ಗಡಲವಿಟ್ಟೆಗಡಲ ಮಧುರೆಯ ನಡೆದು ಕಂಚನು ಬೆಡಗನಸುರಾರಿ ॥ ಎಂಬ ಅಸಮಗ್ರಸಂಬದ್ಧವಾದೊಂದು ಪದ್ಯವು. ಕಾ. ಪುಸ್ತಕದಲ್ಲಿ ೧೭ನೆಯ ಪದ್ಯದ ಮುಂದೆ ಹೆಚ್ಚಾಗಿ ದೊರೆಯುತ್ತದೆ.

1 ಜನೋದ್ಧೂತವಾರುಣಿ, ಬ. ಕಾ.

ಹಿಂದುಳಿದರಿಲ್ಲಲೆ ಎನುತೆ ದಯೆ
ಯಿಂದೆ ಕರೆಕರೆದೋವಿ ನುಡಿಸಿ ಮು
ಕುಂದನಾನದಿದಡದೊಳೋಲಗಗೊಟ್ಟು ಕುಳ್ಳಿರ್ದ ॥ ೨೦

ಮುಂದೆಸೆವೆಬಲರಾಮ ಬಲದಲಿ
ನಂದನೆಡದಲಿ ದಾನಪತಿಯೊಡ
ವಂದ ಗೋವಳರಿದಿರಕಟ್ಟೆಸೊಳ್ಪರಭಾಗದಲಿ ।
ತಂದ ಪಲವಣ್ವೆಣ್ಣೆಪಾಲ್ಮೊಸ
ರ್ವಂದಿಯಿರೆ ಬಳಲಿಕೆಯ ಕಳೆದರ
ವಿಂದಲೋಚನನರಸನಂತೋಲಗದೊಳಸೆದಿರ್ದ ॥ ೨೧

ಪಾಡುವರು ಕೆಲರಚ್ಯುತನ ಕೊಂ
ಡಾಡುವರು ಕೆಲರೆದ್ದು ಕುಣಿಕುಣಿ
ದಾಡುವರು ಕೆಲರೆಡಬಲಕೆ ಸಿಡಿದೆದ್ದು ಸಂಭ್ರಮಿಸಿ ।
ನೋಡುವರು ಕೆಲರುದಕದೊಳಗೀ
ಸಾಡುವರು ಕೆಲರಾಯಸವನೀ
ಡಾಡಿ ವಿಶ್ರಮಿಸುವರು ಕೆಲರೊಡವಂದಗೋವಳರು ॥ ೨೨

ನೀಲಗಿರಿಸಿತಗಿರಿಗಳೊಂದೇ
ಮೂಲೆಗೈತಂದಂತೆ ಗೋಪರ
ಮೇಳದಲಿ ಬಲಕೃಷ್ಣರೆಸೆದಿರೆ ದಾನಪತಿ ಬಳಿಕ ।
ಬಾಲೆಯರು ಪತಿಗಂಜಿ ನುಡಿವಂ
ತೇಳುತಂಘ್ರಿಗೆ ನಮಿಸಿ ಲಕ್ಷ್ಮೀ
ಲೋಲ ಚಿತ್ತೈಸೆಂದು ಬಿನ್ನಹಮಾಡಲನುವಾದ ॥ ೨೩

ದೇವ ನಾನೀಯಮುನೆಯಲಿ ಸ
ದ್ಭಾವ ಮಿಗಲವಗಾಹಿಸುವೆ ನೀ
ವೀವಸುಧೆಗವತರಿಸಲಾಗದು ರಥದ ಮೇಲಿಹುದು ।

ಗೋವಳರನೊಗ್ಗೂಡಿಸಬೇಡರೆ
ಜಾವ ಸ್ಮರಿಸಿ ನೋಡುತಿರಿಯೆಂ
ದೋವಿ ನುಡಿದಕ್ರೂರನಿಳಿದನು ಭಾನುಜೆಯ ತಡಿಗೆ ॥ ೬೪

ಆತನತಿಶಯಭಕ್ತಿಭಾವ
ಪ್ರೀತಿಯನು ಹರಿ ಕಂಡು ಮನದಲಿ
ಸೋತು ತನ್ನ ನಿಜಪ್ರಭಾವವ ತೋರಿಸುವೆನೆನುತೆ ।
ಆತರುಚ್ಛಾಯೆಯಲಿ ಸುಖವಿರ
ಲಾತಪೋನಿಧಿ ಬಂದು ಭುವನ
ಖ್ಯಾತೆಯಹ ಕಾಳಿಂದಿಗತಿಮುದದಿಂದೆ ವಂದಿಸಿದ ॥ ೬೫

ಬಕ ಮರಾಳ ರಥಾಂಗ ಸಾರಸ
ನಿಕರ ಪುಳಿನಸ್ಥಳದೊಳಿರೆ ನಳ
ಮಕರ ನಕ್ರ ಜಳೂಕ ಮಡುಗಡಲೊಳಗೆ [1] ಸಂಚರಿಸೆ [1] ।
ಸಕಲವಿಷಜಸಮೂಹಸಂಗಂ
ಧಿಕವಘಾಟದೊಳಸೆಯಲತಿಸು
ವ್ಯಕುತವೆನಲೊಪ್ಪಿದಳು ಯಮರಾಡನುಜೆ ಗಾಢದಲಿ ॥ ೬೬

ನಿಯತವಹಶೌಚಾಚಮನನಿ
ರ್ಣಯವನರೆ ವಿಸ್ತರಿಸಿ ಕರಣ
ತ್ರಯವ ತಾನೆಲೆಗೊಳಿಸಿಯಾಸಂಕಲ್ಪಸಮಯದಲಿ ।
ಬಯಕೆಯಿಲ್ಲದೆ ವಿಷ್ಣುಚರಣ
ದ್ವಯವ ಸಂಸ್ಮರಿಸುತ್ತೆ ವಾಣೀ
ಪ್ರಿಯವಧುವ ಮಧ್ಯದಲಿ ಮುಳುಗಿದ ತನ್ನ ಸೀಕ್ಷಿಸುತೆ ॥ ೬೭

ಹರುಷ ಮಿಗೆ ಗೋಪಾಲಮಂತ್ರೋ
ಚ್ಚರಣೆಯಿಂದಘಮರುಷಣವನಾ
ದರಿಸುತಿರೆ ಜಲದೊಳಗೆ ರವಿಶತಕೋಟಿರಶ್ಮಿಯಲಿ ।

1 ಸಂಭ್ರಮಿಸೆ, ಬ.

ಮೆರೆವ ದೇಹಚ್ಛವಿಯ ವಿಕಟಾಂ
ಬುರುಹನೇತ್ರದ ಕೌಸ್ತುಭಾದ್ಯಾ
ಭರಣದನುಪಮಶಂಖಚಕ್ರದ ವಿಷ್ಣುವೆಸೆದಿರ್ದ ॥ ೨೮

ಥಳಥಳಿಸಿ ಹೊಳೆವಹಿಲಲಾಮನ
ಲಲಿತಕಾಯದ ಮೇಲೆ ಪವಡಿಸಿ
ತಳತಸಾವಿರಹೆಡೆಮಣಿಯ ರಶ್ಮಿಗಳ ಲಹರಿಯಲಿ ।
ಹೊಲಬುಗಿಡುತಜಭವಸುರೇಂದ್ರರ
ಕುಲವದೋಲೈಸುತ್ತುಮಿರೆ ಮಾ
ಲಲನೆಸಹಿತೆಸೆದಿರ್ದ ವಿಷ್ಣುವ ಕಂಡನಕ್ರೂರ ॥ ೨೯

ಲೀಲೆಯಿಂದೀಜಗವ ಹುಟ್ಟಿಸಿ
ಪಾಲಿಸುತೆ ಮರಳಿಸುತೆಯುವನೀ
[1] ಗೋಲಪಥ [1] ದಲಿ ಸಕಲನಿಗಮಾತೀತನೆಂದೆನಿಸಿ ।
ಕೌಳಿಕದ [2] ನಾನಾ [2] ಪ್ರಪಂಚವ
[3] ಥಾಳಿಸುವ [3] ನಿಸ್ಸಂಗನಾದ ಕೃ
ಪಾಳುಗಳ ಬಲ್ಲಹನನಿದಿರಲಿ ಕಂಡನಕ್ರೂರ ॥ ೩೦

ರವಿ ಘಟೋದಕಕೂಟದಲಿ ಸಂ
ಭವಿಸಿ ತೋರ್ಪಂದದಲಿ ತಾನೀ
ಭುವನದಲಿ ಪರಿಪೂರ್ಣಚೇತನನೀತನೆಂದೆನಿಸಿ ।
ವಿವಿಧಮತಕಧಿಪತಿಯೆನಿಸಿ [4] ಸು
ಪ್ರವರದಲಿ [4] ಜಗದೊಳಗೆಹೊರಗೊ
ಪ್ಪುವ ಪರ [5] ಬ್ರಹ್ಮೈಕರೂಪನ [5] ಕಂಡನಕ್ರೂರ ॥ ೩೧

1 ಜಾಲಪದ, ಕಾ. 2 ಮಾಯಾ, ಕಾ.
3 ಕೀಲಿಸುತ ಕಾ. 4 ಸುಪ್ರವದನದೆ. ಬ.
5 ಬ್ರಹ್ಮಸ್ವರೂಪನ, ಕಾ.

ರೂಪಳಿದ ಚಿದ್ರೂಪನದ್ಭುತ
ರೂಪನಗಣಿತರೂಪನುನ್ನತ
ರೂಪನೂರ್ಜಿತವಿಶ್ವರೂಪನತರ್ಕ್ಯಪರರೂಪ ।
ತಾಪಸರ [1] ಹೃದ್ದೀಪ [1] ಗತಪರಿ
ತಾಪ [2] ಭವ [2] ನಿರ್ಲೇಪನಿಂದಿರೆ
ಯೋಪ ಜಗದೀಶ್ವರ ಮುಕುಂದನ ಕಂಡನಕ್ರೂರ ॥ ೩೨

† ಸಗುಣವಹ ಪರತತ್ತ್ವನವನೇ
ಪೊಗಳ್ವೆಡೆ ಜಗನ್ಮಯನು ನಿರ್ಗುಣ
ಬಗೆಯ ತೋರುವ ಲೀಲೆಯಲಿ ಸಲಹುವನು ಭುವನಗಳ ।
ನಿಗಮದಂಗವಣೆಯಲಿ ಮುನಿಗಳ
ಹೊಗಳಿಕೆಯ ಜಗದೀಶನನು ತನಿ
ಮೊಗರೊಳಸೆದನ ಕಂಡು ಪುಳಕಿತನಾದನಕ್ರೂರ ॥ ೩೩

ನಾರದನ ಸಂಗೀತವಾಶ್ರುತಿ
ನಾರಿಯರ ರತುನಾರತಿಯ ವಿ
ಸ್ತಾರ ಮುಕ್ತಿಶ್ರೀಯ ನರ್ತನವಿದಿರೊಳೋಲಗಿಪ ।
ವೀರವಿಹಗೇಶ್ವರನ ಜಯರವ
ಭೂರಿಸುರರರ್ಚಿಸುವ ವಿಭವದ
ಲಾರಮಾಪತಿಯಿರಲು ಕಂಡಕ್ರೂರ ಬೆರಗಾದ ॥ ೩೪

ಆಮುಕುಂದನ ಕಾಣುತಮಿತ
ಪ್ರೇಮದಲಿ ಮೈಯ್ಯಿಕ್ಕಿ ಸೌಖ್ಯದ
ಸೀಮೆಯಲಿ ಸಂತುಷ್ಟನಾಗಿ ನಿರಂತರಾಯದಲಿ ।

---

1 ಹೃದ್ರೂಪ, ಜ. 2 ವಹ, ಜ.

† ಈ ಪದ್ಯವು, ಕಾ. ಪುಸ್ತಕದಲ್ಲಿಲ್ಲ.

ಕಾಮಿಸದೆ ಕಲ್ಪಿಸದೆ ಭರದಲಿ
ಕೈಮುಗಿದು ಕೊಂಡಾಡುತಿರೆ ನಿ
ಸ್ಸೀಮ ದೇವರದೇವನಿತ್ತನು ದಿವ್ಯಲೋಚನವ ॥ ೩೫

ಆಸ್ಸುಖದ ಸುಗ್ಗಿಯಲಿ ಕಮಲಾ
ಧೀಶಪುರುಷೋತ್ತಮನ ಮೂರ್ತಿವಿ
ಳಾಸವನು ನೆರೆ ಕಂಡು ಬಳಿಕಾತನ ನಿರೂಪದಲಿ ।
ಓಸರಿಸದಂಬುರುಹನಾಭಿಯ
ಮೀಸಲಿನ ಕುಹರದಲಿ ಜಠರಾ
ವಾಸವನು ಹೊಕ್ಕಲ್ಲಿ ಕಂಡನು ಕಣ್ಗೆ ಕೌತುಕವ ॥ ೩೬

ಕಂಡನಗಣಿತಕೋಟಿ ವಾಣಿಯ
ಗಂಡರನು ಶತಕೋಟಿ [1] ದಶದೋ
ರ್ದಂಡರನು [1] ತತ್ಸ್ಥಾನತತ್ಪರಿಕರದ ಸೀಮೆಯಲಿ ।
ಚಂಡಕರ ಹಿಮಕರ ಸುರೇಂದ್ರರ
ತಂಡವನು ದಿಗಧಿಪರ ವಸುಗಳ
ಹಿಂಡುಗಳ ಮನುಮುನಿಗಳೊಟ್ಟಲ [2] ನೋಡಿ [2] ಬೆರಗಾದ ॥ ೩೭

ನಾಕವೊದಲಾಗಿಹ ಚತುರ್ದಶ
ಲೋಕಲೋಕಾಧಾರವೆನಿಪದಿ
ವೌಕಸಾದ್ರಿ ಹಿಮಾದ್ರಿ ಮಂದರ ನೀಲಪರ್ವತವ
ಲೋಕಪಾಲ ಗ್ರಹ ಭಗಣ ನಿಕ
ರಾಕುಲಾಭ್ರವ ದಿಗ್ಗಜೇಂದ್ರಾ
ನೀಕವನು ಸುರಧೇನ್ವನೀಕವ ಕಂಡನಕ್ರೂರ ॥ ೩೮

ಧರೆ ಫಣೀಶ್ವರ ಕಮಠ ಕುಲಭೂ
ಧರ ಸಮಸ್ತ ದ್ವೀಪಸಾಗರ
ಗಿರಿ ಗಹನ ಸಹಿತಲ್ಲಿ ನಗರ ಗ್ರಾಮ ಪಟ್ಟಣವ ।

---

1 ಚಕ್ಷುರ್ದಂಡರನು, ಓ.  2 ನೆಣಿಸಿ, ಕಾ.

ವರಮುನಿಗಳಾಶ್ರಮವ ಧರಣೀ
ಶ್ವರರ ತಳತಂತ್ರವನು ಘನಸಂ
ಗರವಿವಾದವನಂತಕೋಟಿಯು ಕಂಡನಕ್ರೂರ ॥ ೩೯

ಸುರ ನರೋರಗ ಸಿದ್ಧ ವಿದ್ಯಾ
ಧರ ಗರುಡ ಗಂಧರ್ವ ರಾತ್ರಿಂ
ಚರ ಪಿಶಾಚರ ಗಡಣವೆಸೆದಿರೆ ಗಣನೆಯಿಲ್ಲೆನಿಸಿ ।
ಹರಿಬಲರು ನದಿಯು ದಡದೊಳು ಗೋ
ಪರ ಸುಮೇಳದೊಳಿರಲು ತಾನಘ
ಮರುಷಣದೊಳಿಹ ಪರಿಯು ಕಂಡಕ್ರೂರ ಬೆರಗಾದ ॥ ೪೦

ಏನಿದದ್ಭುತವೆನುತೆ ದಿವ್ಯ
ಜ್ಞಾನಿಯೆದ್ದ ಡಬಲವನೀಕ್ಷಿಸಿ
ದಾನವಾಂತಕ ರಥದ ಮೇಲಿರೆ ಕಂಡು ಶಂಕಿಸುತೆ ।
ಆನಿದೆಲ್ಲಿಗೆ ಬಂದೆ ಕಂಡೆನಿ
ದೇನನೊಂದೇ ನಿಮಿಷದಲಿ ಹರಿ
ತಾನೆ ತಪ್ಪದು ತನ್ನೊಲವು ಕೈಸಾರಿತೆನುತಿರ್ದ ॥ ೪೧

ಹುಲುಮನುಜನಾನೆತ್ತ ಬೊಮ್ಮನ
ನೆಲೆಯನರಿವುದಿದೆತ್ತ ಡೊಂಬಿನ
ಮಲಿನಮಾನಸನೆತ್ತ ಫಣಿಪತಿಶಯನ ತಾನೆತ್ತ ।
ಚಲಿತಧೈರ್ಯನದೆತ್ತ ವಿಶ್ವದ
ಹೊಳಹು ಕಾಣ್ಬುದಿದೆತ್ತ ಮಾಧವ
ನೊಲವು ಫಲಿಸಿತ್ತಿಂದು ನಾಂ ಕೃತಕೃತ್ಯನೆನುತಿರ್ದ ॥ ೪೨

ಹಿಂದೆ ಜನ್ಮಸಹಸ್ರದಲಿ ಸುರ
ಸಿಂಧುವನು ಸೇವಿಸಿದೆನೋ ಯುತಿ
ವೃಂದವನು ಮನ್ನಿಸಿದೆನೋ ವೈಷ್ಣವಮಹಾಸಭೆಗೆ ।

ವಂದಿಸಿದೆನೋ ಹರಿದಿನವ್ರತ
ವೊಂದನಾಂ ಸತ್ಕರಿಸಿದೆನೊ ಎನ
ಗಿಂದು ಹರಿ ಕರುಣಿಸಿದುದಂದಿನ ಸುಕೃತಫಲವೆಂದ ॥ ೪೩

ಅತಿಥಿಪೂಜೆಯ ಫಲವೊ ಮೇಣ
ಚ್ಯುತಸಮಾರಾಧನೆಯ ಸುಕೃತವೊ
ಶ್ರುತಿಪುರಾಣದ ಬಹುಳಪುಣ್ಯವೊ ಬಹು [1] ವಿಧಾನದಲಿ [1] ।
ಪಥಿಕರಿಗೆ ನೀರೆರೆದ ಧರ್ಮ
ಪ್ರತತಿಯೋ ವಿವಿಧಾನ್ನದಾನ
ವ್ರತದ ಮಹಿಮೆಯೊ ಘಟಿಸಿತೆನಗಿಷ್ಟಾರ್ಥವೆನುತಿರ್ದ ॥ ೪೪

ಬಳಿಕಯಮುನಾನದಿಯಲೊಪ್ಪುವ
ಶಿಲೆಗೆ ಬಂದು ಸಮಸ್ತಗಂಧಾ
ಮಳವಿಭೂಷಣನಾಗಿ ಜಪತಪವರ್ಘ್ಯಮೊದಲಾದ ।
ವಿಲಸಿತಾನುಷ್ಠಾನವಿಧಿಯೊಂ
ದುಳಿಯದಂತಿರೆ ಮಾಡಿ ಭರದಲಿ
ಬಲಮುಕುಂದರ ಹೊರೆಗೆ ಬಂದನು ಬಹಳಹರುಷದಲಿ ॥ ೪೫

ಸ್ಯಂದನದ ಮೇಲಿಹ ಮುಕುಂದನ
ಮುಂದೆ ಕರಸರಸಿರುಹಯುಗಳವ
ನೊಂದುಗೂಡಿ ಕೃತಾರ್ಥಭಾವದೊಳೆರಗಿ ನಿಂದಿರ್ದ ।
ತಂದೆ ಜಯ ಜಯ ಭಾಗವತಜನ
ಬಂಧು ಜಯ ಜಯ ವಿಧಿಭವಾಮರ
ವಂದ್ಯ ಜಯ ಜಯಕೃಷ್ಣ ಜಯ ಜಯ ಎನುತೆ ಕೀರ್ತಿಸಿದ॥೪೬

ನಿತ್ಯ ಜಯ ದೇವಕಿಯ ಮೋಹದ
ಪತ್ಯ ಜಯ ನಿಸ್ಸಂಗನೆನಿಸಿದ
ಸತ್ಯ ಜಯ ಗೋಪಾಲಲೀಲಾ [2] ಚರಣ ತರುಣ ಜಯ [2] ।

---

1 ವಿರಾಗದಲಿ, ಬ.　　2 ಚರಿತ ಜಯ ಜಯತು, ಬ.

ಮೃತ್ಯುವಿರಹಿತ ಜಯ [1] ಧನಂಜಯ
ಭೃತ್ಯ [1] ಜಯ ನಿಗಮಾರ್ಥನಿಕರ
ಸ್ತುತ್ಯ ಜಯ ಗೋಪೀಜನಪ್ರಿಯ ಜಯ ಜಯೆನುತಿರ್ದ || ೪೭

ಜಯ ಜಗನ್ಮಯ ಜಯ ರಮಾಪ್ರಿಯ
ಜಯ ನಿರಾಮಯ ಜಯ ಸುರಾಶ್ರಯ
ಜಯ ಶತಾಹ್ವಯರೂಪ ಜಯ [2] ನಿಷ್ಕಲ [2] ಪರಂಜ್ಯೋತಿ |
ಜಯ ದಯಾಪರ ಜಯ ಮನೋಹರ
ಜಯ ಧರಾಧರ ಜಯ ಭಯಂಕರ
ಜಯ ಮುಕುಂದ ಮುರಾರಿ ರಕ್ಷಿಸು ಜಯ ಜಯೆನುತಿರ್ದ || ೪೮

ಮುದದೊಳೂಲಿವ ಮಹಾತ್ಮ ಜಯ ಹೊಗ
ಳದರೆ ಹಿಗ್ಗುವ ಸುಲಭ ಜಯ ಬೇ
ಡಿದುದ ನೀವ ಕೃಪಾಳು ಜಯ ಮರೆದರಿದು ಚಿಂತಿಸಲು |
ಹೃದಯದಿಂದಗಲದ ವಿಳಾಸದ
ನಿಧಿಯೆ ಜಯ ಬೈದವಗೆ ಮೋಕ್ಷದ
ಪದವನಿತ್ತ ವಿನೋದಿ ಜಯ ಹರಿ ಜಯ ಜಯೆನುತಿರ್ದ || ೪೯

ರಾಮ ಜಯ ಕಮಲಾದೃಗುತ್ಪಲ
ಸೋಮ ಜಯ ಗೋಪೀಜನಾನನ
ತಾಮರಸಹರಿದಶ್ವ ಜಯ ಸಜ್ಜನಸಹಾಯ ಜಯ |
ಸೀಮೆಯಳಿದಖಿಳಸುಖ ಜಯ ಭವ
ಭೀಮ ಜಯ ಸಂತಾಪಸಂಹರ
ನಾಮ ಜಯ ವಸುದೇವಸುತ ಜಯ ಜಯ ಜಯೆನುತಿರ್ದ ||೫೦

ಈಪರಿಯೊಳತ್ಯಂತಮಧುರಾ
ಳಾಪದಲಿ ಹರಿಬಲರ ಕೀರ್ತಿಸಿ
ರೂಪನೆವೆಯಿಕ್ಕದೆ ನಿರೀಕ್ಷಿಸುತಡಿಗೆ ಮೈಯಿಕ್ಕಿ |

---

1 ಚರಾಚರಚಿತ್ರ, ಕಾ.  2 ನಿಶ್ಚಲ, ಕಾ.

ಶ್ರೀಪತಿಯೆ ನಿಜಲೀಲೆಯಿಂ ಮಧು
ರಾಪುರಿಗೆ ಬಹುದೆಂದು ಕೈಮುಗಿ
ದಾಪರಮವೈಷ್ಣವ ಶಿರೋಮಣಿ ತೆರಳುತಂತೆಂದ ॥ ೫೧

ಅಸುರ ನಿಮ್ಮಾಗಮನವನು ಕಾಂ
ಕ್ಷಿಸುತಿಹನು ನಾಂ ಹೋಗಿ ಕುಟಿಲ
ವ್ಯಸನಿಯನು ಸಂತೈಸುವೆನು ನೀಂ ಮಧುರೆಯುಪವನದ ।
[1] ಲಸಿತ [1] ವಿಭವವನೀಕ್ಷಿಸುತೆ ಸುರ
ರೊಸಗೆ ಮಿಗೆ ಬಂದೆಮ್ಮ ಗೃಹದಲಿ
ವಸತಿಯಿಕ್ಕಿಸಬೇಕೆನುತೆ ಬಿನ್ನೈಸಿ ಬೀಳ್ಕೊಂಡ ॥ ೫೨

ತೆರಳಿದನು ರಥಸಹಿತ ಕಂಸಾ
ಸುರನ ಹೊರೆಗಕ್ರೂರನಾಕ್ಷಣ
ಹರಿ ಬರುತೆ ಯಮುನಾನದಿಯನುತ್ತರಿಸಿ ವಹಿಲದಲಿ ।
ತರುಣಗೋಪಕದಂಬಸಹಿತ
ಬ್ಬರಿಸುತಾಡುತೆ ಬಂದು ಮಧುರೇ
ಶ್ವರನ ಬಹುಳೋದ್ಯಾನದಲಿ ಬಿಡಿಸಿದನು ಪಾಳೆಯವ ॥ ೫೩

ಐದನೆಯ ಸಂಧಿ ಮುಗಿದುದು

1 ಅಸಿತ. ಓ. ಕಾ.

## ಆರನೆಯ ಸಂಧಿ.

ಸೂಚನೆ

ಪಟ್ಟಣದ ಬಾಹೆಯಲಿ ಸೀಳ್ದಿಳೆ
ಗಿಟ್ಟು ರಜಕನನಾಸುದಾಮಗೆ
ಕೊಟ್ಟು ವರವನು ಕುಬುಜೆಯನು ನೆಗಪಿದನು ಮುರವೈರಿ ||

ದಾನವಾಟವಿಗಟ್ಟಸುಡುವ ಕೃ
ಶಾನು ಬಪ್ಪಂದದಲಿ ಸುರರಭಿ
ಮಾನದಂಕುರವೊಣಗುವಾಗ ಸುವೃಷ್ಟಿ ಸುರಿವಂತೆ |
ಜ್ಞಾನಿಹೃದಯಾಬ್ಜಗಳ ನಿಕರಕೆ
ಭಾನುವೊಗೆದಂದದಲಿ ನಂದನ
ಸೂನು ನಡೆತಂದನು ಸುರಾರಿಯು ನಗರದುಪವನಕೆ || ೧

ಪರಿಮಳದ ನೆಲೆವೀಡು ತಂಪಿನ
ಶರಧಿ ಸುಖದಾಗರ ವಿಳಾಸದ
ಪರಮಸೀಮೆ ಮಹೋತ್ಸವದ ಮನೆ ನಲವಿನ ತರಂಗ |
ವಿರಹಿಗಳ ವಿಶ್ರಮ ವಿಳಾಸಿನಿ
ಯರಧಿಕಾರ ವಿಕೃತದ ಗುರು ಶಂ
ಕರರಿಪುಸ್ಥಳವೆನಿಪ ವನಕಸುರಾರಿ ನಡೆತಂದ || ೨

ತಳಿತಶೋಕೆಯ ಪೂತಸಂಪಗೆ
ಗಳ ಫಲಿತಸಹಕಾರನಿಚಯದ
ತಿಳಕಕೇಸರಕುರವಕಾದ್ಯುತ್ಕೃಷ್ಟತರುತತಿಯ |
ಬಳಸಿದೆಳದೆಂಗಡಕೆಗಳ ಮಾ
ದಳಕದಳನಾರಂಗದಾಡಿಮ
ಪಲಸುಗಳ ಪರಿವಿಡಿಯಲೆಸೆವುಪವನಕೆ ಹರಿಬಂದ || ೩

ತರುಲತಾಗ್ರಹಪೀಡ ಕುಳಿರ್ವ ಸು
ಖರಸಕಾರಣಚೈತ್ರವೆಂಬವ
[1] ಪರಿಪರಿಯ [1] ಕೃತಕಾದ್ರಿಯಿಂದೊಳಗೆಸೆವ ರಸಕೂಪ |
ಪರಿವಿದೀರ್ಘಕೃಶೋಕ್ತಿಯೊಳು ಬೈ
ವರೆಗಿಳಿಗಳುರೆಯುಲಿವ ಕೋಗಿಲೆ
ಮೊರೆವ ಪಾರಿವವಿಪ್ಪ ವನಕೆ ನಡೆತಂದನಸುರಾರಿ || ೪

ಬಳಗೊಳಗೆ ಮುಡಲಿರಿವ ಮಲ್ಲಿಗೆ
ಯುಲರನವಲಂಬಿಸುತೆ ಮೊರೆವಳಿ
ಕುಳದ ಕ್ರಮವನು ಕೀರ್ತಿಸುವ ಸೋಗೆಗಳ ಕೇಗುಗಳ |
ಚೆಲುವಿಕೆಯನಾಲಿಸುವ ಗಿಳಿಗಳ
ಕಲರಸೋಕ್ತಿಯನಾದರಿಪ ಕೋ
ಗಿಲೆಯ ಕೋಲಾಹಲದಲೆಸೆವುಪವನಕೆ ಹರಿ ಬಂದ || ೫

ಲಲನೆಸಹಿತನಲಾಕ್ಷವೃಕ್ಷದ
ನೆಳಲೊಳೆಸೆವ ರಥಾಂಗವಿತತಿಯು
ನಳಿನವನಮಧ್ಯದಲಿ [2] ರಮಿಸುವ [2] ರಾಜಹಂಸೆಗಳ |
ಸುಳಿದುಲಿವ ಪಾರಾವತಂಗಳ
ನಲಿದು ಪಾಡುವ ಕಿನ್ನರರ ಸಂ
ಕುಳದೊಳೆಸೆವುಪವನಕೆ ಬಿಜಯಂಗೈದನಸುರಾರಿ || ೬

ತಳಿರಡಿಯು ರಂಭೋರುಗಳ ಸಿತ
ಪುಳಿನಜಘನಸ್ಥಳದ ಸರಸಿಯು
ಸುಳಿಯು ನಾಭಿಯು ಚಕ್ರವಾಕಸ್ತನದ ದೋರ್ಲತೆಯು |
ನಳಿನವದನದ ಕೈರವಾಕ್ಷಿಯು
ಲುಳಿತಬಿಂಬೋಷ್ಠದ ಪಿಕಸ್ವರ
ದಳಿಗುರುಳ ಶಿಖಿಕಚದ ವನಮಾನಿನಿಯು ಹರಿ ಕಂಡ || ೭

---

[1] ಪರಿವಿಡಿಯ, ಬ. [2] ನರ್ತಿಪ, ಬ.

ಕಳಿದುದಿರ್ದ ಪರಿಪರಿಯ ಪುಷ್ಪಾ
ವಳಿಯ ತಲ್ಪದ ಮೇಲೆ ಕಕ್ಷಾ
ವಳಿಯ ಹಚ್ಚಡಿಸುತ್ತ ಮಿಗೆ ತೆಂಬೆಲರ ಕೈಕೊಳುತೆ ।
ಬಲುಮೆಯಿನಿಯರ ನೆಮ್ಮಿ ಸೊಗಸ
ಗ್ಗಳಸಿ[1] ತವಕಿಸೆ[1] ಮುನಿವ ನಿಮಿಷಕೆ
ತಿಳಿವ ಕಾಲ್ವಿಡಿವಬಲೆಯರನೀಕ್ಷಿಸಿದನಸುರಾರಿ ॥ ೮

ಮರಮರಕೆ ಲಂಘಿಸುವ ಬೆರಳಲಿ
ಬರಿಯ ತುರಿಸುವ ಕಳವಳಿಸಿ ಪ
ಲ್ಗಿರಿದು ಮರಿಗಳನೆತ್ತಿ ಮುದ್ದಿಸಿ ಪರಸಿ ತೊಪಿರಿವ ।
ತರುಣಿಯರನೇಡಿಸುವ ಪಣ್ಗಳ
ತಿರಿದು ದೆಸೆದೆಸೆಗಿಡುವ ಕಪಿಗಳ
ನೆರವಿನೆರವಿಯ ಕಂಡು ಕಂಡಸುರಾರಿ ನಗುತಿರ್ದ ॥ ೯

ಮಾವನನು ಕೊಲಲೆಂದು ದೇವರ
ದೇವ ಬಂದನಶೋಕೆಯಾದಳು
ದೇವಕೀವಧು ದಾನವರು ಸಲೆ ಕೆಟ್ಟರಿಂದಿನಲಿ ।
ದೇವರಿಪುಗಳ ವಧುಗಳವಶಕು
ನಾವಳಿಯ ಬಂದಿಯಲಿ ಸಿಲುಕಿದ
ರಾವು ಸುಕೃತಿಗಳೆಂಬ ಗಿಳಿಗಳ ನುಡಿಗೆ ನಗುತಿರ್ದ ॥ ೧೦

ವನದೊಳಾಡುವ ವಾರವಧುವಾ
ನನಸುಧಾಂಶು ರಥಾಂಗಮಿಥುನಕೆ
ಮುನಿದ ತಿಮಿರದ ತಂಡದಿಕ್ಕೆಯ ಕಿಡಿಸುತನವರತ ।
ಮುನಿದರಂತಸ್ತಾಪಮರ್ದನ
ನೆನಿಸಿ ಬಾಳ್ವುದಿದೊಂದು ವಿಸ್ಮಯ
ವೆನುತೆ ಹರಿಯುಪವನದ ಮಧ್ಯದ ಮಂಟಪಕೆ ನಡೆದ ॥ ೧೧

---

1 ಕೂಡುವ, ಕಾ.

ಹರುಷ ಮಿಗೆ ಮಂಟಪದ ಸರಿಸಕೆ
ಪರಿದು ವರಮುದದಿಂದಡರಿ ಗೋ
ಪರುಸಹಿತ ಕುಳ್ಳಿರ್ದು ಹರಿ ಬಳಲಿಕೆಯನೀಡಾಡಿ |
ಪಿರಿದು ಪಸಿವಾಯ್ತಿಲ್ಲಿ ಕಲಸೋ
ಗರವನಾರೋಗಿಸುವೆನೆಂದಾ
ಸರಸಿಯಲಿ ಕಾಲ್ದೊಳೆದು ಬಂದನು ಚೈತ್ರ್ಯಮಂಟಪಕೆ ॥ ೧೨

ನಂದ ಮೊದಲಾದಖಿಳಗೋಪರ
ಬೃಂದದೊಡನಾರೋಗಣೆಗೆ ಹರಿ
ಬಂದು ಮಾನ್ಯರ ಗುರುಲಘುತ್ವವನರಿದು ಕುಳ್ಳಿರಿಸಿ |
ಬಂದ ಘೃತದಧ್ಯೋದನಂಗಳ
ತಂದು ತಂದೆಲ್ಲರಿಗೆ ಬಡಿಸುವು
ದೆಂದು ಕರೆದೆಲ್ಲರಿಗೆ ನೇಮಿಸಿದನು ಮುರಧ್ವಂಸಿ ॥ ೧೩

ಹರಿಬಲರು ಸಂಗಡಿಸಿ ಬಹುಪರಿ
ಕರಸಹಿತ ವಿವಿಧಾನ್ನಪಾನದ
ಪರಿವಿಡಿಯ ಪಲವುಪ್ಪುಗಾಯ್ಗಳನಾದರದೆ ಬಡಿಸಿ |
ಕಿರಿಯರಿಗೆ ಸವಿದುತ್ತ ತೋರುತೆ
ಮರಳೆ ತಾನಾರೋಗಿಸುತೆ ಸಿರಿ
ಯರಸ ಪಂತಿಯಲೆಸೆದನಮರಪ್ರತತಿ ನಲಿಯುತಿರೆ ॥ ೧೪

ಬಳಿಕ ಕೈದೊಳೆದುಪವನದ ಕಪಿ
ಕುಲವನೆಲ್ಲವ ನೆರಹಿ ಕಲಸಿದ
ಕಳವೆಯಶನದ ರಾಸಿಗಳ ಮುಂದಿರಿಸಿ ಸರಿಯುತಿರೆ |
ಸುಳಿಸುಳಿದು ಮುಕ್ಕಿರಿಕಿ ಕವಿದ
ವ್ವಳಿಸಿ ಸೆಳೆದೊಡಗಲಸಿ ಮೋದುವ
ಲುಳಿಯ ಕಂಡಸುರಾರಿ ಗಹಗಹಿಸುತ್ತ ನಗುತಿರ್ದ ॥ ೧೫

ಅಟ್ಟಹಾಸವನುಳಿದು ದುರಿತಘ
ಗಟ್ಟ ಗೋಚರಿಗೊಲಿದು ವೀಳಯ
ಗೊಟ್ಟು ತಾಂ ಕೈಕೊಂಡು ಬಳಿಕುಪವನದ ಸಂಭ್ರಮವ ।
ದಿಟ್ಟಿಸುತೆ ತೂಪಿರಿಯುತ್ತಾಡುತೆ
ಪಟ್ಟಣದ ಪತವಿಡಿದು ಕಂಸನ
ಪೆಟ್ಟಿ ಸೀಳುವ ಭರದಲಸುರವಿರೋಧಿ ಬರುತಿರ್ದ ॥ ೧೬

ಬೇಗದಿಂ ಬಂದಸುರನಗರಿಯ
ಬಾಗಿಲಲಿ ಹರಿ ನಿಂದು ಪರಿಖಾ
ಸಾಗರದ ಗಂಭೀರತೆಯ ಕಂಡದಕೆ ತಲೆದೂಗಿ ।
ನಾಗಭವನಕೆ ಮಧುರೆಗಿದು ಸಮ
ಭಾಗವನಿಮಿಷಸೇವ್ಯವೆನಿಸದೆ
ಈಗರುವತನ ಚಿತ್ರವೆಂದಸುರಾರಿ ನಗುತಿರ್ದ ॥ ೧೭

ಹೇಮಮಯನವರತ್ನ ಸುಖಚಿತ
ಸೋಮಸೂರ್ಯಾಗ್ನಿ ಪ್ರಕಾಶ
ಸಸ್ತೋಮಸಂಯುತವಿವಿಧಸಾಲವಿಲಾಸದಿನಭೇದ್ಯ ।
ಯಾಮಿನೀಚರರೊಡೆಯನಿಹ ನಿಜ
ಸೀಮೆ ವಸುಧಾರಮಣಿಗೆಸೆದಿಹ
ರಾಮಣೀಯಕ ಕುಕ್ಷಿಯೆನಲೆಸೆದಿರ್ದುದಾಮಧುರೆ ॥ ೧೮

ಮುಗಿಲನಳ್ಳಿರಿವಿಂದುಸೂರ್ಯರ
ತಗೆವ ಸುಮನೋಮನವ ಕಲಕುವ
ಗಗನಕೋಟೆಯ ಬಂಧಿಸುವ ಮಾರುತನ ಸೆರೆವಿಡಿವ ।
ಖಗಕುಲವ ಸಂತೈಸಲೀಯದ
ಬೆಗಡುಗೊಳಿಸುವ ಕನಕಶೈಲವ
ನಗುವ ಕೋಟೆಯ ತೆನೆಯ ಕಂಡಸುರಾರಿ ಬೆರಗಾದ ॥ ೧೯

ಅಟ್ಟಣೆಗಳಗಣಿತ ಸುರೌಘವ
ನಿಟ್ಟುಕೆಡಹುವ ಢೆಂಕಣಿಗೆ ತಾಂ
ಕಟ್ಟಳೆಗಳಲ್ಲಿವರ ಕಾವಲ ದಡಿಗರಕ್ಕಸರ ।
ದಿಟ್ಟಿಸಿದೊಡೆವೆ ಸೀವುದಸುರನ
ಪಟ್ಟಣದ ಪರಿ ಲೇಸೆನುತೆ ಮನ
ಮುಟ್ಟಿ ಕೊಂಡಾಡಿದನು ಹರಿ ನಿಜಶಿರವನೊಲೆದೊಲೆದು ॥ ೨೦

ಎತ್ತ ನೋಡಿದೊಡತ್ತ ದೈತ್ಯರ
ವೊತ್ತ ಕಡುಗುದುರೆಗಳ ಸಂದಣಿ
ಮತ್ತಗಜದಬ್ಬರಣೆಯೊದರುವ ವಾದ್ಯನಿರ್ಘೋಷ ।
ಸುತ್ತ ಸುಳಿವಂದಣದ ಪಲ್ಲವೆ
ಸತ್ತಿಗೆಯ ಸಡಗರ ಮುರಾರಿಯು
ಚಿತ್ತವೆನು ಕಾಲ್ವಿಡಿದುದೇನೆಂಬೆನು ಮಹಾದ್ಭುತವ ॥ ೨೧

ಆಸಮಯದಲಿ ರಜಕನಧಿಕವಿ
ಲಾಸವಲಿ ಮಧುರಾಪುರೀಶನ
ವಾಸಲಿನ ಮಡಿಗಡಣದೊಡನಿದಿರಾಗಿ ಬರೆ ಕಂಡು ।
ಈಸುವಸ್ತ್ರವನಿವನ ಕಯ್ಯಿಂ
ದೀಸಿಕೊಳಬೇಕೆಂದು ಪರಿತಂ
ದಾಸುಗರ್ವನ ಮುಂದೆ ನಿಂದಸುರಾರಿಯಿಂತೆಂದ ॥ ೨೨

ಕುಡು ಸುವಸ್ತ್ರವನಂಜದಿರು ನಾ
ವುಡುವುಡೊಡೆಯರು ಮಾವಕಂಸನ
ನುಡಿಯ ಮೀರದೆ ಬಿಲ್ಲಹಬ್ಬಕೆ ಬಂದೆವಿಂದೀಗ ।
ತಡವ ಮಾಡದೆ ಬೇಗ ತಾ ಸಂ
ಗಡದವರು ಕಡುಸಿತಗರೆನೆ ಕೇ
ಳ್ದಡಿಗಡಿಗೆ ಬೆರಗಾಗಿ ಬಳಿಕಾರಜಕನಿಂತೆಂದ ॥ ೨೩

ಬಲ್ಲಿವಾಂ ಗೋವಳಯರಿಷ್ಟಕೆ
ಸಲ್ಲದವರೇ [ನಯವ ನುಡಿವೊಡೆ]
ಬಲ್ಲಿರೇ ಸಾಮಾನ್ಯರೇ ಬಯಸಿದಿರಿ ಸಂಗತವ ।
ಬಿಲ್ಲ ಹಬ್ಬಕೆ ಬಂದಿರೇ ಕಡು
ಹುಳ್ಳವರು ಬಾಯ್ಬಡಿಕರಿದಿರಲಿ
ನಿಲ್ಲದಿರಿ ಹೆರಸಾರಿಯೆನೆ ಖತಿಗೊಂಡನಸುರಾರಿ ॥ ೨೪

ನುಡಿಯದಿರು ಜಡ ಖೂಳ ನಾಲಗೆ
ಗಿಡುಕತನ ನಮ್ಮೊಡನೆಯೋ ಎನು
ತಡರಿ ಮುಂದಲೆವಿಡಿದು ಕೆಡೆಯೊದೆದಿಳೆಯೊಳಪ್ಪಳಿಸಿ ।
ಒಡಲನಿಬ್ಬಗೆಯಾಗೆ ಸೀಳ್ದವ
ಗಡಿಸಿ ರಜಕನ ನೀಗಿ ಮಡಿಗಳ
ಗಡಣದೊಟ್ಟಿಲ ಸೂರೆಗೊಂಡಸುರಾರಿ ನಗುತಿರ್ದ ॥ ೨೫

ಥಳಥಳಿಪ ಪೊಂಬಟ್ಟೆ ಪಟ್ಟಾ
ವಳಿಗಳನು ತಾನುಟ್ಟು ನೀಲಿಯ
[1] ಹೊಳೆವ ಪಳಿಗಳ [1] ಜೋಡನಿತ್ತನು ಕಾಮಪಾಲಂಗೆ ।
ಉಳಿದ ಗೋಪರಿಗೆಲ್ಲ ನಸುಮಾಂ
ದಳಿರ ಸಾಲಿಯ ಚಂದ್ರಿಕೆಯ ಮು
ಕ್ಕಳೆಯ ವಸ್ತ್ರವನಿತ್ತು ಹೊಕ್ಕನು ಮತ್ತೆ ಪಟ್ಟಣವ ॥ ೨೬

ಹೊಕ್ಕು ಕಂಡನು ನಾಲ್ಕುದೆಸೆಗಳ
ನಿಕ್ಕರಿಸಿದಂಗಡಿಯನಭ್ರವ
ಜಕ್ಕುಲಿಸುತಿಹ ದೇವತಾಲಯಗಳ ಮಹೋನ್ನತಿಯ ।
ರಕ್ಕಸರ ಕರುಮಾಡದೋಜೆಯ
ಲೆಕ್ಕವಿಲ್ಲದ ಮಂಟಪಂಗಳ
ಮಿಕ್ಕಿಸೆವ ಧವಳಾರಗೋಪುರದಮಿತಕೋಟೆಗಳ ॥ ೨೭

---

1 ಹಳದಿಗಳನವಜೋಡ, ಬ

ತರವಿಡಿದ ಧವಳಾತಪತ್ರದ
ನೊರೆಯನಗಣಿತತೋರಣಂಗಳ
ತೆರೆಯ ನಡೆವಾ ವ್ರಜದ ಜನಗಳ ಸುಳಿಯ ಗೃಹಜಲವ ।
ತರುಣಿಯರ ದೃಕ್ಶಫರವಿತತಿಯ
ಸುರಿವ ಕಂಸಕ್ರೋಧವಡಬನ
ಧರಿಸಿ ಪುರ ಜಲರಾಶಿಯಂತಿರೆ ಕಂಡನಸುರಾರಿ ॥ ೨೮

ಥಳಥಳಿಪ ಹೊಂಗಳಸನೇಸರ
ಲಲನೆಯರ ವದನೇಂದುಗಳ ಪಾ
ಡೊಳಗೆಸೆವ ಶುಭಮಂಗಳದ ಯಾದವರ ಬುಧವರರ ।
ಕುಲಗುರುಗಳಕ್ರೂರಮುಖ್ಯರ
ಲಲಿತಕವಿಗಳ ಮಂದಬುದ್ಧಿಯ
ಖಳರ ಸಂದಣಿಯಿಂದೆ ಮೆರೆದುದು ಮಧುರೆ ನಭದಂತೆ ॥ ೨೯

ಇಂತೆಸೆವ ಮಧುರಾಪುರಿಯನತಿ
ಸಂತಸದೊಳೀಕ್ಷಿಸುತೆ ಹರಿ ಬರೆ
ಮುಂತೆ ಕವಿಕವಿದಡರಿ ನೋಡುವಶೇಷಪುರಜನದ ।
ತಿಂತಿಣಿಸಿ ಕೈಮುಗಿವ ಭೂಸುರ
ಸಂತತಿಯ ಕಣ್ಗಳ ನಿವಾಳಿಯ
ಕಾಂತೆಯರ ಸಂವರಣೆ ಮೆರೆದುದು ಕೇರಿಕೇರಿಯಲಿ ॥ ೩೦

ಹರಿಚರಣಸಂಸರ್ಗದಿಂದಾ
ಪುರದ ಕಿಲ್ಬಿಷ ಹರಿದುದಸುರರ
ಹರಣ ಗಮನೋದ್ಯುಕ್ತವಾಯ್ತುರ್ದೆಸೆಯ ಯಾದವರ ।
ಹರುಷದಾರತಿ ಹೆಚ್ಚಿ ತಂಗನೆ
ಯರ ಮನೋರಥ ಸಫಲವಾಯ್ತು
ಧರೆಯ ಹೊರೆ ಹಿಂಗಿದುದು ಕಂಸಂಗಾಯ್ತು ಕಡೆಗಾಲ ॥ ೩೧

ದಮ್ಮವಿಮ್ಮಡಿಯಾಯ್ತು ದನುಜರ
ಹೆಮ್ಮಕರಿವೊಳಯೋಯ್ತು ದೇವಕಿ
ಯುಮ್ಮಳಿಕೆ ಬಯಲಾಯ್ತು ಸಜ್ಜನರೊಸಗೆ ಹಿರಿದಾಯ್ತು ।
ಕಮ್ಮಿಗಳ [1] ಕಳಕಳಕೆ [1] ಕಡೆಯಾ
ಯ್ತಮ್ಮದೋಡಿತನೀತಿ ಮುಸಲಿಯು
ತಮ್ಮನಂಘ್ರಿಸರೋಜದರ್ಶನದಿಂದೆ ಮಧುರೆಯಲಿ ॥ ೩೨

ಇಂತು ಸುಖಕರನೆನಿಸಿ ಕೃಷ್ಣನ
ನಂತಸಹಿತೊಡಬಂದ ಗೋಪರ
ಸಂತತಿಯು ಸಮ್ಮೇಳದಲಿ ಕಾಣಿಕೆಯ ಕೈಕೊಂಡು ।
ಮುಂತೆ ಬರೆ ಬರೆ ಕಂಸ ಕೇಳ್ದತಿ
ಚಿಂತೆಯಲಿ ಸಿಗ್ಗುಗುತಿರೆ ಬಳಿ
ಕಂತರಿಕ್ಷವ ಬಿಟ್ಟು ರವಿಯಪರಾರ್ಣವಕೆ ನಡೆದ ॥ ೩೩

ಆಮುಕುಂದ ನ [2] ವಾಂಘ್ರಿತರಣಿಯು [2]
ಸೀಮೆಯಲಿ ಸಿಲಲರಿದು ಕಂಸನ
ಕಾಮಿನಿಯರಾನನಸುಧಾಕರನೆನಗಸಹ್ಯವಲೆ ।
ಈಮಹಾದ್ಭುತದಧಿಕರೊಡನೆಯೆ
ವೈಮನಸ್ಸಿದುವೊಳ್ಳಿತಲ್ಲೆನು
ತಾಮಿಹಿರನಪರಾಬ್ಧಿಗಿಳಿದನನೇಕಚಿಂತೆಯಲಿ ॥ ೩೪

ಧರೆಯ ಹೃತ್ಪರಿತಾಪವಡರಿತು
ಸರಸಿಜವನಸುರೇಶ್ವರನ ಜಯ
ಸಿರಿ ಮುರಾರಿಯ ಭುಜವನೇರಿದಳಾಜನಾರ್ದನನ ।
ಕರುಣವಮರರನೈದಿದುದು ಕಂ
ಡಿರದೆ ಕೋಕವ್ರಜ ಮನೋಜನ
ಸರಳನೈದಿದುದರ್ಕನಸ್ತಮಯಿಸುವ ಸಮಯದಲಿ ॥ ೩೫

---

1 ಕಳಕಳಿಕೆ, ಬ. 2 ಅಂಘ್ರಿತವನಿ, ಬ.

ಸಂಜೆ ರಂಜಿಸಿತಿಳೆಯ ಪುಣ್ಯದ
ಪುಂಜವೆನೆ ಕಂಡಸುರರಿಪು ರಿಪು
ಭಂಜನಾಸಕ್ತಿಯಲಿ ಬರುತಿರೆ ಬಹುಳವಿಭವದಲಿ ।
ಪಂಜರದ ಶುಕದಂತೆ ಮಾರುತ
ನಂಜದೈತರೆ ಮುಂದೆ ಸುಮನೋ
ರಂಜಿತಾಂಘ್ರಿಸರೋಜನೈದಿವನದರ ಬಳಿವಿಡಿದು ॥ ೨೬

ಸಾರಿ ಬರೆ ಬರೆ ಮಾಲೆಗಾರರ
ಕೇರಿಯಲಿ ಪರಿಪರಿಯ ಕುಸುಮದ
ಸೌರಭದ ಸಂವರಣೆ ಸಂಜೆಯ ತುಂಬಿಗಳಲೆಸೆವ ।
ಸಾರಹೃದಯಸುದಾಮಸದನ
ಕ್ಕಾರಮಾಪತಿ ಬರಲು ಯುಕ್ತಿವಿ
ಚಾರಕನು ಮೈಯಿಕ್ಕಿ ಕಾಣಿಕೆಗೊಟ್ಟು ಪೊಡೆಮಟ್ಟ ॥ ೨೭

ಅಳಿಗೆ ಮಾಣಿಕ ಸಿಲುಕಿತಂಗೈ
ತಳಕೆ ಬಂದುದು ಹರ್ಷ ವಾಂಛಿತ
ಫಲಿಸಿತಿಹಪರಸಿದ್ಧಿಯಾಕೃತಿವೊತ್ತುದಿಂದೆನಗೆ ।
ಕಳೆದುದಪದಸೆ ಹರಿದುದುತ್ಕಟ
ಫಲವಡಗಿದುದು ಪಾಪ ಹರಿಬಲ
ರೊಲಿದು ಮನೆಗೈತಂದರಿಳೆಗೆ ಕೃತಾರ್ಥತಾನೆಂದ ॥ ೨೮

ದೇವ ಮನೆಗೈತಂದು ತನ್ನನು
ಕಾವುದೆಂದುಪಚರಿಸಿ ಸುಮನೋ
ಲಾಪಕಪ್ರಭು ಪೂಜ್ಯನನು ಸುಮ್ಮಾನದಿಂದೊಲಿದು ।
ತಾವರಿದು ಕುಳ್ಳಿರಿಸಿ ನವಕುಸು
ಮಾವಳಿಯ ತೊಡವುಗಳ ಮುಂದಿ
ಟ್ಟೋವಿ ನಗುತೀಕ್ಷಿಸಿದನೆವೆಯಿಕ್ಕದೆ ಮುರಾಂತಕನ ॥ ೨೯

ಈತನಚ್ಯುತನಖಿಳಭುವನ
ಖ್ಯಾತನಮೃತಾತ್ಮಕನು ತಾಂ ಸ್ಮರ
ತಾತನಧಿಕ ಭವಾದ್ಯದಿವಿಜಮಹೀಂದ್ರಪರಿಯಂತ ।
ಭೂತಳದೊಳವತರಿಸಿ ದೈತ್ಯ
ವ್ರಾತವನು ಕೊಲೆ ಬಂದು ಸಲೆಯಿ
ರ್ಪಾತನೀಹರಿಯೆಂದು ಭಾವಿಸುತಿರ್ದನುಚಿತದಲಿ ॥ ೪೦

ಪರಿಮಳದ ಕೇದಗೆಯು ಹೊಂದಾ
ವರೆಯು ಸುರಗಿಯು ಮಲ್ಲಿಗೆಯು ಪಾ
ದರಿಯು ಬಕುಳದ ಸಂಪಗೆಯು ಜಾಜಿಯು ಸಿತೋತ್ಪಲದ ।
ಮರುಗಸೇವಂತಿಗೆಯು ಮೊಲ್ಲೆಯು
ಪರಿಪರಿಯು ಪೂದೊಡವುಗಳಲಾ
ದರಣೆಯಲಿ ಸಿಂಗರಿಸಿದನು ಹಲಧರಮುರಾಂತಕರ ॥ ೪೧

ಮೇಲೆ ತೊಳಸಿಯು ವೈಜಯಂತಿಯು
ಮಾಲೆಗಳ ಕೈಕೊಳಿಸಿ ಕರ್ಪೂರ
ವೀಳಯುವನೊಲಿದಿತ್ತು ಬಳಿಕ ನಿರಂಜನಾರತಿಯು ।
ಲೀಲೆಯಿಂದೆ ನಿವಾಳಿಸುತೆ ಸುರ
ಮೌಳಿಮಣಿಯೆನಿಸಿದ ಮುಕುಂದನ
ಲಾಲಿಸಿದನಾಪುಷ್ಪಲಾವಕನಧಿಕಹರ್ಷದಲಿ ॥ ೪೨

ಪರಿಯುದಕೆ ಕಡುಮೆಚ್ಚಿ ಸವೆಯದ
ಸಿರಿಯು ಪದವಿಯುನಿತ್ತು ಜನ್ಮಾಂ
ತರಕೆ ನಿನಗಮರತ್ವವಹುದೆಂದವನ ಬೋಳೈಸಿ ।
ಹರುಷ ಮಿಗೆ ಬಿಗಿಯಪ್ಪಿ ಬಹುಳಾ
ದರರಸೋಕ್ತಿಯು ನುಡಿದು ನಮ್ಮನು
ಮರೆಯದಿರು ಸುಖಿಯಾಗೆನುತೆ ಬೀಳ್ಕೊಟ್ಟು ಬರುತಿರ್ದ ॥ ೪೩

ಬಳಿಕ ಸಂಧ್ಯಾರಾಗರಸ ವೆ
ಗ್ಗಳಿಸಿದಮೃತಾಂಶುವಿನ ಮನದು
ಮ್ಮಳಿಕೆಯಂತಸಿತಾಬ್ಜಕೆರಗುವ ತುಂಬಿಯಂದದಲಿ ।
ಖಳರ ಹೃತ್ತಾಮಸ ಘಡಾಳಿಸಿ
ಬಳಸಿತವನಿಯನೆಂಬವೊಲು ಕ
ತ್ತಲಿಸಿತೆಣ್ದೆಸೆಯಗಲಿ ನಡೆದರು ಪೆಣ್ಗಳಾಪನಕೆ ॥ ೪೪

ಕಳವಳಿಸಿ ಸಂಸಾರಸೌಖ್ಯದ
ಬಲೆಗೆ ಸಿಲುಕದ ಸಂಗರಹಿತರ
ನೊಳಗುಮಾಡಿಯೆ ಮನುಜಲೀಲೆಗೆ ಕುಂದು ಹೊರದಂತೆ ।
ಬಳಸಿ ಮರೆಯಿಸಿ ವಿಷ್ಣು ತತ್ತ್ವ
ಸ್ಥಳವನೈದುವವೊಲು ಕಾಹಿಯ
ನಿಳಯಕೈದಿತು ಬಾಲಕಿಯರೊಗ್ಗಾಗ ರಚನೆಯಲಿ ॥ ೪೫

ಖಳನಳವನೆಂದಭ್ರ ಕಂಬನಿ
ದಳದವೊಲು ತಾಂ ತಾರಕಾವಳಿ
ಬೆಳಗಿದುವು ರಶ್ಮಿಗಳು ಗುಣ ಬಯಲಾಗದಂದದಲಿ ।
ಲಲನೆಯರಿಗಿಟ್ಟೆಡೆಯ ಸೀಮೆಯ
ತಿಳುಹೆ ಬಂದವೊಲೈದೆ ದೀಪಾ
ವಳಿಗಳೊಪ್ಪಿದುವಸುರನಿಳಯದ ಬೀದಿಬೀದಿಯಲಿ ॥ ೪೬

ಅಸುರರಪದಸೆಯಸತಿಯರ ಕ
ಣ್ಗಸುರು ಕವಳದಸಹ್ಯ ಕುಟಿಲ
ವ್ಯಸನಿಗಳ ಹೃಚ್ಛಲ್ಯ ಕೋಕಪ್ರಸರದೆದೆಗಿಚ್ಚು ।
ವಸುಧೆಯುತ್ಸಹ ಕೈರವದ ಸಂ
ತಸ ಮುರಾರಿಯ ಪೆರ್ಮೆಯೆನಲಂ
ದೆಸೆದುದಾನಿಶಿತಾದ್ರಿಶಿಖರಾಗ್ರದಲಿ ಹಿಮಕಿರಣ ॥ ೪೭

ವಿರಹಿಗಳನಂಜಿಸುತೆ ಕಮಳಾ
ಕರನನುಚ್ಚಳಿಸುತ್ತೆ ಕಂಸನ
ಪರಿಭವದೊಳೊಂದಿಸುತೆ ರಸಿಕವ್ರಜವನಂಜಿಸುತೆ ।
ತರುಣಿಯುರ ಲಾಲಿಸುತೆ ರತ್ನಾ
ಕರನನುರೆ ಮೆಚ್ಚಿಸುತೆ ಕರಗಳ
ಪರಪುತವ್ಮೃತಮಯೂಖನೆಸೆದನು ಗಗನಮಾರ್ಗದಲಿ ॥ ೪೮

ಬಂದುದಿಂಗಡಲಾತ್ಮಜನ ಬಳಿ
ಸಂದು ವಿವರಿಪರಿಲ್ಲ ಮಿಗೆಯು
ಪ್ಪಂದವನು ನೋಡೆನ್ದನಲು ಬೆಳುದಿಂಗಳುರ್ವರೆಯು ।
ಮಂದದಿಂದೊಟ್ಟೈಸಲದ ಕಂ
ಡಿಂಪಿರಾಪತಿ ಹರುಷ ಮಿಗಲ್ಕೆ
ತಂದನಂಗಡಿಗೇರಿಗಳ ಸಂಭ್ರಮವನೀಕ್ಷಿಸುತೆ ॥ ೪೯

ಬರುತೆ ಕಂಡನು ಮೇಲುಗಂದವ
ಧರಿಸಿ ಮಧುರಾಧಿಪನ ನಿಳಯಕೆ
ತೆರಳೆ ಬಹ ಸೈರಂಧ್ರಿಯನು ಬಳಕುಚಿತವಚನದಲಿ ।
ತರುಣಿ ನಿಲು ನೀನಾರದಾರಿಗೆ
ಪರಿಮಳವು ನೀಂ ಹೇಳೆನಲು ಮುರ
ಹರ ನಿಮಗೆ ಚಿತ್ತೈಸಿಯೆಂದಳು ಕುಬ್ಜೆ ನಸುನಗುತೆ ॥ ೫೦

ಅವಳವರು ಕಾರುಣಿಕರೆಂದು
ತ್ಸವೆ ಮಿಗಲು ಪನ್ನೀರಗರದೊ
ಪ್ಪುವ ಸುಕತ್ತುರಿ ಸಾದು ಕುಂಕುಮ ಗಂಧ ಕಪ್ಪುರದ ।
ಸವವಿಧದ ಗಂಧೋಪಯೋಗವ
ನೆವದೊಳೆತ್ತಡಿಗೆರಗಿ ಕಮಲಾ
ಧವಹಲಾಯುಧರಂಗದಲಿ ಲೇಪಿಸಿದಳೊಲವಿನಲಿ ॥ ೫೧

ಉಟ್ಟಸಿತಪೀತಾಂಬರಕೆ ನೆರೆ
ತೊಟ್ಟ ಪೂದೊಡವಿಂಗೆ ಸಖನಾ
ಯಿಟ್ಟ ಕಸ್ತೂರಿ ಮಲಯಜಾದಿವಿಲೇಪನಪ್ರಕರ ।
ತುಟ್ಟರಾದರಸಪ್ಯದನುಜಘ
ರಟ್ಟರೊಬ್ಬರ ಚೆಲುವನೊಬ್ಬರು
ಕೊಟ್ಟು ಕೊಂಡವ್ರೊಲೆಸೆದು ನುಡಿಸಿದರಾಸುವಾಸಿಸಿಯ ॥ ೫೨

ತರುಣಿ ನಿನ್ನಾನನಕೆ ಸರಿಯೇ
ಸರಸಿರುಹವದು ಭೂತರಜ ಸಿತ
ಕಿರಣನೆಣೆಯಲ್ಲಾತನಸ್ಥಿರ ದೋಷಿ ಸಕಳಂಕ ।
ಮುರುಡುಗೊಂಡಿದೆ ದೇಹವೇಕೀ
ಪರಿಯೊಳಾಯ್ತೆನುತೆ ಹರಿ ಚಿಬುಕವ
ಕರದೆ ಪಿಡಿದೆತ್ತಿದನು ಚರಣದೊಳಂಗುಟವ ಮೆಟ್ಟ ॥ ೫೩

ಪುರುಷರತ್ನ ಮುಕುಂದನನು ಸಂ
ಸ್ಮರಿಸಲಾಹಿತಪಾತಕವ್ರಜ
ಹರಿವುದತಿಶಯವುಮುಕ್ತಿಯಹುದಿದು ನಿಗಮಸಿದ್ಧವಲೆ ।
ಹರಿಕರದ ಸಂಸರ್ಗದಿಂದಾ
ತರುಣಿ ಕೋಮಲೆಯಪ್ಪುದೇನ
ಚಬ್ರಿ ಪರುಸ ಸೋಂಕಿದೊಡೆ ಕಿಡದೇ ಲೋಹದವಲೋಹ ॥ ೫೪

ನಾರಿ ತಾಂ ಋಜುಕಾಯದಿಂದವೆ
ಮೂರಕರದಂತಾಗಿ ಕೃಷ್ಣನ
ಚೀರದಂತ್ಯವ ಪಿಡಿದು ಸದನಕೆ ಕರೆದು ಪದಕೆರಗೆ ।
ವಾರಿಜಾನನೆ ಮನದ ರಾಗಾ
ಕಾರವನು ನಾನರಿದೆನಸಕವು
ತೀರೆ ನಾಂ ಬಹೆನೆಂದು ಸಂತೈಸಿದನು ಕಂಬುಜೆಯನು ॥ ೫೫

ಆಗಳಾಲಲಿತಾಂಗಿಯುತ್ಸವ
ಸಾಗರದೊಳೋಲಾಡಿ ಚಿಂತೆಯ
ನೀಗಿ ಹರಿಯ ಕೃಪಾನುಭಾವಕೆ ಸಿರವನೊಲೆದೊಲೆದು |
ರಾಗಿಸುತೆ ಕೈಮುಗಿದು ತೆರಳಿದ
ಳಾಗುಣಾರ್ಣವಕೃಷ್ಣ ಬಲರತಿ
ವೇಗದಲಿ ಪರಿಕರಸಹಿತ ನಡೆದರು ವಿಳಾಸದಲಿ || ೫೬

ಇಂತು ಹರಿಬಲರುಗಳು ಬರುತಿರೆ
ಮುಂತೆ ನಡೆದ ವಿಚಿತ್ರದನುವಾ
ದ್ಯಂತದಿಂದವೆ ಕಂಡದಿರ್ವರು ನಗುತೆ ಮಾತಾಡಿ |
ಪಂತದಪ್ಪುವ ದಟ್ಟಡಿಯನಿ
ಟ್ಟಂತೆ ಜಾರುವ ಕೇರಿಮೆಂದಿಯ
ಹಂತಿಗಳ ಕಂಡಸುರರಿಪು ನಸುನಗುತೆ ಬರುತಿರ್ದ || ೫೭

ಮತ್ತೆ ಮುಂದೊಂದೆಡೆಯಲಿಕ್ಕಿದ
ಮುತ್ತಿನೋಲೆಗಳಲುಗೆ ಸೋರ್ಮುಡಿ
ನೃತ್ತಿಸಲು ಕುಚವೊಂದನೊಂದಿಟ್ಟಣಿಸಿ ಹಾರುತಿರೆ |
ಚಿತ್ತಜನ ಪಾಡುತೆ ವಿಟೌಘದ
ಚಿತ್ತವನು ಕೊಳ್ಳಿಡಿದು ಸಲೆ ನಲಿ
ಯುತ್ತೆ ದಾಳಟ್ಟ್ಯಲಾಡುವ ವಧುಗಳೊಪ್ಪಿದರು || ೫೮

ಬರುತೆ ಕಂಡನು ವಿಟರ ಕಣ್ಗಳ
ಸಿರಿಯನನೃತದ ಗಿರಿಯನಣಕರ
ಸರವಿಯನು ಪರಿಹಾಸ್ಯದೊಟ್ಟಿಲ ಹುರುಡಿನಾಗರವ |
ಕರೆಕರೆಯ ತಾಯ್ವನೆಯ ಕಪಟದ
ಕರುವ ಕಟಕದ ಮಂತದರಣಿಯ
ನರಲ ಸೀಮೆಯ ಚದುರಿನಿಕ್ಕೆಯ ಸೂಳಗೇರಿಗಳ || ೫೯

ಅರುಪಲೇನದನಾರಡಿಯನ
ಬ್ಬರದೆ ಪರೆಪುವಸಹ್ಯವೃತ್ತಿಯ
ಪರಿಚರಿಯ ಸುವ್ರತವ ಕಿಡಿಸುವ ಮತಿಯ ಮಗ್ಗಿಸುವ ।
ಗರುವಿಕೆಯನೋಡಿಸುವ ಲಜ್ಜೆಯ
ಹುರುಳುಗಿಡಿಸುವ ಧರ್ಮಕರ್ಮವ
ತೊರೆಯಿಸುವ ವೇಶ್ಯಾಸಮೂಹವ ಕಂಡನಸುರಾರಿ ॥ ೬೦

ನಗುವ ನಗಿಸುವ ವಂಚಿಸುವ ಕ
ಣ್ಬುಗುವ ಸೆಣಸುವ ಮುಳಿವ ಚಿತ್ತವ
ತಗೆವ ತಾಗಿಸುವೆಳಸಿ ಕೂಡುವ ನಗಿಸಿ ಕಾಲ್ವಿಡಿವ ।
ಸೊಗಸೆ ಸೋಂಕುವ ಮೇಳವಿಸಿ ನಂ
ಬುಗೆಯ ನೆವದೊಳು ವಾರಿಸುವ ಜೊ
ತ್ತುಗಳ ವೇಶ್ಯಾವೀಧಿಗಳೊಳಸುರಾರಿ ನಡೆತಂದ ॥ ೬೧

ಅರಗಿಳಿಯನೋದಿಸುವ ಮದನನ
ಬಿರುದ ಪೊಗಳುವ ಕಾಮಶಾಸ್ತ್ರದ
ಪರಿವಿಡಿಯ ಬಿನ್ನೈಸಿ ತೋರುವ ಮನ್ಮಥಾಹವದ ।
ಪರಿಕರವ ಜಾಗಿಸುವ ಕೂರ್ಮೆಯ
ಗುರುಲಘುತ್ವವ ಗಣಿಪ ಚಾಳಿಯ
ಮೆರೆವ ವಾರವಧೂಕದಂಬವ ಕಂಡನಸುರಾರಿ ॥ ೬೨

ಕುರುಳ ತಿದ್ದುವ ಜಡಿವ ಕಬರಿಯ
ಭರವ ಸಂತೈಸುವ ವಿಲೇಪನ
ವರೆವದಂಸೋದಿಸುವ ಕರ್ಣಾಭರಣಮುದ್ರಿಕೆಯ ।
ಸರಿದಲುಗದಂತಿಡುವ ಪಣೆಯೊಳು
ಬರೆದು ತಿಲಕವ ದರ್ಪಣವನಾ
ದರಿಸಿ ನೋಡುವ ಬಾಲೆಯರನೀಕ್ಷಿಸಿದನಸುರಾರಿ ॥ ೬೩

ಕರರುಹವ ಸಾಗಿಸುವ ಮೇಲುದ
ನರೆದೆರೆದು ಕುಚದೋರಿಸುವ
ಕೊರಲ ಹಾರವನಡಿಗಡಿಗೆ ಸರಿದೋವಿ ದಿಟ್ಟಿಸುವ ।
ಸರಸ ಮಿಗೆ ಕೈಹೊಯ್ದು ನಾಲ್ವರ
ಬರಿಯುನಪ್ಪುವ ನುಡಿದು ಚಿತ್ತವ
ಕರಗಿಸುವ ಯುವತಿಯರ ಕಂಡಸುರಾರಿ ನಗುತಿರ್ದ ॥ ೬೪

ಗಾಳಿ ಸುಳಿದೊಡೆ ಕರೆದು ನಡೆ ನಡೆ
ವೀಳೆಯವ ತಾರೆಂಬ ಬರಡರು
ಬಾಳರೆನ್ನದೆ ಪೋಪವರ ಕೈವಿಡಿದು ಕೊಂಡುಯ್ದು ।
ತೋಳತೆಕ್ಕೆಯೊಳಿರಿಕಿ ನಿಮಿಷಕೆ
ಮೇಳವಿಸಿ ಹಣಗೊಂಡು ಹೋರುವ
ಖೂಳರೆಂಬಾಕೆಯರ ಕಂಡಸುರಾರಿ ನಗುತಿರ್ದ ॥ ೬೫

ಇವರು ಮೃದುನುಡಿ ಮುಗುಳುನಗೆ ಭು
ಲ್ಲವಣಿ ನಡೆ ವರ್ತನೆ ಕುಚೇಷ್ಟಿತ
ತವಕವಾಲಿಂಗನವಿಕಾರೇಂಗಿತಗಳುದ್ರೇಕ ।
ಕವಲಿಡಿದ ಚುಂಬನ ಮನೋಜೋ
ತ್ಸವ ಸುರಾಗದ ಲಲ್ಲೆಯಿಂದೆ
ಲ್ಲವರನೊಮ್ಮಿಗೆ ಹುರುಳುಗಿಡಿಸುವರೆಂದು ಹರಿ ನುಡಿದ ॥ ೬೬

ಸೇರದಿವದಿರ ಸಂಗ ಮತ್ಪದ
ವಾರಿರುಹಪೂಜಕರಿಗಾಗದು
ಸಾರಸತ್ಪಥರಿಗೆ ಮಹಾವಂಶಾಭಿಜಾತರಿಗೆ ।
ಸೇರುವುದು ಯಮಶಾಸ್ತ್ರಿಗಂಜದ
ಧೀರರಿಗೆ ಲೋಕಾಪವಾದವ
ಸೈರಿಸುವ ಚೋಕಗಳಿಗೆನುತಸುರಾರಿ ನಗುತಿರ್ದ ॥ ೬೭

ಆವೆಧುಗಳಚ್ಯುತನ ದರುಶನ
ವೀವುದಿಹಪರಸೌಖ್ಯವೆಂದು ಮ
ಹಾವಿಲಾಸದಿನಿದಿರುಬಂದೆವೆಯಿಕ್ಕದೀಕ್ಷಿಸುತೆ ।
ಭಾವದಲಿ ವಿಕಳಿಸದೆ ತ್ರಿಜಗ
ತ್ಪಾವನನ ಪದಕೆರಗಿ ತಮ್ಮಯ
ಜೀವನಕೆ ಫಲವಾಯ್ತೆನುತೆ ಬೀಳ್ಕೊಂಡರಚ್ಯುತನ ॥ ೬೮

ಹರಿಹಲಾಯುಧರಿಂತು ಮಧುರಾ
ಪುರದ ವೇಶ್ಯಾವೀಧಿಯನು ಕಳಿ
ದರಸುಮಕ್ಕಳ ಮನ್ನೆಯರ ಮಂತ್ರಿಗಳ ಕರಣಿಕರ ।
ಧರಣಿಯಮರರ ಮಲ್ಲಮಾವಂ
ತರ ಹಯಾರೋಹಕರ ಹರದರ
ಸರಿಯ ಶೂದ್ರರ ಕೇರಿಕೇರಿಗಳೊಳಗೆ [1] ತಿರುಗಿದರು [1] ॥ ೬೯

ಬಂದು ಹರಿಬಲರಸುರನಿಲಯದ
ಮುಂದೆ ನಿಂದಾದ್ವಾರಪಾಲರ
ಸಂದಣಿಯನೀಕ್ಷಿಸುತೆ ನಸುನಗುತುರವಣಿಸಿ ನಡೆಯೆ ।
ಪಿಂದುಗಳದೆದ್ದಖಿಲರವದಿರ
ನೊಂದೆರಡುಗಾಯದಲಿ ಮುಗ್ಗಿಸಿ
ಮುಂದೆ ನಡೆದೈದಿದರು ವಿಲಸಿತಶಸ್ತ್ರಮಂಟಪವ ॥ ೭೦

ಕಂಡರಿವರೆಣ್ದೆಸೆಯಲೊಪ್ಪುವ
ಖಂಡೆಯವ ಮಂಟಪದ ಬಿರುದಿನ
ಗೊಂಡೆಗಳ ಚೌರಿಗಳ ಗುಡಿಗಳ ಮಕರತೋರಣದ ।
ತಂಡತಂಡದ ಕದಳಿಗಳ ಹೂ
ದಂಡೆಗಳ ಪಳವಳಿಗೆಗಳ ನನೆ
ಯುಂಡೆಗಳ ಸಿಂಗರದಲೊಪ್ಪಿಹ ಶಸ್ತ್ರಮಂಟಪವ ॥ ೭೧

ಬರುತಿರಲು, ಕಾ.

ತರವಿಡಿದ ದಶಧಾನ್ಯರಾಶಿಯು ।
ಸುರೆರುದಿರಗಳ ಪಾತ್ರೆಗಳ ಭೀ
ಕರದ ರುಂಡಪ್ರತತಿಗಳ ಬೇತಾಳಮೂರ್ತಿಗಳ ।
ವೊರೆವ ಹೋಮಾಗ್ನಿಗಳ ಸುತ್ತಲು
ಸುರಿದ ಬಲಿಗೂಳುಗಳ ಮಂಟಪ
ವರಿದು ಬಿಸುಟವಿಕೋಟಿಯಿಂದೊಪ್ಪಿರಲು ಹರಿ ಕಂಡ ॥ ೨೧

ಧರ್ಮಮಂದಿರದಿಕ್ಕೆಲಂಗಳ
ಪೆರ್ಮೆಯಿಂದವಲೋಕಿಸುತಸುರ
ಕಾರ್ಮುಕದ ಸರಿಸದಲಿ ನಿಂದು ಗೃಹಾಂತರಾಳದಲಿ ।
ಮೊರ್ಮಲೆವ ರಕ್ಕಸರ ಬಗೆಯದೆ
ಕೂರ್ಮೆಯಿಂದೀಕ್ಷಿಸುತುಮಾದು
ಷ್ಕರ್ಮಹರನರ್ಚಿಸಿದ ಭೀಕರಬಾಣವಿಷ್ಟರವ ॥ ೨೨

ಕಂಡನಸುರೇಶ್ವರನ ನಚ್ಚಿನ
ಖಂಡೆಯುವ ಬಾಣಗಳನುದ್ದದ
ಪಿಂಡಿವಾಳವ ಭಲ್ಲೆಯುವನಿಟ್ಟೆಯು ಕಠಾರಿಗಳ ।
ದಂಡಶೂಲಮುಸುಂಡಿಮುದ್ಗರ
ಚಂಡಪರಶುಗದಾದಿಶಸ್ತ್ರದ
ದಂಡೆಗಳನಾಮಂದಿರದ ಬಹುಚಿತ್ರಪುತ್ರಿಕೆಯ ॥ ೨೩

ಬಳಿಕ ಕಂಸಾಸುರನ ಚಾಪದ
ಬಳಿಗೆ ಬಂದಿದು ವಾಸವಾದ್ಯರ
ಗೆಲಿದ ಧನುವೇ ತಪ್ಪದಲ್ಲದೊಡೀಸುವಿಸ್ತಾರ ।
ಉಳಿದ ಶಸ್ತ್ರಕ್ಕಿಲ್ಲೆನುತೆ ಮು
ಚ್ಚಳವ ನೆರೆ ಪಿಡಿದೆತ್ತಿ ಬಿಲ್ಲನು
ನಿಲಿಸಿ ಬಾಗಿಸಿ ತಿರುವ ಕೊಪ್ಪಿಗೆ ತುಡಿಸಿ ಬೊಬ್ಬಿರಿದ ॥ ೨೪

ಮಂಡಲಿಸಿತೆಗೆವೈಸರಲಿ ಬಿಲು
ಕಂಡಿಸಿದುದಾದನಿಗೆ ಕಮಲಭ
ವಾಂಡ ಬಿಕ್ಕನೆ ಬಿರಿದುದಿಳೆ ತಲ್ಲಣಿಸಿತಬ್ಧಿಗಳ ।
ತಂಡವೊಡಗಲಸಿದುವು ಕುಲಗಿರಿ
ದಿಂಡುಗೆಡೆದುವು ಜಾತಿದೇವರ
ದಿಂಡು ಹೊಗೆ ದೆಸೆಗೆಟ್ಟುದೇನೆಂಬೆನು ಮಹಾದ್ಭುತವ ॥ ೭೬

ಕೇಳಿ ಖಳನೆದೆಗುಂದಿ ಕಂಪಿಸಿ
ಬೀಳುತೇಳುತೆ ದೆಸೆಗೆ ಬೆಚ್ಚುತೆ
ಕಾಲುಗಿಡುತವ್ವಳಿಸುತಳಲುತೆ ಮಂತ್ರಿಗಳ ಕರಿಸಿ ।
ಬಾಲರಿವದಿರನುದಯಸಮಯಕೆ
ಸೀಳಿಹಾಯ್ಕುವುಪಾಯವಾವುದು
ಮೇಲಣೆಣಿಕೆಯದಾವುದೆಂದೆನುತಿರ್ದನಮರಾರಿ ॥ ೭೭

ಬೇಡ ಹಗೆ ಹರಿಯೊಡನೆ ಸಂಧಿಯ
ಮಾಡುವೊಡೆ ಸಮ್ಮತವೆನಲು ಖಳ
ದಾಡೆಗಡಿದುದ್ರೇಕಿಸುತೆ ಮಂತ್ರಿಗಳನವಗಡಿಸಿ ।
ಹೇಡಿಗಳು ನೀಂ ನಿಮಗೆ ತಕ್ಕುದ
ನಾಡಿದಿರಿ ತಪ್ಪೇನೆನುತೆ ಕುಲ
ಗೇಡಿ ಕರಿಶಿಕ್ಷಕರ ಕರೆ ಹೋಗೆಂದು ಗರ್ಜಿಸಿದ ॥ ೭೮

ಬಂದರಾಕ್ಷಣಕಾಗಳಸುರನ
ಮುಂದೆ ಕೈಗಳ ಮುಗಿದು ಬೆಸನೇ
ನೆಂದು ಬಿನ್ನೈಸಿದೊಡೆ ನುಡಿದನು ಕಂಸನವದಿರಿಗೆ ।
ನಂದತನಯರ ನಮ್ಮ ಪಟ್ಟದ
ಸಿಂದುರದ ಕೈಯಿಂದೆ ಸೀಳಿಸಿ
ತಂದು ತೋರುವುದೆನಲವರು ನಗುತೆಂದರೊಡೆಯಂಗೆ ॥ ೭೯

ಬಣಗುಗುವರರ ಬಲ್ಲುದೇ ಕರಿ
ಕೆಣಕುವೊಡೆ ಮಿಗೆ ಶಕ್ರ ಸಮನೇ
ಎಣಿಕೆಗೊಂಡೇಕಕಟ ಬಲುಗಾಳಗವ ಬೆಸಸಿದಿರಿ ।
ರಣಮುಖದೊಳದಿರಾದೊಡೊಂದೇ
ಕ್ಷಣಕೆ ಗೆಲುವುದು ಶಿವನನೀವಾ
ರಣಕೆ ಮೂರ್ಮಲೆತಾರು ಬದುಕುವರೆಂದರವರೆಂದು ॥ ೮೨

ಆದೊಡಿನನುದಯದಲಿ ಕೊಲಿಸುವು
ದಾದುರಾತ್ಮರನೆಂದು ನೇಮಿಸಿ
ಸಾದಕರು ಮೂವುತರು ಮೊದಲಾದವರ ಬೀಳ್ಕೊಟ್ಟು ।
ಹೋದನಂತಃಪುರಕೆ ಖಲನೀ
ಮಾಧವಹಲಾಯುಧರು ಧನುವಿಹ
ವೇದಿಕೆಯೊಳೊರಗಿದರು ಪರಿಕರಸಹಿತ ರಜನಿಯುಲಿ ॥ ೮೩

ಇತ್ತ ಖಳನೆಡಗಣ್ಣು ಜಂಗಳು
ಕೆತ್ತದೊಡಗಿದುವವನ ಸತಿಯುರ
ಚಿತ್ತದಲಿ ವಿಪರೀತಚೇಷ್ಟೆಗಳಾದುವಾಪುರದ ।
ಸುತ್ತುವಳಯದ ತರು ಮುರಿಯಲಳಿ
ಗೊತ್ತಿ ಬೀಸಿತು ಗಾಳಿ ನಾಯ್ಗಳ
ಮೊತ್ತ ಗೋಳ್ಗೊಂಡಳುತುಮಿರ್ದುದಸುರನ ನಗರಿಯುಲಿ ॥ ೮೪

ಕನಸಿನಲಿ ಕಳವಳಿಸಿ ನಂದನ
ತನಯನೊಡನಿರದೆತ್ತಿ ಕಾದುವ
ದನುಜಪತಿಯು ವಿಕಾರಚೇಷ್ಟೆಯ ಕಂಡು ನಸುನಗುತೆ ।
ನಿನಗೆ ತಪ್ಪದು ಮರಣವೆನುತಾ
ತನ ದೊಟಾರಿಸಿ ನುಡಿದು ಹಾಯ್ದನು
ವನಧಿಸುತನಪರಾದ್ರಿಶಿಖರಸ್ಥಳದ ಚಾವಡಿಗೆ ॥ ೮೫

ಮಾನಸಾಂತದೊಳಚ್ಯುತಾಂಘ್ರಿ
ಧ್ಯಾನಪರಿಣತನೆದ್ದು ಹರಿಬಲ
ರೇನಮಾಡಿದರೆಲ್ಲಿ ಮಲಗಿದರಕಟ ಪಸಿದರಲಾ ।
ದಾನವನ ಭಯ ಬಲುಹು ನಾನಿ
ದ್ದೇನು ಫಲ ಮಂದಿರಕೆ ತರಲನು
ಮಾನ ಘಟಿಸುವುದೆಂದು ಚಿಂತಿಸುತಿರ್ದನಕ್ರೂರ ॥ ೮೪

ಆರನೆಯ ಸಂಧಿ ಮುಗಿದುದು

---

## ಏಳನೆಯ ಸಂಧಿ

ಸೂಚನೆ

ಕಾಳಗಕೆ ಬಂದಸುರನಾನೆಯ
ಸೀಳಿ ಮಲ್ಲರ ಮುರಿದು ಬಲವನ
ಮಾಲಿಗಳು ಕಂಸಾಸುರನ ಕಳುಹಿದರು ಯಮಪುರಿಗೆ ॥

ಬಿಲ್ಲುಡಿದ ವೃತ್ತಾಂತ ಪುರದೊಳ
ಗೆಲ್ಲ ಹರೆದುದು ಕಂಡು ಚಂದ್ರಿಕೆ
ನಿಲ್ಲದೋಡಿತು ದಾನವನ [1] ಸಿರಿ [1] ಮಸುಳುವಂದದಲಿ ।
ಇಲ್ಲಿಹುದು ಮತವಲ್ಲೆನುತೆ [2] ನಿಶೆ
ತಲ್ಲಣಿಸಿತಸತಿಯರು ಬಳಿಕುಪ
ವಲ್ಲಭರ ಬಿಟ್ಟೋಡುತಿರ್ದರು ತಮ್ಮ ಮಂದಿರಕೆ [2] ॥ ೧

ಜಡಿವ ಬಿಡುಮುಡಿ ಪರೆದಳಕ ಕೆಂ
ಪಡರಿದಂಬಕ ನೊಂದಧರ ದಡ
ದಡಿಸುವಂಘ್ರಿ [3] ಜಗುಳ್ದ [3] ಕುಚಯುಗ ನಡುಗುವಂಗಲತೆ ।

---

1 ಜಯ್ಯ, ಕಾ. 2 ಕ್ರಾಂ ತಲ್ಲಣಿಸಿ ಸತಿಯರು ಸಹಿತ ಪುರವಲ್ಲಭನ ಬಿಟ್ಟೋಡುತಿರ್ದರು ಪುರದ ಜನ ಬೆದರಿ. ಜಗುಳ್ವ, ಕಾ.

ಕಡುಪಳಿದ ಮನ ಸುಯ್ವ ಬಾಯ್ ಪುಡಿ
ಯಿಡುವ ತಂಬುಲವಾಗುಳಿಕೆ ನೇ
ರ್ವಡದ ತನುರುಹವೆಸೆಯುಲೋಡಿತು ಬಂಧಕೀನಿವಹ ॥ ೨

ಏಳಿ ಬೆಳಗಾಯ್ತೆಂದು ಬಲವನ
ಮೂಲಿಗಳನೆಬ್ಬಿಸುವವೋಲ್ ಖಳ
ರೂಳಿಗಕೆ ಕಡೆಯಾದುದಿಂದಿನಲೆಂದು ಯದುಕುಲಕೆ ।
ಹೇಳುವಂತೆ ಕವೀಂದ್ರರೋದುವ
ಕೇಳುವೆಯನೋದಿಸುವ ತೆರದಲಿ
ಕೋಳಿಗಳು ಕೂಗಿದುವು ರವಿಯುದಯಿಸುವ ಸಮಯದಲಿ ॥ ೩

ನೈದಿಲುರೆ ಸಿಗ್ಗಾಗಿ ದುಗುಡವ
ನೈದಿದುವು ಭಂಗಂಗಳಿಂದುವ
ನೈದಿದುವು ಮರಿದುಂಬಿಯೈದಿದುವಂಬು[1] ಜಾತವನು[1] ।
ಭೂದಿವಿಜರು ನದೀತಟಾಕವ
ನೈದಿದರು ದುರ್ಬುದ್ಧಿಯಸುರನ
ನೈದಿದುದು ಸರಸಿರುಹಸಖನುದಯಿಸುವ ಸಮಯದಲಿ ॥ ೪

ವಿರಹದಲಿ ಬಳಲಿದ ರಥಾಂಗದ
ನೆರವಿಗಭಯವ ಕೊಡುತೆ ಕಂಸನ
ತರುಣಿಯರಿಗತ್ಯಂತಚಿಂತಾನಳನ ಹೆಚ್ಚಿಸುತೆ ।
ಹರಿಪದಕೆ ಪುಷ್ಪಾಂಜಲಿಯನಾ
ದರಿಸಿ ನೀಡುತೆ ಚಂದ್ರಕಾಂತವ
ಕೊರಗಿಸುತೆ ರವಿ ಬಂದನಿಂದ್ರದಿಶಾದ್ರಿಶಿಖರದಲಿ ॥ ೫

ತರಣಿಯುದಯದಲೆದ್ದು ಶೌರಿಯು
ಚರಣವನು ಸಂಸ್ಮರಿಸಿ ನಾಮೋ
ಚ್ಚರಣೆಗಳನಾದರಿಸಿ ಸಂಧ್ಯಾವಿಹಿತ ಕೃತ್ಯದಲಿ ।

1 ಜಾತದಲಿ, ಓ. ಕಾ.

ಕರಣಶುದ್ಧಿಯನ್ನೈದಿ ಧರಣೀ
ಸುರರ ಮನ್ನಿಸಿ ಸಚಿವಜನಸಹಿ
ತಿರದೆ ಬಳಿಕಕ್ರೂರ ಬಂದನು ಕಂಸನರಮನೆಗೆ ॥ ೬

ಇರುಳು ನಿದ್ರೆಯ ತೊರೆದು ಬಿಂಬಾ
ಧರೆಯು [1] ರುಚಿ ಯುನುಳಿದು [1] ಚಿಂತಾ
ತರುಣಿಯೊಡ [2] ನೆ ಮನೋಣನು [2] ರಾಗದೊಳಿರ್ದ ಮೂರ್ಛೆ
ಯುಲಿ ।
ಕರುಣರಸವುಳಿದಳಲುತುರೆ ಸೀ
ವರಿಸುತುಪ್ಪವಡಿಸಿದನಾಹಲ
ಧರಮುಕುಂದರ ಕೊಲುವುಪಾಯುವನೆಣಿಸುತಮುರಾರಿ ॥ ೭

[3] ಜಾಳಿಲೆಯು [3] ಧೈರ್ಯದಲಿ ಸರ್ಪನ
[4] ಹೇಳಿಗೆ [4] ಯು ಶಾಂತಿಯುಲಿ ಠಕ್ಕಿನ
ಗೌಳಿಯುರ ರೀತಿಯುಲಿ ಸದ್ಗುರುಮುಖವನರಿಯುದಿಹ ।
ಬೇಳುವೆಯು ಬುದ್ಧಿಯುಲಿ ಬೀದಿಯು
ಸೂಳೆಯುರ ಮುರುಕದಲಿ ಖಳ ತ
ನ್ನೋಲಗಕೆ ನಡೆತಂದು ಮಂತ್ರಿಪ್ರಕರಕಿಂತೆಂದ ॥ ೮

ನಿನ್ನಿರುಳು ನಾಂ ನುಡಿದ ಕಾರ್ಯವ
ಮನ್ನಿಸದೆ [5] ಮುರುಳಾಡಿ [5] ಕೃಷ್ಣನೊ
ಳೆನ್ನ ಸಂಧಿಯುಮಾಡೆ ಹೇಳಿದಿರಿನ್ನು ಹೇಳಿದೊಡೆ ।
ಮನ್ನಿಸು [6] ವ ಕಾಳಗದಗಡುತನ
ವಿನ್ನು ಕೊಳ್ಳದುಪಾಯುವೆಂಬೀ
ಗನ್ನಕಾರರು [6] ನೀವೆನುತೆ ಬಿಸುಸುಯ್ದನಮುರಾರಿ ॥ ೯

---

[1] ಸುದ್ಧಿಯುವುರೆದು. ಕಾ. [2] ನಸವಾಸು, ಬ. [3] ಜಾಳಿದೆಯು, ಕಾ. [4] ಏಳಿಗೆ, ಕಾ, [5] ಮುರುಳಾಗಿ, ಕಾ. [6] ವಿರೋಕಾಳುಗಿಡುವಿರೊ ಇನ್ನುಕೊಳ್ಳದುಪಾಯುವೆಂಬಿರೊ ಗನ್ನಕಾರರು, ಕಾ.

ಚಿತ್ತವಿಸು ದನುಜೇಂದ್ರ ನಿನ್ನಯ
ಚಿತ್ತದಲಿ ಖತಿ ಮೊಳೆತೊಡಿಂದೇ
ಸತ್ತ್ವವರು ನಾಂ ನೀಂ ನಿರೂಪಿಸಿದಂತೆ ಮಾಳ್ಪವೆನೆ ।
ಮತ್ತೆ [1] ಯಾತನು [1] ಮೆಚ್ಚಿ ನಿಮ್ಮವೊ
ಉತ್ತಮೋತ್ತಮಸಚಿವರಾರೆನ
ಲಿತ್ತ ಕೈಮುಗಿದೆದ್ದು ಪತಿಗಕ್ರೂರನಿಂತೆಂದ ॥ ೧೦

ಹಿಂದೆ ಗೋಕುಲದೊಳಗೆ ರಾಕ್ಷಸ
ವೃಂದವನು ನೆರೆ ಕೊಂದರಿಲ್ಲಿಗೆ
ಬಂದು ರಜಕನ ಸೀಳಿದರು ನೆಗ್ಗಿದರು ಕಾರ್ಮುಕವ ।
ಇಂದು ಹರಿಬಲರಿಲ್ಲಿಗೀಗಳ
ಬಂದರಲ್ಲದೆ ಮಾಣರಿದಕೇ
[2] ನೊಂದು [2] ಪಾಯುವ ಬೆಸ [3]ಸಿ ನೀಂ ತೆರಳೆಂದ [3] ನಕ್ರೂರ ॥

ತಪ್ಪ ನುಡಿವವನಲ್ಲ ಮುರಹರ
ಬಪ್ಪುದಾದೊಡೆ ಸತ್ಯ ದೈತ್ಯರ
ದರ್ಪ ಕೊಳ್ಳದು ಬಗೆಯನಚ್ಯುತನಾನೆಗೀನೆಗಳ ।
ಅಪ್ಪ ಪಾಯುವ ಬಸಸಿ ನೀಂ ತೆರ
ಳುಪ್ಪರಿಗೆಗೆನೆ ಕೇಳಿ ಯದುಕುಲ
ದರ್ಪಣನ ನುಡಿ ತಪ್ಪದೆನುತಿಂತೆಂದನಾಕಂಸ ॥ ೧೧

ಬೀರಜಗಜಟ್ಟಿಗಳನಾಚಾ
ಣೂರಮುಖ್ಯರ ಕರಿಸಿ ಬಹುವಿ
ಸ್ತಾರವೆಸಿಸಿದ ಮಲ್ಲರಂಗದಲಿರಿಸಿ ರಾಕ್ಷಸರ ।
ಸೇರುವೆಯ ಚತುರಂಗಸೇನೆಯ
ನೋರಣದೊ [4] ಳೊಡ್ಡಿಕ್ಕಿ [4] ಪಟ್ಟದ
ವಾರಣದ ಕೈಯಿಂದೆ ಕೊಲಿಸುವುದೆನ್ನ ಮತವೆಂದ ॥ ೧೨

1 ಯದಕತಿ, ಕಾ. 2 ನೆಂದು, ಕಾ. 3 ನುಬೀಗದೊಳೆಂದ, ಕಾ.
4 ಳೆಣದಿಕ್ಕಿ, ಬ.

ಎಂದು ಖಳನಲ್ಲಿರದೆ ಬೆಳ್ಗದಿ
ರಿಂದುಗಳನಂಡಲೆವ ಸೌಧಕೆ
ಬಂದು ಮೇಲಣ ನೆಲೆಯೊಳಸ್ತ್ರಶಾಸ್ತ್ರಿಯರು ಸಹಿತ ।
ನಿಂದು ಡಿಳ್ಳಿಸಿ ತಟತಟಿಸಿ ಮನ
ನೊಂದು ಸುಯ್ಯುತೆ ರಾಜವಿಭವಕೆ
ಕುಂದು ಹೊರದಂದದಲಿ [1]ಚಿಂತಿಸು[1] ತಿರ್ದನಾ ಕಂಸ ॥ ೧೪

ಇತ್ತ ಮಂತ್ರಿಗಳವ ನಿರೂಪಿಸೆ
ಚಿತ್ತವಿಸಿದಂದದಲಿ ಮಲ್ಲರ
ಮೊತ್ತವನು ಕರೆದೊಳವುಗಿಸಿ ಮೇಳೆಯದ ಮಂಟಪದ ।
ಸುತ್ತುವಳಯದೊಳಧಟದೈತ್ಯರ
ನೊತ್ತ [2]ಲಿಕ್ಕಿ[2] ಬಳಿಕ್ಕ ಕಂಸನ
ಮತ್ತದಂತಿಯ ತರಿಸಿ ನಿಲಿಸಿದರಖಿಳಬಲಸಹಿತ ॥ ೧೫

ನೀಲಗಿರಿಯೋ ತಿಮಿಂಗರಾಜನ
[3]ಜಾಲವೋ[3] ಮೂಜಗವ ನುಂಗುವ
ಶೂಲಿಯೊಡನಿದಿರೆತ್ತಿ ನಿಂದ ಮಹಾಗಜಾಸುರನೊ ।
ಕಾಲಕೂಟದ ಕಡಲೊ ವಿಲಯದ
ಘಾಳಿಯೋ ಪೇಳೆನಲು ಖಳಕಂ
ಸಾಲಯದ ಬಾಗಿಲಲಿ ನಿಂದುದು ಕುವಲಯಾಪೀಡ ॥ ೧೬

ನಂದತನಯರನಸುರಪತಿ ಕೊಲು
ವಂದವನು ನೋಡುವೆನೆನುತೆ ಬಳಿ
ಸಂದು ನೆರೆದುದು ಪೌರಜನ ಕೌತುಕ [4]ದೆ ಹಂತಿ[4] ಯಲಿ ।
ಇಂದುಮುಖಿಯರು ರಾಜಸುತರೈ
ತಂದು ನಿಂದರು ಭದ್ರದಲಿ ಬಳಿ
ಕಂದು ದೇವಕಿ ತನ್ನ ಪತಿಸಹಿತಿರ್ದಳವರೊಡನೆ ॥ ೧೭

---

1 ಗರ್ಜಿಸು, ಕಾ. 2 ನಿಕ್ಕಿ, ಕಾ. 3 ಬಾಲನೋ, ಕಾ.
4 ದಖಾತಿ, ಒ. ದಕಾಂತಿ, ಕಾ.

ಇತ್ತಲಖಿಳಚರಾಚರಂಗಳ
ಹೆತ್ತ ತಂದೆಯು ತಂದೆ ಮಾಯಾ
ನರ್ತಕಿಯನಾಡಿಸುವ ನಟನಾಮ್ನಾಯಕೋಟಿಗಳ ।
ನೆತ್ತಿಯಲಿ ಪದವಿಡುವಖಿಳದೇ
ವೋತ್ತಮೋತ್ತಮಶೌರಿ ಗೋಪುರ
ಮೊತ್ತಸಹಿತುಪ್ಪವಡಿಸಿದನಾಶಸ್ತ್ರಶಾಲೆಯಲಿ ॥ ೧೮

ಹರಿಹಲಾಯುಧರೆದ್ದು ಯಮುನಾ
ಪರಿಸರಕೆ ನಡೆತಂದು ಚರಣಾಂ
ಬುರುಹವದನವ ತೊಳೆದು ಸಂಧ್ಯಾವಂದನೆ [1] ಯ ಮಾಡಿ ।
ಪರಿಜನರ ಕರೆಕರೆದು ವಿವಿಧಾ
ದರಣೆಯಲಿ ಮನ್ನಿಸುತೆ ಸೂರ್ಯ
ಸ್ವರಮುಹೂರ್ತವ ಕಂಡು ಬಂದರು ಮರಳಿ ಪಟ್ಟಣಕೆ [1] ೧೯

ಹಾರಿ ಬೊಬ್ಬಿರಿವದಟಗೋವರ
ಭೂರಿರವವಚ್ಯುತನ ಕೊಳಲ ಮ
ಹಾರಭಸ ಹಲಧರನ ಬಾಹಾಸ್ಫಾಲನಧ್ವಾನ ।
ದಾರಿಯಲಿ ಗರ್ಜಿಸುತುಲಿವ ಕೈ
ವಾರಿಗಳ ನಿರ್ಘೋಷ ಮಧುರೆಯ
ಕೇರಿಕೇರಿಯೊಳಸೆದುದಮರವಿರೋಧಿಯಳವಳಿಯ ॥ ೨೦

ಬಂದು ಹರಿಬಲರಮರರಿಪುವಿನ
ಮಂದಿರದ ಬಾಗಿಲಲಿ ನಿಂದಿಹ
ಗಂಧಗಜದ ಮಹೋಗ್ರಮೂರ್ತಿಯ ಕಂಡು ಬೆರಗಾಗಿ ।
ನಿಂದ ಗಿರಿಯೋ ಮೇಣಿದಸುರನ
ಸಿಂಧುರವೊ ಮಝು ಭಾಪುರೆನುತೊಲ
ನಿಂದೆ ಮಕುಟವನೊಲೆದೊಲೆದು ಕೊಂಡಾಡಿದರು ನಗುತೆ ॥ ೨೧

---

[1] ನಾದಿಗಳ ವಿರಚಿಸುವ ಕಾಲೋಚಿತವಸನನುಕರಿಸಿ ಪರಿಜನವೊಲಿವ ವಿವಿಧಾದರಣೆಯಲಿ ಮನ್ನಿಸಿದರಧಿಕವಿನೋದವಿಭವದಲಿ, ಬ.

ದಾಡೆಯಲಿ ಜವನೆದೆಯನಿಬ್ಬಗೆ
ಮಾಡಿ ಸೀಳುವ ಸುರಗಿರಿಯುಮಂ
ಡಾಡಿ ಕೆಡಹುವ ರವಿರಥವ ಸೊಂಡಿಲಲಿ ಬರೆ ಸೆಳೆವ ।
ನೋಡಿ ತವಕಿಸುವಾನೆಕಾರರ
ಹೇಡಿಗೊಳಿಸುವ ನೆಳಲ ರಿಪುವೆಂ
ದೀಡಿರಿವ ಕೋಪದಲಿ ಗಜವಿರೆ ಕಂಡನಸುರಾರಿ ॥ ೨೨

ಥಳಥಳಿಪ ದಾಡೆಗಳ ರುಚಿಯಿಂ
[1] ದೆಳವಿಸಿಲು ಮಸುಳಿತು [1] ಕಪೋಲದ
ಲಿಳಿವ ಮದಧಾರೆಯಲಿ ಕೆಸರಾಯ್ತುಸುರಪುರ [2] ವೀಧಿ [2] ।
[3] ಕೆಳರಿಸುವ ದಿಟ್ಟಿಗಳ ಡಾಳಕೆ
ಕಳನ ನದಿಗಳು ಸರಿಯೆ ಸಿಂಧುರ
ಕೆಳೆಯೆ [3] ಪಡಿಯಿಲ್ಲೆಂದು ಕೊಂಡಾಡಿದನು ಹರಿ ನಗುತೆ ॥ ೨೩

ಘೀಳಿಡುವ ದನಿಗಳಗೊಡೆದುದೀ
ರೇಳುಜಗವಾಕರ್ಣತಾಳದ
ಗಾಳಿಯಲಿ ಹಾರಿದುವು ಪುಷ್ಪಕಗಳು ಸುರವ್ರಜದ ।
ಮೇಲುಲಿವ ಗಂಟೆಯ ದನಿಗೆ ದಿ
ಕ್ಪಾಲಕರು ಕಿವಿಗಟ್ಟಿರಿದರ ವಿ
ಕಾಳತೆಯ ಕಂಡಾರು ಬದುಕುವರೆಂದು ಹರಿ ನುಡಿದ ॥ ೨೪

ದಾನಗುಣ ನೆಲಸಿದೊಡಂ ಖಳ
ನಾನೆಯಿದು ಕಡುಮೂರ್ಖನಿದರಭಿ
ಮಾನಿಯಧಟನಿಶಾಟನೆಂದೆನಿಸಿ [4] ಯು ಮಹೋ [4] ಮರ್ತ್ಯ ।

---

1 ದೆಳವಿಸಲು ಮಸುಳಿಸೆ, ಬ. ಕಾ. 2 ವೈದೆ, ಬ.
3 ಕೆರಳಿ ದೃಷ್ಟಿಸುವಕ್ಷಿಗಳ ಕೇಸುರಿಗೆ ಸಿಂದುದು ಗಗನ ವೀಸಿಂಧುರಕೆ, ಕಾ.
4 ಮಹಾ, ಬ. ಮಸಾ, ಕಾ.

ದಾನವರ ಲೆಕ್ಕಿಸದ ಕರಿ ಹುಲು
ಮಾನಿಸರ ಹೊಗಲೀಯದಿದಕಿ
ನ್ನೇನು ಹದನೆಂದಸುರರಿಪು ಹಲಧರನ ಬೆಸಗೊಂಡ ‖ ೧೦೫

ಅದಕೆ ಕಿಡಿಕಿಡಿಯಾಗಿ ಧರಣಿಯು
ನೊದೆದು ಬಾಹಪ್ಪಳಿಸಿ ಪುಟನೆಗೆ
ದೆದೆಗಿಡದಿರೆಂದಚ್ಯುತನ ಬೋಳೈಸಿ ಬೊಬ್ಬಿಡುತೆ ।
ಮದಗಜದ ಸಮ್ಮುಖಕೆ ನಡೆದುರೆ
ಕದುಬಿಸುತೆ ಕೈನೀಡಿ ಕರೆದ
ಗ್ಗದ ಹಲಾಯುಧ ನಿಂದನವುರಪ್ರತತಿ ತಲ್ಲಣಿಸೆ ‖ ೧೦೬

ಕಂಡು ಹರಿ ನಸುನಗುತೆ ಮುಸಲಿಯು
1 ದಂಡೆದರ [1] ಲೇಸೆನುತೆ [2] ಉಳಿಯಲಿ [2]
ಖಂಡಪರಶು ಗಜಾಸುರನ ಸಮ್ಮುಖಕೆ ನಡೆವಂತೆ ।
ದಂಡೆಗೊಂಡಬ್ಬರಿಸುತಳವಿಯು
ಕೊಂಡು ಲಂಘಿಸಿ ತಿವಿದೊಡಾಗಜ
ದಿಂಡುಗೆಡೆದಾಕ್ಷಣದೊಳದ್ವರೆಯುಟ್ಟಿತಚ್ಯುತನ ‖ ೧೦೭

ಅಟ್ಟಿ ಪಿಡಿದೊಡಗಲಿಸಿ ಪದದಲಿ
ಮೆಟ್ಟಿ ದಾಡೆಯೊಳಡಿಕಿರಿದ ಕರ
ಪಟ್ಟಸದೊಳಪ್ಪಳಿಸಿ ಕೊಡಹುತೆ ತೊಡೆಯೊಳಡೆಯಾಚಿ ।
ಕಟ್ಟಳಲು ಮಿಗೆ ಬೀಸಿ ಧರಣಿಯೊ
ಳಿಟ್ಟೊರಸಲನುಗೆಯ್ಯುತಿರೆ ಜಗ
ಜಟ್ಟಿ ಹಲಧರನಡ್ಡಹಾಯ್ದಪ್ಪಳಿಸಿದನು ಗಜವ ‖ ೧೦೮

ಬಲನ ಘಾತಕೆ ಸೈರಿಸದೆ ಕಳ
ವಳಿಸಿ ಗಿರ್ರನೆ ತಿರುಗಿ ಘೀಳಿಡು
ತಳಲು ಮಿಗೆ ಡೆಂಢಣಿಸಿ ಪೋಲ್ವಾಯ್ದೊದೆದು ಸೊಂಡಿಲಲಿ ।

ಧಂಡಿಕರ. ಕಾ,     2 ಇಳೆಯುದ, ಬ. ಕಾ,

ಸೆಳದು ನಭಕೀಡಾಡುತಿರೆ ಕಂ
ಡಳದನಗ್ರಜನೆಂದು ಹರಿ [1] ಕ
ಟ್ಟಳಲು ಮಿಗೆ [1] ಬೊಬ್ಬಿಡುತ್ತೆತ್ತಿವಿದನು ಗಜದ ಮಸ್ತಕವ ॥ ೨೯

ಹೆಕ್ಕಳಿಸಿ ಹರಿ ತಿವಿದ ಘಾತಕೆ
ಕುಕ್ಕುರಿಸಿ ಕೆಡೆದೆದ್ದು ಝಾಡಿಸಿ
ಹೊಕ್ಕು ಹೊಡಕರಿಸುತ್ತ ಮದದಿಭವಿದಿರಲಟ್ಟೆ ಬರೆ ।
ಸಿಕ್ಕಿದವರೆಡಬಲಕೆ ಸಿಡಿದೆವೆ
ಯಿಕ್ಕುವುದರಿಂ ಮುನ್ನ ಹೊಯ್ದಿಳೆ
ಗಿಕ್ಕಿ ಮೆಟ್ಟಿದೊಡೊರಲುತಿರ್ದುದು ಕುವಲಯಾಪೀಡ ॥ ೩೦

ಹರಿಬಲರ ಹೋರಟೆಗೆ ಸೈರಿಸ
ಲರಿಯದೊರಗಿತು ದಂತಿ ಬಳಿಕಿವ
ರಿರದೆ ದಾಡೆಯ ಕಿತ್ತು ಸದೆಬಡಿದುಳಿದುದಿಲ್ಲೆನಿಸಿ ॥
ಕೆರಳಿ ಹರಿತಹ ಮಾವುತರನಿ
ಟ್ಟೊರಸಿ ಗೋಪರು ಸಹಿತ ನೃಪಮಂ
ದಿರಕೆ ತೆರಳಿದರಗ್ರಜಾನುಜರಧಿಕಹರ್ಷದಲಿ ॥ ೩೧

ಏಸಿದದ್ಭುತವಮಮ ನಂದನ
ಸೂನುಗಳು ಬಲುಗಜವ ಕೆಡಹಿದ
ರೀನಿಶಾಚರನುಳಿವುದಿಲ್ಲವರಧಿಕಬಲರೆನುತೆ ।
ದಾನವನ ಭೀತಿಯಲಿ ಪೊಗಳದೆ
ಮೋನದಲಿ ಪುರಜನ ಮುಕುಂದ
ಧ್ಯಾನತತ್ಪರರಾಗಿ ತಲೆದೂಗಿದರು ತಮತಮಗೆ ॥ ೩೨

ಶೂಲಿ ವಿಷಕಳುಕುವನೆ ವಹ್ನಿ
ಜ್ವಾಲೆ [2] ಹಿಮ [2] ಕಂಜುವುದೆ ಕಶ್ಯಪ
ಬಾಲ ಸರ್ಪನ ಬಗೆವನೇ ದಿನಮಣಿ ತಮೋವ್ರಜವ ।

---

[1] ಕಟ್ಟೊಲುಮೆಯಲಿ, ಬ.    [2] ತೃಣ, ಕಾ.

ಲಾಲಿಸುವನೇ ಪುಲಿ ವೊಲದದಟ
ತಾಳಬಲ್ಲುದೆ ಕೃಷ್ಣನಾನೆಯು
ಸೀಳದಿಹನೇ ಜಯ ಜಯೆನುತಕ್ರೂರ [1] ಕೈಮುಗಿದ [1] ೩೩

ದೂರದಲಿ ಕೈಮುಗಿದು ನಿಂದ
ಕ್ರೂರಪುಳಕಿಸುತಿರಲು ಕಂಡಸು
ರಾರಿಯುಭಯವ ಕೊಡುತೆ ಬಂದು ನಿಶಾಚರನ ಮನೆಯ |
ಭೂರಿವಿಭವವ ನೋಡಿ [2] ಹರುಷಿಸಿ
ಯಾರುಭಟೆ [2] ಮಿಗೆ ನಡೆಯಲಿದಿರಲಿ
ವೀರದೈತ್ಯಪ್ರತತಿಯಿದ್ದುದು ಖಳನ ಕಾಹಿನಲಿ || ೩೪

ಹರಿದಲೆಯ ಕೆಮ್ಮೀಸೆಗಳ ನಿಡು
ಗೊರಲ ಕಿಡಿ ಸುರಿವಕ್ಷಿಗಳ ಕಾ
ರಿರುಳ ದೇಹಚ್ಛವಿಯ ವಿಕಳಿಸಿ ಹೊಳೆವ ದಾಡೆಗಳ |
ಕರದ ಕೂರಸಿಗಳ ಸಿಡಿಲ್ಗಳ
ಜರೆವ ಬೊಬ್ಬೆಯ ವಿಗಡದನುಜರ
ನೆರವಿಗಳ ಕಂಡಸುರರಿಪು ಗಹಗಹಿಸಿ ನಗುತಿರ್ದ || ೩೫

ಗಿರಿಯ ಕಿತ್ತೆತ್ತುವ ಸಮುದ್ರವ
ಸುರಿವ ಗಗನಕೆ ನೆಗೆದು ಸೂರ್ಯನ
ಕರವಿಡಿವ ಜವನೆದೆಯ ಮೆಟ್ಟುವ ನಿರ್ಜರೇಶ್ವರನ |
ಕರಿಯ ದಾಡೆಯ ಮುರಿವ ದಿವಿಜರ
ಶಿರವ ಚೆಂಡಾಡುವ ನಿಶಾಟರ
ನೆರವಿ [3] ಯನು ಕಂಡಸುರರಿಪು ಗಹಗಹಿಸಿ [3] ಬೆರಗಾದ || ೩೬

ಗುಳದ [4] ಲೊಲೆ [4] ವಾನೆಗಳ ನಭಕ
ನ್ವಳಿಪ ಕಡುಗುದುರೆಗಳ ನೆರೆದಿ
ಕ್ಕೆಲಕೆ ಚಲಿಸುವ ತೇರುಗಳ [5] ಝುಗಝುಗಿಪ ಕರವಾಳ [5] |

---

1 ನಗುತಿರ್ದ. ಓ. 2 ನಸುನಗುತಾರುಭಟೆ, ಓ. 3 ನೆರವಿಯ ಕಂಡು ಕಂಡಸುರಾರಿ, ಕ. 4 ಉರಿ, ಓ. 5 ನಿಟ್ಟಣಿಪ ಕೆದುಗಳ, ಕಾ.

ಝಳಪಿಸುವ ಬಿಲ್ದಿರುವೆ ನುಡಿಸುವ
ಕಳಕಳದ ಕಾಲಾಳ ಮೊತ್ತದ
ಚಲುವಿಕೆಯ ಕಂಡಸುರರಿಪು ನಸುನಗುತೆಯೊಳಪೊಕ್ಕ ॥ ೩೭

ಓರಣದೊಳಬ್ಬರಿಸಿ ಮೊಳಗುವ
ಭೇರಿಗಳ ತಂಬಟದ ಪಟಹದ
ಬೀರಡೌಡೆಯ ಗಿಡಿಬಿಡಿಯ ನಿಸ್ಸಾಳದಬ್ಬರದ ।
ಸಾರು ನಡೆಯೆಂದುಗ್ಗಡಿಪ ಪಡಿ
ಹಾರರಬ್ಬರಣೆಗಳ ಬಿರುದಿನ
ಭಾರಣೆಯ ಕಹಳೆಗಳ ರವಕಸುರಾರಿ ನಗುತಿರ್ದ ॥ ೩೮

ನೋಡಲಮ್ಮರು ಮರೆದರಿದು ಕೈ
ಮಾಡಲಮ್ಮರು ದಾನವನ ಭಯ
ಕೋಡಲಮ್ಮರು ನುಡಿಯಲಮ್ಮರು ಜಡಿವ ಬೆರಗಿನಲಿ ।
ಹೇಡಿಗೊಳುತೊಳಗೊಳಗೆ ಶಂಕಿಸಿ
ಕೂಡೆ ಕರಗುತೆ ನಿಂದು ಸುಭಟರು
ಬೇಡಿಕೊಳುತಿರ್ದರು ಮುರಾಂತಕ ಕೊರಳ ಸಲಹೆನುತೆ ॥ ೩೯

ಹರಿಬಲರು ಬಹ ಭರಕೆ ಸೈರಿಸ
ದುರವಣಿಸಿ ರಾಕ್ಷಸಮಹಾಭಟ
ರರರೆ ಗೋಪರ ಕೆಡಹು ತಿವಿ ನಿಟ್ಟೆಲುವ ಮುರಿಯೆನುತೆ ।
ಮೊರೆದು ತವಕಿಸಿ ಮುಕ್ಕುರಿಕಿ ಬಿಡ
ದೊರಸಲೆಂದಪ್ಪಳಿಸುತಿರೆ ಹಲ
ಧರನವರಿಗಿದಿರಾಗಿ ನಿಂದನು ಭುಜವ ಸೂಳೈಸಿ ॥ ೪೦

ಖಳರಳಲು ಮಿಗೆ ಹಲಧರನ ತಿವಿ
ಕೆಳಯ ಗೋವರನೊದೆದು ಕೆಡಹೆನು
ತುಲಿದಡಾಯುಧದಚ್ಯುತನ ಮೇಲ್ವಾಯ್ದು ಕದುಬುತಿರೆ ।

ಬಲನಧಿಕರೌದ್ರದಲಿ ದೈತ್ಯರ
ಬಲವ ಮುರಿದಪ್ಪಳಿಸಿ ತೊತ್ತಳ
ದುಳಿದು ನೆಲಕಿಟ್ಟೊರಸಿದನು ನಿಮಿಷಾರ್ಧಮಾತ್ರದಲಿ ॥ ೪೧

ಮತ್ತೆ ಮುಸುಕಿತು ಧೀರದೈತ್ಯರ
ಮೊತ್ತ ಬಲನಡಹಾಯ್ದು ಬೊಬ್ಬಿರಿ
ಯುತ್ತೆ ಮೇಲ್ವಾಯ್ದುಧಟಸುಭಟರನಿಳಯೊಳಪ್ಪಳಿಸೆ ।
ಕುತ್ತು ಪಿಡಿ ಕೊಯ್ ಕೊರಳನೆನುತತಿ
ಮತ್ತಖಳರಡ್ಡವಿಸಲುವೆದಿರ
ನೆತ್ತಿ ಗಿಜಿಗಿಜಿಯಾಗೆ ತಿವಿದನು ಕಾಮಪಾಲಕನು ॥ ೪೨

ಹಲಧರನ ರೋಷಾಗ್ನಿಗಿದಿರೇ
ಖಳರ ಸಾಹಸವಳಿದರಗಣಿತ
ಬಲುಗಡಿಯ ರಕ್ಕಸರು ಮತ್ತುಳಿದವರು [1] ಮೌನದಲಿ [1] ।
ಚಲಿಸದಿದ್ದರು ರಾಯದಳ ಕಳ
ವಳಿಸಿ ಕಂಪಿಸುತಿರ್ದುದಾಗೋ
ವಳರು ಬೊಬ್ಬಿಡುತಿರ್ದರಧಿಕಮನೋನುರಾಗದಲಿ ॥ ೪೩

ಕಂಡು ನಗುತೆ ಮುರಾರಿ ಸುಭಟರ
ತಂಡವನು ಕಡೆಗಣಿಸಿ ಮಾವನ
ಗಂಡುತನದ ಸಗಾಢಿಕೆಯನೀಕ್ಷಿಸುವ ತವಕದಲಿ ।
ದಂಡಧರನೊಳಪುಗುವವೊಲ್ಗವಿ
ಗೊಂಡ [2] ವರು ಸಹಿತಲ್ಲಿ [2] ಬಂದನು
ಚಂಡರುಚಿಯ ಮಯೂಖ ಹೊದ್ದದ ಮಲ್ಲಮಂಟಪಕೆ ॥ ೪೪

ಒಪ್ಪಿತಗ್ಗದ ಮಲ್ಲಗಳ ಮಣಿ
ದರ್ಪಣದ ತೋರಣದ ಗುಡಿಗಳ
ಚಪ್ಪರದ ಮೇಲ್ಕಟ್ಟುಗಳ ಪರಿಪರಿಯ [3] ಪೂವಲಿಯ [3] ।

---

[1] ಮೋದದಲಿ, ಓ. [2] ಗೋವರುಸಹಿತ, ಕಾ. [3] ಪುಷ್ಪಗಳ ಕಾ.

ಕಪ್ಪುರದ ಪರಿಮಳದ ನವಚಂ
ದ್ರಪ್ರಭಾಭಿತ್ತಿಗಳ ಕಳಸದ
ಚಪ್ಪರದ ವೀಧಿಯಲಿ ರಾಮಮುಕುಂದರಿದಿರಿನಲಿ ॥ ೪೫

ಆಮನೋಹರಮಲ್ಲರಂಗದ
ಸೀಮೆಯೆಣ್ದೆಸೆಗಳಲಿ ನೆರೆದಿಹ
ಭೂಮಿಪರ ಮಂತ್ರಿಗಳ ಸಚಿವಮಹಾನಿಯೋಗಿಗಳ ।
ಹೇಮಮಕುಟದ ಮನ್ನೆಯರ ಖಳ
ನೇಮಡಿಂಗರಿಗರ ಧನಾಢ್ಯರ
ಚಾಮರದ ಹಡಪದ ಸುತೇಜವ ಕಂಡನಸುರಾರಿ ॥ ೪೬

ಓರಣಿಸಿ ಭದ್ರದಲಿ ತೋರ್ಪ ಕು
ಮಾರಕರ ಪರಿಪರಿಯ ಮುಸುಕಿನ
ದೋರೆ[1] ವಲ್ಗಳ[1] ನಗೆಮೊಗದ ಚಲಿಸುವ ದೃಗುತ್ಪಲದ ।
ಕಾರಿರುಳ ಸೂಚಿಸುವ ಕಬರಿಯ
ಹೋರುತಿಹ ಕುಚಯುಗದ ಕಾಹಿನ
ನಾರಿಯರ ಮಂಗಡವ ಕಂಡಸುರಾರಿ ನಗುತಿರ್ದ ॥ ೪೭

ದೂರದಲಿ ದಿಟ್ಟಿಸುವ ಮಟ್ಟಿಯ
ಹಾರುವರ ಹರದರ ಸುವೈಶ್ಯರ
ಕಾರುಕರ ಚಿತ್ರಕರ ತಂಬುಲಿಗಳ ವಿನೋದಿಗಳ ।
[2] ಚಾರುಪದ[2] ಗಳ ಗಾಯಕರ ಕೈ
ವಾರಿಗಳ ಯಾಚಕರ ಕೃಪಣರ
ಸೇರುವೆಯ ಕಂಡಸುರರಿಪು ತಲೆದೂಗಿ ನಗುತಿರ್ದ ॥ ೪೮

ಫಲರಹಿತಕುಜದಂತೆ ಬತ್ತಿದ
ಕೊಳನ ತಾವರೆಯಂತೆ ಧರ್ಮವ
ನುಳಿದ ಭೂಸುರನಂತೆ ಸತಿಯರಿಗೊಲಿದ ಯತಿಯಂತೆ ।

---

1 ವೆಣ್ಗಳ, ಓ.    2 ವಾರುವದ, ಓ. ಕಾ.

ಕಳಯರೆತ ಸಸಿಯಂತೆ ಸಾಹಸ
ವಳಿದ ಪಟುಭಟನಂತೆ ಮಗ್ಗಿದ
ಕಳಕಳದ ವಸುದೇವನಿರೆ ಹರಿ ಕಂಡು ಬಿಸುಸುಯ್ದು || ೪೯

ಆತನೆಡದಲಿ ಮುತ್ತಿ ಮುಸುಕಿದ
ಭೀತಿಯಲಿ ಕೊರಗಿದ ಮುಖಾಬ್ಜದ
ಕಾತರಿಸುವಕ್ಷಿಗಳ ಸಡಲಿದ ಮುಡಿಯ ತೊದಲಿಸುವ |
ಮಾತುಗಳ ನಡುಗುವ ಲತಾಂಗದ
ಘಾತುಗುಂದಿದ ಮನದ ದೇವಕಿ
ಮಾತೆಯನು ಹರಿ ಕಂಡು ಮಮ್ಮಲಮರುಗಿ[1] ದನು ಬಳಿಕ[1] ||

ತಾಯಿತಂದೆಗಳಿಬ್ಬರೆನ್ನಿಂ
ದಾಯಸವನನುಭವಿಸುತಸು[2] ರನ[2]
ಬಾಯ ತುತ್ತಾಗಿರ್ದರಕಟಕಟೆನುತೆ ತಲೆದೂಗಿ |
ಈಯವಸ್ಥೆಯನೊಂದುನಿಮಿಷಕೆ
ಬೀಯಮಾಡುವೆನೆಂದು ಮಲ್ಲವಿ
ಡಾಯಗಳನೀಕ್ಷಿಸುತೆ ನಿಂದನು ಕಳನ ಮಧ್ಯದಲಿ || ೫೧

ಧರೆಗೆ ಮಲ್ಲವ್ರಜಕೆ ನೋಡುವ
ಪರಿಜನಕೆ ಸತಿಯರಿಗೆ ಸುರರಿಗೆ
ತರುಣಗೋವಳರಿಗೆ ಯದೂತ್ತಮರಿಗೆ ಯಥಾಕ್ರಮದೆ |
ಪರಮಗುರು ಲೀಲಾದ್ರಿ ಮನುಜ
ಸ್ಮರ ಜಗತ್ಪತಿ ಗೋಪ ನುರ್ವೀ
ಶ್ವರನೆನಿಪ ಮೂರ್ತಿಯಲಿ ನಿಂದನು ದಾನವಧ್ವಂಸಿ || ೫೨

[3] ಗಂಧಗಜವೀಡಿರಿದ ಗಾಯದ
ಗಂಡೆಗಳ ಸಿಂಧುರದ ರುಧಿರದ
ಬಿಂದುಗಳ ನೀಳ್ದ ಮದಗಜರದನದ ಗದಾಯುಧದ[3] |

1 ಮನದೊಳಗೆ. ಕಾ. 2 ರರ, ಓ. 3 ಗಂಡಗಜವೀಡಿರಿದಗಾಯದ ಗಂಡೆಗಳನಾಕರ್ಷಿಯ ರುಧಿರದಬಿಂದುಗಳನಾಸಮರದಜ ಕದನದ ಗದಾಯುಧದ. ||ಪಾ||.

ಕಂದದಾಸ್ಯದ ಬಿಗಿದ ಕಬರೀ
ಬಂಧದೊಱೆಯ ಸಡಿಲದುಡುಗೆಯ
ನಂದಸುತರಬ್ಬರಿಸಿ ನಿಂದರು ಮಲ್ಲರಂಗದಲಿ ॥ ೫೩

ಹರಿಬಲರು [1] ಬಂದಳವ [1] ನೀಕ್ಷಿಸಿ
ಕೆರಳಿ ಕಿಡಿಕಿಡಿಯಾಗಿ ನೆಗೆದು
ಪ್ಪರಿಸಿ ತಿರ್ರನೆ ತಿರುಗಿ ಮಂಡಿಸಿ ನೋಡಿ ದೆಸೆದೆಸೆಗೆ ।
ಹರಿಹರಿದು ಹಾರೈಸುತುಬ್ಬುತೆ
ಹಿರಿಯಜಗಜಟ್ಟಿಗಳ ಕೆಲದಲಿ
ನೆರೆದು ನಿಂದುದು ಮಲ್ಲವಡೆ ಮೇಳಯುವ [2] ನೀಕ್ಷಿಸುತೆ [2] ॥ ೫೪

ಬಿಟ್ಟ ಕೆಂಗಣ್ಣುಗಳ ನಭವನೆ
ಮುಟ್ಟುತಿಹ ಮೂರ್ತಿಗಳ ಕೈಗಳ
ವಟ್ಟ ಪಿಲ್ಲಣಿಗೆಗಳ ಲೌಡಿಯ ರಭಸದೊಱೆಗಳ ।
ಕಟ್ಟಳವಿಯಲಿ ನಿಂದರಾಜಗ
ಜಟ್ಟಿಗಳು ತರುವಾಯಲಂತರ
ಜಟ್ಟಿಗಳ ನಿಬ್ಬರದ ಬೊಬ್ಬೆಯಲವನಿ ತಲ್ಲಣಿಸೆ ॥ ೫೫

ಕಚ್ಚೆಗಳ ಚಲ್ಲಣದ ಕುಂಕುಮ
ದಚ್ಚೆಗಳ ವನಮಾಲೆಗಳ ಮೈ
ಮೆಚ್ಚೆ ಶೋಭಾವಹದ ಪೆಂಡೆಯದಡಿಯ ದಂಡೆಗಳ ।
ಹೊಚ್ಚ ಹೊಸಪಟ್ಟುಗಳ ನೀಲಿಯ
ಪಚ್ಚೆಗಳ ಕತ್ತುರಿಯ ತಿಲಕದ
ನಿಚ್ಚಟರು ವಂಗಡಿಸಿ ನಿಂದರು ಭುಜವನಪ್ಪಳಿಸಿ ॥ ೫೬

ಕಾರಿರುಳ ತಿರುಳಂತೆ ಚರಿಸುವ
ಮೇರುಪರ್ವತದಂತೆ ಪಿಲಯುದ
ವಾರಿಧಿಯ ತೆರೆಯಂತೆ ಗಗನದೊಳೊಗೆದ ಶಿಖಿಯಂತೆ ।

1 ಬಂದವರ, ಬಿ. 2 ದಿಕ್ಕರಿಸಿ, ಕಾ.

ಭಾರಣೆಯ ಬಿಂಕದಲಿ ಖಳಚಾ
ಣೂರಮುಷ್ಟಿಕರಿರೆ ಹಲಾಯುಧ
ಶೌರಿಗಳು ಸಮ್ಮುಖಕೆ ನಡೆದರು ಭುಜವನೊದರಿಸುತ ॥ ೫೭

ಹರಿಬಲರ ಭುಜವೊಯ್ಲ ರವಕಿಳ
ಬಿರಿದುದಹಿಪತಿ [1] ಸೆಡೆದನದ್ರಿಗ
ಳುರುಳಿದುವು [1] ರವಿಬಿಂಬ ತಿರುಗಿತು [2] ಚಕ್ರಕೆ [2] ಣೆಯೆನಿಸಿ ।
ಶರಧಿಯೊಡಗಲಸಿದುವು ಮತ್ತರ
ನೆರವಿ ಪಿಗೆ ಕಳವಳಿಸಿತಭ್ರದ
ಹೊರೆಯುವರು ಮರೆವೊಕ್ಕರಮೃತಮಯೂಖಶೇಖರನ ॥ ೫೮

ಕಂಡು ಖಳರಬ್ಬರಿಸಿ ನಿಜದೋ
ರ್ದಂಡಗಳ ಸೂಳೈಸಿ ಮುಪ್ಪುರಿ
ಗೊಂಡ ಕೋಪದೊಳ [3] ಟಮಟಿಸಿ [3] ನಿಂಬಿಕೆಗೆ ಕೈಮುಗಿದು ।
ದಂಡೆಗೊಂಡಾಕಳದ ಧೂಳಿಯ
ಮಂಡೆಯಲಿ ತಳಿದಿದಿರೊಳೊಪ್ಪುವ
ಗಂಡುಗಲಿಹರಿಬಲರ ಕೆಣಕಿದರಿದಿರ ಲೆಕ್ಕಿಸದೆ ॥ ೫೯

ಹರಿಯೊಡನೆ ಚಾಣೂರನಾಹಲ
ಧರನೊಡನೆ ಮುಷ್ಟಿಕನದಟಕೇ
ಸರಿಯೊಡನೆ ಕರಿ ಗರುಡನೊಡನಹಿಯೆಂಬ ಮಾಳ್ಕೆಯಲಿ ।
ಕೆರಳಿ ಮೇಲ್ವಾಯ್ದೊಬ್ಬರೊಬ್ಬರ
ಕರ [4] ತಳವ ಕರತಳಕಿಡುವ ಬಂ
ಧುರದ [4] ಹತ್ತಾಹತ್ತಿಯಲಿ ಕೆಣಕಿದರು ಕಾಳಗವ ॥ ೬೦

---

1 ಕೆಡೆದ ನದ್ರಿಗಳುದಿರಿದುವು, ಬ. ಸೆಡೆದ ನದಿ ತುಳುಕಾಡಿದುವು, ಕಾ.

2 ತಿಗುರಿಗೆ, ಕಾ. 3 ಳವಳಿಸಿ, ಬ. 4 ತಳಕೆ ಕೈಯಿಕ್ಕಿಗಳಬಂಧುರದ, ಬ.

ಹರಿ ತಿವಿದನಾಖಳನ ತಿವಿದನು
ಹರಿಯನವ ಪಡಿತಳಿಸಿ ಹರಿ ಖಳ
ನುರವ ತಿವಿದನು ಕನಲುತವನದ ಕಳಚುತಬ್ಬರಿಸಿ ।
ತೆರಳದೊಡತಿವಿದನು ಮುಕುಂದನ
ಶಿರವನದ ಲೆಕ್ಕಿಸದೆ ಮುರಹರ
ನೆರಗಿದನು ಸಿಡಿಲೆರಗುವಂತೆ ನಿಶಾಚರನ ಶಿರವ ॥ ೬೧

ಇತ್ತ ಹಲಧರ ತಿವಿದನಾಖಳ
ನುತ್ತಮಾಂಗವ [1] ನಳುಕದ [1] ವನಾ
ಡೊತ್ತಿ ತಿವಿದನು ಬಲನನದ [2] ಚಾಳೈಸಿ [2] ಬಲರಾಮ ।
ಮತ್ತೆ ತಿವಿದನು ಖಳನೆವೆಯನೊದ
ರುತ್ತೆ ಖಳ ಪಡಿತಳಿಸಿ ಮುಸಲಿಯ
ನೆತ್ತಿ ಬಿರಿವಂತೆರಗಿದನು ಗೋವಳರು ತಲ್ಲಣಿಸೆ ॥ ೬೨

[3] ತೆರಳದುಬ್ಬರದಬ್ಬರದೆ ಬಲ .
ನುರವಣೆಯ ವೆಗ್ಗಳಿಸಿ ಪಿಡಿದೊಡ
ವೆರಸದಂತಿರೆ ಖಳನ ತಿವಿದನು [3] ಸುರರು ಬೆರಗಾಗೆ ।
ಶರಧಿ ಶರಧಿಯ ಹಳಚಿದಂತಿರೆ
ಹರಿಬಲರು ಚಾಣೂರಮುಷ್ಟಿಕ
ರರರೆ ಸಮಜೋಳಿಯಲಿ ಕಾದಿದರವನಿ ತಲ್ಲಣಿಸೆ ॥ ೬೩

ಕರವಲಯ ಬೀಸಲೆವು ಡೊಕ್ಕರ
ವುರಗಬಂಧನ ಬಾಹುದಣೆ ಖೊ
ಪ್ಪರ ಚಡಿಕೆ ಮೋಹು ಪೆರತೊಲಗಡಿಮಂಡಿ ತಳಹತ್ತು ।

---

1 ತಳೆಯುತ, ಓ. 2 ಬೋಳೈಸಿ, ಓ.

3 ತೆರಳದವರವರೊಬ್ಬರೊಬ್ಬರಿ । ಗುರವಣಿಸಿಸಿಡಿಲೊಂದನೊಂದೆಡೆ। ವೆರಸಿದಂತಿರೆ ಖಳರ ತಿವಿದರು ; ಕಾ.

ಸಿರಲಗಡಿ ದಣುವಟ್ಟೆ ಚೊಕ್ಕೆಯು
ಕರತಳದ ಖಮ್ಮರಿ ಮೊಘಾಳಾಂ
ತರಲಗಡಿ ಮೊದಲಾದ ಬಿನ್ನಣಗಳಲಿ ಕಾದಿದರು ॥ ೬೪

ತಿವಿವ ತಿರುಗುವ ಲಾಗಿಸುವ ಚಿ
ಮ್ಮುವ ನಿಬಂಧದಲಡರಿ ಮಂಡಿಸಿ
ಲವುಡಿಸಾರದಲೌಕಿ ಗಳಹತ್ತದಲಿ ಮುಟ್ಟಿಸುವ ।
ಬವರಿವರಿದುಪ್ಪರಿಸಿ ಲಂಘಿಸಿ
ನಿವಡಿ ಸಾರದಲೆರಗಿ ಜಾರುವ
ಜವಳಿಬಿನ್ನಾಣದಲಿ ಕಾದಿದರೊಬ್ಬರೊಬ್ಬರಲಿ ॥ ೬೫

ಉರಗನಂತಿರೆ ಸುತ್ತಿ ಸಿಡಿಲಂ
ತೆರಗಿ ಸುಂಟರುಗಾಳಿಯಂತಿರೆ
ಮುರಿಮುರಿದು ಕಿತ್ತೊತ್ತಿ ವಿಷಮಗ್ರಹದವೋಲ್ಪಿಡಿದು ।
ಕರಿಗಳಂತಿರೆ ಹೋರಿ [1] ವಿರಹದ [1]
ಹರಿಣನಂತಿರೆ ನೆಗೆದು ಮೋಣದ
ಕರುವಿನಂತಿರೆ ಕಾದಿದರು ಕೌತುಕದ ಕಾಳಗವ ॥ ೬೬

ತೋರಹತ್ತರು ಹರಿಬಲರ ಜ
ಜಾಝರತೆಯು [2] ತಗುಳನ [2] ರವಕೆ ಮದ
ನಾರಿ ಕಿವಿಗಳ ಮುಚ್ಚಿದನು ಮೆಝು ಭಾಪು ಭಳರೆನುತೆ ।
ಓರಣಿಸಿ ಝಣ ಝಣ ಝಣೆಂಬ ಮ
ಹಾರಭಸವೆಳ್ಳಿರಿದು ಮುಸುಕಿತು
[3] ಭೂರಿಶಾರ್ತ್ಯರ [3] ಶಕ್ರಮುಖ್ಯರ ಕರ್ಣಕೋಟರವ ॥ ೬೭

ಬಳಿಕ ಹರಿ ಚಾಣೂರನೊಡನ
ಗ್ಗಳಿಸಿ ಕಾದುತೆ ಪಟ್ಟಿಸದ ಸಂ
ಚಳತೆಯುಲಿ ಕಾಲ್ವಿಡಿದು ಕೆಡಹಿದನಂತರಾಳದಲಿ ।

---

1 ವಿಹಗದ, ಕಾ. 2 ತಿಳಿಗುಳ, ಕಾ. 3 ಶಾರದಾದ್ಯರ, ಕಾ.

ಸೆಳೆದು ತಿರ್ರನೆ ತಿರುಗಿ ಲಗಡಿಯ
ಲುಳಿಯ ಪಯಪಾಡಿನಲಿ [1] ನೆಲಕ
ಪ್ಪಳಿಸಿದೊಡೆ [1] ಖಳನೊದರುತಿರ್ದನಜಾಂಡ ಘೀಳಿಡಲು ‖ ೬೮

ಆಸಮಯದಲಿ ಮುಷ್ಟಿಕನ ಬಲ
ವೀಸಲಳಿದುದನರಿದು ಹಲಧರ
ನೋಸರಿಸದೇಳಂಟ ತಿವಿ [2] ದೆಡೆಗೆಡಹಿ [2] ಬವರಿಯಲಿ |
ಬೀಸಿದೊಡೆ ಬಸವಳಿದನೂರ್ಧ್ವ
ಶ್ವಾಸದಲಿ ಮಿಕ್ಕವರು ಗೆಲುವಭಿ
ಲಾಷೆಯಲಿ ಹರಿಬಲರ ಮುತ್ತಿದರಳವ ಲೆಕ್ಕಿಸದೆ ‖ ೬೯

ಕಂಡು ಹರಿ ಕೋಪದಲಿ ಹುಲ್ಲೆಯ
ಹಿಂಡಿನೊಳು [3] ಹುಲಿ [3] ಹಾಯ್ದವೊಲು ಗವಿ
ಗೊಂಡ ತಿಮಿರವ್ರಜಕೆ ತರಣಿಯ ಕಿರಣ ಕವಿವಂತೆ |
ದಂಡೆಗೊಂಡಬ್ಬರಿಸಿ ತಿವಿದೊಡೆ
ದಿಂಡುಗೆಡೆದುದು ಮಲ್ಲವಡೆ ಖಳ
ಕಂಡು ಬೆರಗಾಗಿರ್ದಸಿವದಿರು ಮರ್ತ್ಯರಲ್ಲೆನುತೆ ‖ ೭೦

ಗಾಳಿಯಿದಿರಲಿ ನಿಲುವುದೇ ಘನ
ಜಾಲವಮರೇಶ್ವರನ ವಜ್ರದ
ಧಾಳಿಯೊಡನಿದಿರೆತ್ತುವುವೆ ಹುಲುವೊರಡಿಗಳು ಖಳನ |
ಹಾಳು [4] ಜಗ [4] ಜಟ್ಟಿಗಳು ಬಲವನ
ಮೂಲಿಗಳ ಮುಂದಿದಿರೆ ಎಂದು ವಿ
ಶಾಲಮತಿಯಕ್ರೂರ ನುಡಿದನು ಶಿರವನೊಲೆದೊಲೆದು ‖ ೭೧

1 ನೆಲಕುಪ್ಪರಿಸಿದರೆ, ಬ. ಕಾ. 2 ದಡಗೆಡಹಿ, ಕಾ.
3 ಹರಿ, ಬ. 4 ಹರ, ಕಾ.

[1] ಮುಂಗುದರಿವದಿರು [1] ವಿಗಡಜಗಜ
ಟ್ಟಿಗಳೊಡನೆ ಸರಿಹೊಕ್ಕು ದಣಿಯದೆ
ಚಿಗುಳಿದುಳಿದೆಳದಿಕ್ಕಿ ಕೊಂದರಿದಾವ ಸತ್ವದಲಿ ।
ಜಗವ ರಕ್ಷಿಸುವೀಮಹಾತ್ಮರು
ಬಗೆಯಲತಿಸಾಹಸಿಗಳೆನುತುವೆ
ಮಿಗೆ ನುತಿಸಿ ಕೊಂಡಾಡಿದರು ಹರಿಬಲರ ಪುರಜನರು ॥ ೩೨

ಸೊಕ್ಕಿದಿಭ ಸರಸಿರುಹವನ [2] ಗಳ
ನೊಕ್ಕಲಿಕ್ಕುವ ಮಾಳ್ಕೆಯಲಿ ಹರಿ
ಮಿಕ್ಕು ಮಲ್ಲರ [2] ಕೆಡಹಿ ಹಲಧರಸಹಿತ ವಹಿಲದಲಿ ।
ರಕ್ಕಸನ ಸಮ್ಮುಖಕೆ ನಡೆದವೆ
ಯಿಕ್ಕದೀಕ್ಷಿಸಿ ಗಗನಗಂಗೆಯ
ಜಕ್ಕಲಿಸುತಿಹ ತವೆಗದಗ್ರವ ಕಂಡು ಬೆರಗಾದ ॥ ೩೩

[3] ಆತವೆಗದಗ್ರದಲಿ [3] ಮುಸುಕಿದ
ಭೀತಿಯಲಿ ಸಿಗ್ಗಾಗಿ ಕಣ್ಗೆ
ಟ್ಟಾತುರಿಸಿ ಜವಗುಂದಿ ಕಳವಳಿಸುತೆ ವಿಕಾರದಲಿ ।
ಮಾತನಾಡುತೆ ಮರೆದು ನಿಮಿಷಕೆ
ಚೇತರಿಸಿ ಹಲುಮೊರೆದು ಮರುಗುವ
ಮಾತುಗಳ ದುಸ್ಸ್ಥಿತಿಯ ಕಂಸಸುರಾರಿಯಿಂತೆಂದ ॥ ೩೪

ಬಿದ್ದುದಗ್ಗದ ದಂತಿ ಮಲ್ಲರು
ಹದ್ದು ಕಾಗೆಗೆ ಬೋನವಾದರು
ಹೊದ್ದಲಮ್ಮದು ನಿನ್ನ ಕಾಹಿನ [4] ವೀರ [4] ಪರಿವಾರ ।
ಬಿದ್ದವರನುಪಚರಿಸು ಬಾ ಮೇ
ಲಿದ್ದು ನೋಡುವುದುಚಿತವಲ್ಲೆನೆ
ಗದ್ದುಗೆಯ ಹೊಯ್ದೆದ್ದು ಕಿಡಿಕಿಡಿಯಾದನಾಕಂಸ ॥ ೩೫

---

1 ಮಗುವುಗಳು ತಾಂ, ಬಿ. ಕಾ. 2 ದೊಳು ಪೊಕ್ಕು ಲೂಟಿಯ ಗೈವ ತೆರದಲಿ ಮಿಕ್ಕುವಾಲೆತರ. ಕಾ. 3 ಆತನಾಗ್ರಹದಲ್ಲಿ, ಕಾ. ವಿಗಡ. ಕಾ.

ಘುಡುಘುಡಿಸಿ ಘೂರ್ಮಿಸಿ ಯುಗಾಂತ್ಯದ
[1] ಸಿಡಿಲವೊಲ್ಲು ಗರ್ಜಿಸಿ [1] ಕಠಾರಿಯ
ಜಡಿದು ಕಡುಗಿ ಕುಠಾರದಾನವನಧಿಕರೋಷದಲಿ ।
ಮಿಡುಕಿ [2] ಪರಿವಾರಕ್ಕೆ [2] ನೇಮವ
[3] ಕುಡುತಹಮ್ಮಿಂದೊಗ್ಗಿ [3] ತನ್ನಯ
ಮಡದಿಯರ ನೆಮ್ಮಿರ್ದನಹಿತಧ್ವನಿಯನಾಲಿಸುತೆ ॥ ೩೬

ಪತಿಯ ನೇಮದಲಖಿಳದೈತ್ಯ
ಪ್ರತತಿ ಕವಿದಿಕ್ಕರಿಸಿ ಕಮಲಾ
ಪತಿಯ [4] ಮುತ್ತಿತು ರವಿಯ ಮುತ್ತುವ ತಮದ ದಂಡಂತೆ [4] ।
ಧೃತಿಗಿಡದೆ ನಸುನಗುತೆ ಗಂಗಾ
ಪಿತನದಕೆ ಕಡುಮೆಚ್ಚಿ ಕಂಸನ
ಕೃತಕ ಲೇಸಾಯ್ತೆಂದು ತನ್ನಯ ಸಿರವನೊಲೆದೊಲೆದು ॥ ೩೭

ಮಾವ ಕೇಳ್ ನಿನ್ನೊಡನೆ ಹುಟ್ಟಿದ
ದೇವಕಿಯ ಸುತರಾವು ಹಬ್ಬಕೆ
ನೀವು ಬರಹೇಳಿದೊಡೆ ಬಂದೆವು [5] ನಮ್ಮ ಕೊಬ್ಬಿನಲಿ [5] ।
ಲಾವುಕರ ನುಡಿಗೇಳಿ ಕೊಲಿಸದೆ
ಕಾವುದೊಳ್ಳಿತು ವನದೊಳಾಡುವ
ಗೋವರಲಿ ಗುಣದೋಷವರಸುವುದುಚಿತವಲ್ಲೆಂದ ॥ ೩೮

ನಾವು ಬಂದೆರಗುವೊಡೆ ನೀವಿಹ
ಠಾವೆಮಗೆ ವಶವಲ್ಲ ಸೋದರ
ಮಾವನಾಗಿಯು ನಮ್ಮ ಮೇಲಿನಿತಿಲ್ಲ ಕೃಪೆ ನಿನಗೆ ।
ಈವಿಗಡಪರಿವಾರದಿದಿರಲಿ
[6] ಜೀವಿಸುವರೇ ತರಳ [6] ರಕಟ ಕೃ
ಪಾವಲೋಕನದಿಂದೆ ಸಲಹುವುದೆಂದನಸುರಾರಿ ॥ ೩೯

---

1 ಕಡಲವೊಲ್ಲು ಗರ್ಜಿಸಿ, ಕಾ. 2 ನಿಜಪರಿಕರಕೆ. ಕಾ.
3 ಕುಡುತಹುಮ್ಮರಬಾಗಿ. ಕಾ. 4 ಮುತ್ತಿತ್ತರ್ಕನೊಡನೆ ತಮೋಂಧ ಕವಿವಂತೆ. ಬ. 5 ನಿಮ್ಮಮಾತಿನಲಿ: ಕಾ. 6 ಜೀವಿಸಿದರೇ ತರುಣರು. ಬ.

ಎಂದು ಹರಿ ಕಟಕಿಯುಲಿ ನಾನಾ
ಛಂದದಲಿ [1] ಮೂದಲಿಸಿ [1] ತ್ರಿಪುರವ
ನೊಂದುಸರಳಿಂದುರಿಪಿದುಗ್ರನ ರೂಪ ಕೈಕೊಂಡ ।
[2] ಹಿಂದ ನೆನೆದುರಿ [2] ದೆದ್ದು ಮನದಲಿ
[3] ನಿಂದೊಡರಿ [3] ಪ್ರಟನೆಗೆದು [4] ಪೌರಿದ
ನಿಂದು [4] ಬಿಂಬವ ರಾಹುವೊಗೆದರೆಯುಟ್ಟುವಂದದಲಿ ॥ ೮೦

ಹರಿಯು [5] ಸಮೆಂಚಾಳಿ [5] ಯುಲಿ ಬಲನ
ಬ್ಬರಿಸಿ [6] ತವಗಕೆ [6] ನೆಗೆಯುಲದ ಕಂ
ಡರರೆ ಹಲಧರ ಜಾಗುಜಾಗೆನುತಸುರರಿಪು ಖಳನ ।
ಸಿರವ [7] ಚಚ್ಬರದಲ್ಲಿ [7] ಮೇಲ್ವಾ
ಯೆದ್ದರಗಿ ಮುಂದಲೆವಿಡಿದು ತಿವಿದಿಳ್
ಗುರುಳಿಚಿದೊಡೆಡೆಗೆಡೆದವನೆರಗಿದ ಸಿಡಿಲ ರಭಸದಲಿ ॥ ೮೧

ಕೆಡೆದ ಕಂಸನ ಮೇಲೆ ಹರಿ ಬೊ
ಬ್ಬಿಡುತೆ ದುಮ್ಮಿಕ್ಕಿದೊಡವನ ಹೇ
ರೊಡಲೊಳದ್ದುವು ಚರಣವಾ [8] ದುರ್ಧರವ [8] ಲೆಕ್ಕಿಸದೆ ।
ಹೊಡಕರಿಸಿ ಕುಣಿದಾಡಿ ಹಿಗ್ಗುತೆ
ಸಡಗರಿಸಿ ನೆರೆದಿರ್ದ ದೈತ್ಯರ
ಕೆಡಹಿ ತೊತ್ತಳದುಳಿದನೊಂದೇ ನಿಮಿಷಮಾತ್ರದಲಿ ॥ ೮೨

ಅರೆಮುರಳುವಕ್ಷಿಗಳ ಕೆದರಿದ
ಕುರುಳ ಹೊಯ್ವಳ್ಳಗಳ ಮೇಲುಸು
ರುರವಣೆಯು ನಾಸಿಕದ ಹಾಯ್ದುಕ್ಕುವ ಕೊರಳ ನೀರ್ದೆಗೆದು ।

---

1 ಮೂದಲಿಸೆ, ಕಾ. 2 ಹಂದೆಯೆನುತ್ತುರಿ, ಕಾ. 3 ನೊಂದೊದರಿ, ಕಾ.
4 ಪೌರುಷದಿಂದ, ಕಾ.
5 ಸುಂಜಾಳಿ, ಕಾ. 6 ಗಗನಕೆ, ಕಾ. 7 ಕೈಚಳಕದಲಿ, ಕಾ.
8 ದುರ್ಧರರು, ಕಾ.

ಹೊರಳಿದಿಹ ನಾಲಗೆಯ ನೇತ್ರರು
ಸುರಿವ ರಾಯುದ ಕಂಸ ಕೃಷ್ಣನ
ಚರಣದಂದುಗೆಯಂತೆ ಮೆರೆದನು ಕಳನ ಚೌಕದಲಿ ॥ ೮೩

ಬೊಬ್ಬಿರಿದುದಮರೌಘವಸುರನ
ಗಬ್ಬ ಮಗ್ಗಿತು ನೆರೆದ ನೋಟಕ
ರೊಬ್ಬರುಳಿಯದೆ ಸರಿದ [1] ರಡಗಿದರಸುರ [1] ಮಂತ್ರಿಗಳು ।
ಹಬ್ಬ ಹಸನಾಯ್ತೆನುತೆ ಗೋವಳ
ರುಬ್ಬಿದರು ಹರುಷದಲಿ ಯಾದವ
ರಬ್ಬರಣೆ ಹಿರಿದಾಯ್ತು ಖಳಕಂಸಾವಸಾನದಲಿ ॥ ೮೪

ಬಳಿಕ ಖಳನಳವಳಿದು ವಿಷಮ
ಸ್ಥಳಕೆ ತೆರಳಿದನಿತ್ತ ಹೂವಿನ
ಮಳೆಯ ಕರೆದನು ಶಕ್ರನಸುರಾಂತಕನ ಮಕುಟದಲಿ ।
ಜಲಜಭವಭವರಚ್ಯುತನ ಭುಜ
ಬಲಕೆ ಮನದೊಳು ಮೆಚ್ಚಿ ಮಕುಟವ
ನೊಲೆದು ಕೊಂಡಾಡಿದರು ಹರಿಯನು ಜಯತು ಜಯತೆನುತೆ ॥

ಎವೆ ಹಳಚುವನಿತರಲಿ ವಿಶ್ವ
ಭ್ರಮೆಯ ಹುಟ್ಟಿಸಿ ಸಲಹಿ ಕಾಲ
ಕ್ರಮದಲದ ಸಂಹರಿಸಿ ಮರಳಿ ನಿಜಸ್ವರೂಪದಲಿ ।
ಮಮತೆಯಳಿದು ಸಮಸ್ತದೇವೋ
ತ್ತಮನೆನಿಸಿ ರಾಜಿಸುವ ಹರಿಯಾ
ಕ್ರಮಿಸಿದನು ಗಡ ಖಳನನೆಂದಕ್ರೂರ ನಗುತಿರ್ದ ॥ ೮೬

ಇಂದು ಕಡೆಯಾಯ್ತುಗ್ರಸೇನನ
ಬಂಧನಕೆ ದೇವಕಿಯ ಚಿತ್ತದ
ಕಂದು ಕೈಸೆರೆವೋಯ್ತು ಕಂಸಾಸುರನ ಸತಿಯರಿಗೆ ।

1 ರಕ್ಷಣವಸುರ, ಬ.

[1] ನಂದನಂಜಿಕೆ ಹರಿದುದಾನಕ
ದುಂದುಭಿಯು ಮನದಾಸರಡಗಿದು
ದೆಂದು [1] ನಾರದ ನಲಿದು ನರ್ತಿಸುತಿರ್ದನಭ್ರದಲಿ ॥ ೮೭

ಚರಣದಲಿ ಸಿಲುಕಿರ್ದ ಕಂಸಾ
ಸುರನನೊದೆದೀಡಾಡಿ ನಿಜಪರಿ
ಕರಸಹಿತ ಮುರಮಥನನೋಲಗಶಾಲೆಗೈತಂದು ।
ಹಿರಿದು ಬಳಲಿದಿರೆಂದೆನುತೆ ಯುಪ
ಚರಿಸುತಿರ್ದನು ಹಲಧರನ ಬಳಿ
ನರಸಿಯರು ಗೋಳಿಡುತೆ ನಡೆದರು ರಮಣನಿದ್ದೆಡೆಗೆ ॥ ೮೮

ಹಾ ರಮಣ ಹಾ ರಮಣ ಎಂದವು
ರಾರಿಯನು ತಕ್ಕೈಸಿ ಲೋಚನ
ವಾರಿಯಲಿ ಪುಳಕಿಸುತವನ ಸದ್ಗುಣವ ಹಂಬಲಿಸಿ ।
ವೈರಿಗಳ ಮಗ್ನಿಸುವುಪಾಯದ
ವಾರಿಧಿಯ ಕಡೆಗಾಣದಳದೈ
ವೀರ ಎನುತೆ ಬಹುಪ್ರಕಾರದಲವರು ಮರುಗಿದರು ॥ ೮೯

ಮಡಿದ ಕಂಸನ ಕಂಡು ಮರುಗುವ
ಮಡದಿಯರ ಶೋಕಾಗ್ನಿ ವರ್ಧಿಸಿ
ಸುಡದೆ ಮಾಣದೆನುತ್ತೆ ತನ್ನಯ ಬರವ ಬೀಳ್ಕೊಟ್ಟು ।
ಪಡುವಣದ್ರಿಗೆ ನಡೆದನಿನನೊ
ಗ್ಗೊಡೆದು ಚಲ್ಲಿತು ಸೇನೆ ಮನೆಯಲಿ
ಗುಡಿಯ ಕಟ್ಟಿಸಿ ಬಹುಳಹರ್ಷದೊಳಿರ್ದನಕ್ರೂರ ॥ ೯೦

ಏಳನೆಯ ಸಂಧಿ ಮುಗಿದುದು.

---

1 ಇಂದು ಶೋಕದ ಕಡಲೊಳದ್ದ ಮುಕುಂದ ನಂದನನಂಜಿಕೆಯ ಪರಿಹರಿಸಿ ಸಲಹಿದನೆಂದು, ಕಾ.

# ಎಂಟನೆಯ ಸಂಧಿ

### ಸೂಚನೆ

ಮಾವನವಸಾನದಲಿ ದೇವಕಿ
ದೇವಿಯನು ಸಂತೈಸಿ ದೇವರ
ದೇವನಕ್ರೂರನ ಮನೋರಥವಿತ್ತು ಮನ್ನಿಸಿದ ||

ಖಳಶಿರೋಮಣಿ ಕಂಸನಳಿವಿಂ
ಗಳಲಿ ರವಿಯೊಡ [1] ನಳಿದ [1] ನಸುರನ
ಲಲನೆಯುರವ್ರೊಲ್ ಮರುಗಿದುವು ಪಂಕಜರಥಾಂಗಚಯ |
ಬಳಿಕ ಯದುಕುಲ [2] ಸಹಿತಕೃಷ್ಣನ [2]
ಬಳಿಗೆ ಬಂದಕ್ರೂರನಕ್ಷಿಯು
ಜಲವ ಮಿಡಿಯುತೆ ಕಾಣಿಕೆಯನಿತ್ತೆರಗಿ ನಿಂದಿರ್ದ || ೧

ಮುಗಿದ ಕೈ ದಿಟ್ಟಿಸುವ ಲೋಚನ
ಮಗುಳದಂಘ್ರಿಗಳಂತರಂಗದ
ಬಗೆಯನರಿಪುವ ರೋಮಪುಳಕ ಮೃದೂಕ್ತಿರಚನೆಯುಲಿ |
ಸೊಗಸ ಸೂಸುವ ಮಾತು ಚಿತ್ತದ
ತಗೆವ ದೈನ್ಯ ಮನೋತ್ಸವದ ನಂ
ಬುಗೆಯ ಬಿಂಕದಲಚ್ಯುತನ ಮುಂದಿರ್ದನಕ್ರೂರ || ೨

ದೇವ ನಗುತಕ್ರೂರದೇವನ
ಭಾವಶುದ್ಧಿಯನರಿದು ನಸುನಗು
ತೋವಿ ಕೈವಿಡಿದಿತ್ತ ಬಾಯೆಂದಾದರಿಸಿ ಕರೆದು |
ಮಾವನಿರವೆಂತೆನಲು ಜೀಯೆನು
ತಾವಿಗಡ ಯದುಮಂತ್ರಿ ಕಂಸನ
ಸಾವು ಹೊಸಪರಿಯೆನುತೆ ಕೊಂಡಾಡಿದನು ಮುರಹರನ || ೩

---

[1] ನಿಳಿದ, ಬ. [2] ರಾಮಕೃಷ್ಣರ, ಕಾ.

ಇಳೆಯ [1] ನೋರಡಿಮಾಡಿ ಗಗನಕೆ [1]
ಬಳೆದ ಮಹಿಮನ ಮುಂದೆ ಕೊಳ್ವದೆ
ಖಳನ ಗರ್ವವಿಕಾರವೆಲೆ ಮುರಮಥನ ಚಿತ್ತೈಸು ।
ಹುಲುಮನುಜರ್ಗಾಂ ನಮ್ಮ ಮನದು
ಮ್ಮಳಿಕೆಗಾರದೆ ಮುನ್ನ ನಿಮ್ಮಡಿ
ಗಳಿಗೆ ಪೇಳ್ದಪರಾಧವನು ನೀಂ ಮರೆಯಬೇಕೆಂದ ॥ ೪

ಸಾಕು ಸಾಕುಪಚರಿಸಬೇಡಿ
ನ್ನೇಕೆ ಬಿಡು ಕರಿಸುಗ್ರಸೇನನ
ಜೋಕೆ ತಪ್ಪದೆ ನಡಿಸುಪ್ಪಾಲಿಸು ನಾಡುಬೀಡುಗಳ ।
ಆಕೆವಾಳ ಚಮೂಪ ನಿನಗೀ
ಗೇಕೆ ಚಿಂತೆ ಮದೀಯ ಕರುಣಾ
ಲೋಕನದ ನೆಮ್ಮುಗೆಯಲಿಪುದೆಂದಸುರರಿಪು ನುಡಿದ ॥ ೫

ಹರಿ ನಿರೂಪಿಸಿದಂತೆ ಬಂಧನ
ದರಸುಗಳ ಸೆರೆ [2] ವಿಟ್ಟು [2] ಪುರಜನ
ಪರಿಜನವ ಸಂತೈಸಿ ಕಂಸಾಸುರನ ಸಂಸ್ಕರಿಸಿ ।
ಹಿರಿಯಮಗನ ವಿಯೋಗದುಃಖದ
ಶರನಿಧಿಯೊಳದ್ದುಗ್ರಸೇನನ
ಕರಿಸಿ ಕೃಷ್ಣನ ಕಾಣಿಸಿದನಕ್ರೂರನುಚಿತದಲಿ ॥ ೬

ಮುರಮಥನನಾಖಳನ ರಾಜ್ಯದ
ಸಿರಿಯನಾತಂಗಿತ್ತು ಕಂಸನ
ತರುಣಿಯರ ಸಂತೈಸಿ ವಿನಿಯೋಗಿಗಳನುಚಿತದಲಿ ।
ಕರೆಕರೆದು ಬೀಳ್ಕೊಟ್ಟು ಕರುಣಾ
ಭರಣನಾಯದುಮಂತ್ರಿ ನೀಲಾಂ
ಬರಸಹಿತ ವಸುದೇವನಿಹ ಮಂದಿರಕೆ ನಡೆತಂದ ॥ ೭

---

1 ನೀರಡಿಪಾಡಿಗಗನವ, ಓ. ನೀರಡಿಮಾಡಿಗಗನಕೆ, ಕಾ. 2 ವಿಡಿಸಿ, ಕಾ.

ಕರಿಘಟೆಯ ವಿಕಲಿಸಿದ ಸಿಂಹದ
ಮರಿ ಗುಹೆಗೆ ನಡೆವಂತೆ ಗುಣ್ಪಿನ
ಶರಧಿಯಿಂದುದ್ಗಮಿಸಿಯುಡರುವ [1] ತರಣಿಯಂದದಲಿ ।
ಪರಿಮಳಿತಪವಮಾನನಬ್ಜಾ
ಕರಕೆ [2] ನಡೆವಂದದಲಿ ದೇವಕಿ
ಯರಸನಿಹ ಮಂದಿರಕೆ ಹರಿ ನಡೆತಂದನೊಲವಿನಲಿ ॥ ೮

ಬಂದನೀಪರಿ ಜಗದ ತಂದೆಯು
ತಂದೆ ಪಿತನಿಹ ಮನೆಗೆ ಬಲಸಹಿ
ತಂದು ಕೈಮುಗಿದೆರಗಿದರು ವಸುದೇವನಂಘ್ರಿಯಲಿ ।
ಮುಂದುಗಾ [3] ಣುತೆ ಹರುಷದವ ಮನ
ದಂದು ಪದಗಳಿಗೆರಗೆ ಬಳಿಕಬ
ಲೇಂದಿರಾವರರೆರಗಿ ಮುಂಡಾಡಿದರು [3] ದೇವಕಿಯು ॥ ೯

ತಾಯೆ ನೀಂ ನಮ್ಮಿಂದೆ ಬಂಧನ
ದಾಯಸವನನುಭವಿಸಿ ಕಂಸನು
ಪಾಯದಲಿ ನಾವಳಿವರೆಂದುಮ್ಮಳಿಸಿ ಚಿಂತಿಸುತೆ ।
ಗಾಯವಡೆದ ಕುರಂಗಿಯಂತೆ ನ
ವಾಯಿಗೆಡೆದುಳಿದಿರ್ದ ನಮ್ಮನು
ಕಾಯಿದಿರಿಯೆಂದಸುರರಿಪು ದೇವಕಿಯೊಡನೆ ನುಡಿದ ॥ ೧೦

ಮಗನ ಮಾತಿಗೆ ಮೆಚ್ಚಿ ಹಿಗ್ಗುತೆ
ದೃಗುಜಲವ ಮಿಡಿದೆತ್ತಿಕೊಂಡೆಲೆ
ಮಗನೆ ಬದುಕಿದಿರೆನುತೆ ತೂಪಿರಿದೋವಿ ಮೊಲೆಯೂಡಿ ।

---

1 ಶರನಿಧಿಯೊಳುದಯಿಸಿಯುಡವರ್ಗ, ಕಾ.

2 ಪರಿಮಳಕೆ ಪವಮಾನ ನಂದನಬನಕೆ, ಬ. ಪರಿಮಳಕೆ ಪವಮಾನ ನಬ್ಜಾಕರಕೆ, ಕಾ.

3 ಣದೆ ಹರುಷದಲಿ ಮನಗುಂದಿ ಪದಯುಗಕೆರಗಿ ಬಳಿಕ ಜಯೇಂದಿರಾ ವರನಪ್ಪಿ ಮುಂಡಾಡಿದನು, ಬ. *

ಹಗೆಗಳಟ್ಟುಳಿಗಂಜದುಳಿದ್ದೈ
ಮಗುವೆಯೆಂದಾಲಿಂಗಿಸುತೆ ನಗೆ
ಮೊಗವನೀಕ್ಷಿಸುತಿರ್ದಳಾದೇವಕಿ ಜಗತ್ಪತಿಯ ॥ ೧೧

ಹಲಧರನ ಬಿಗಿಯಪ್ಪಿ ಕಂಸನ
ಮುಳಿಸ ಕಡ್ಡಿಗೆ ಬಗೆಯದನುಜನ
ನುಳುಹಿಕೊಂಡ್ಯೆ ಮಗನೆ ಎಂದಾದರಿಸಿ ಹರುಷದಲಿ ।
ಬಳಿಕ ನಿಜನಂದನರ ಮೂರ್ತಿಯ
ಚೆಲುವಿಕೆಯನೀಕ್ಷಿಸುತೆ ದೇವಕಿ
ಮುಳುಗಿದಳು ನೆಲೆಗಳದ ಹರ್ಷಾರ್ಣವದ ಮಧ್ಯದಲಿ ॥ ೧೨

ತನಯರಿಬ್ಬರನೆತ್ತಿ ಹೊಗಳುವ
ವನಿತೆಯೊಸಗೆಯ ಕಂಡಖಂಡಿತ
ಧನ ತನಗೆ ವಶವರ್ತಿಯಾದವೊಲುಬ್ಬಿ ಪುಳಕಿಸುತೆ ।
ವನಧಿ ಚಂದ್ರೋದಯದಲೊಪ್ಪಿಹ
ಮನದ ಸುಮ್ಮಾನದಲಿ ಮಧುಸೂ
ದನನ ಮಹಿಮೆಗೆ ನಮಎನುತೆ ವಸುದೇವನಿಂತೆಂದ ॥ ೧೩

ಆದಿಪುರುಷನಜೇಂದ್ರವಂದಿತ
ಪಾದನಮೃತಾರ್ಣವಸುಚೇತ ನ
ಭೇದನಗಣಿತಮಹಿಮನೇಕನನೇಕನಪ್ರತಿಮ ।
ವೇದನಿಕರಾತೀತಶಾಶ್ವತ
ನೀಧರೆಯ ಹೊರೆಗಳೆಯಲಾತ್ಮಜ
ನಾದೆ ನಮಗಿನ್ನಾವುದಘಟಿತ [1] ಮಾಡ [1] ವಸು ದೇವ ॥ ೧೪

---

1 ಮೆಂದ ಒ, ಕಾ,

ಭೀತಿ ಹರಿದುದು ಮನದ [1]ದುಗುಡವು[1]
ಬೀತುದಪದೆಸೆ ಹಿಂಗಿ [2]ತಳವಿನ [2]
ಕಾತರಕೆ ಕಡೆಯಾಯ್ತು ಬಹುಳಾಯಾಸ ಬಯಲಾಯ್ತು ।
ಸೋತುದಧಿಕದರಿದ್ರವೆಲಸಿಕೆ
ಧಾತುಗುಂದಿತು ನಿನ್ನ [3] ನೇಹದ [3]
ಮಾತ ಕೇಳ್ದ್ಕ್ಷಣದೊ [4] ಳಾದೆನು ಸುತನೆ [4] ವಸುದೇವ ॥ ೧೫

ಎಂದು ಮಧುರೋಕ್ತಿಯಲಿ ತನ್ನಯ
ನಂದನನ ಬೋಳೈಸಿ ಗೋವಳ
ಬೃಂದವನು ಸತ್ಕರಿಸಿದನು ಕೃಷ್ಣಂಗೆ ಕೈಮುಗಿದು ।
ನಿಂದ ನಂದನ ಸುತನ ಮನ್ನಿಸಿ
ನಂದಗೋಪನನಪ್ಪಿ ಹರುಷದ
ಸಂದಣಿಯೊಳೆಸೆದಿರ್ದನಿತ್ತಲು ಚಂದ್ರನುದಯಿಸಿದ ॥ ೧೬

ಇಳೆಯ ಭಾರವನಿಳುಹಿ ಸುರರನು
ಸಲಹಿ ಕಂಸಾಸುರನ ಮಡುಹಿದ
ಬಲಮುರಾಂತಕರಂಘ್ರಿದರ್ಶನ ಘಟಿಸಿತೆನಗೆಂದು ।
ಖಳನ ಕಾಂತಾಜನದ ನೇತ್ರೋ
ತ್ಪಲವ ಮುಗಿಸುತೆ ದೇವಕಿಯ ಮುಖ
ನಳಿನವನು ವಿಕಸಿಸುತೆ ಚಿತ್ರಶಶಾಂಕನೆಸೆದಿರ್ದ ॥ ೧೭

ಆನಿಶಾಧಿಪನುದಯಸಮಯದೆ
ದಾನವೆಲ್ಲಭನಮಿತಜನಸುರ
ಧೇನು ಕೃಷ್ಣನ ಮುಂದೆ ಕೈಮುಗಿದಂಜಿ ತವಕಿಸುತೆ ।

---

1 ಸಂಕಟ, ಕಾ. 2 ಕಳವಿನ, ಓ. ಕಾ.

3 ದೇಹದ, ಕಾ. ಓ. ಪುಸ್ತಕದಲ್ಲಿ ಈ ಭಾಗವು ಲುಪ್ತವಾಗಿದೆ,

ಳೆಂದನು ಸುತಗೆ, ಓ. ಕಾ,

ದೀನಭಾವದಲಚ್ಯುತ ನ[1] ಕರು
ಣಾನುಗತವ [1] ನಿರೀಕ್ಷಿಸುತೆ ಹೃದ
ಯಾನುಕಂಪನದಿಂದೆ ಬಿನ್ನಹವಮಾಡಲನುವಾದ || ೧೮

ದೇವ ಬಿನ್ನಹ ನಿಶೆಗೆ [2] ಸಂದುದು
ಜಾವವುರೆ ಬಳಲಿದರು ಘೋಷದ
ಗೋವಳರು ನೀಂ ನಿತ್ಯತೃಪ್ತರು ನಿಮಗೆ ತೊಡಕಿಲ್ಲ |
ಮಾವಕಂಸನ [3] ಕಡೆಯು ದೇವಕಿ
ದೇವಿ ಕಡೆಗೊಡಳಕಟ [3] ಹಸಿದೆವು
ನಾವು ಸೈರಿಸಲರಿಯೆವೆಂದನು ಚಕ್ರಿಗಕ್ರೂರ || ೧೯

ಹರಿಯುದಕೆ ನಸುನಗುತೆ ಸಲುಗೆಯು
ಶರಣನಿಚ್ಛೆಯು ಸಲಿಸಬೇಕೆಂ
ದುರುತರಪ್ರೇಮದಲಿ ತಾಯ್ತಂದೆಗಳನೊಡಗೊಂಡು |
ಗರುವಿಕೆಯು ಗಾಢದಲಿ ನೀಲಾಂ
ಬರಸಹಿತ ಗೋವಳರ ಮೇಳದ
ಸಿರಿಯು ಸುಮ್ಮಾನದಲಿ ಬಿಜಯಂಗೈದನವನೊಡನೆ || ೨೦

ಹರಿಯೆ ಜಯ ಜಯ ಭಕ್ತಬೃಂದದ
ಸಿರಿಯೆ ಜಯ ಜಯ ದುರಿತಗಜಕೇ
ಸರಿಯೆ ಜಯ ಜಯ ದಿತಿಜನಿಕರದ ತಿಮಿರಕಾನನದ |
ತರಣಿ ಜಯ ಜಯ ಜೀಯ ಎಂದ
ಬ್ಬರಿಸಿ ಹೊಗಳುತೆ ತನ್ನ ನಿಳಯದ
ಸರಿಸವಿಡಿದಚ್ಯುತನನೊಡಗೊಂಡುಯ್ದನಕ್ರೂರ || ೨೧

---

1 ಕರುಣಾಳುತನವ, ಓ. ಕಾ. 2 ನಿಶೆಯು, ಕಾ. 3 ವಧೆಯು ದೇವಕಿದೇವಿ ಹರುಗೊಡಳಕಟ, ಕಾ.

ಮುರಮಥನನಿಕ್ಕಲಿಸಿ ನಮಿಸುವ
ಪುರಜನವನೀಕ್ಷಿಸುತೆ ಭೂಸುರ
ರರಸಿಯರ ರತುನಾರತಿಯ ಕೈಗೊಳುತೆ ಯಾದವರ ।
ಪರಿಕರವನುಚಿತೋಕ್ತಿಯಲ್ಲಾ
ದರಿಸಿ ನಿಲಿಸುತೆ ತನ್ನ ನೇಹದ
ಶರಣನರಮನೆಗೈದಿದನು ಬಹುವಾದ್ಯರಭಸದಲಿ ॥ ೨೨

ಸರಸಿಜದ ಸಿರಿ ಯುರಸಿ ಯಾತ್ಮಜ
ಸರಸಿರುಹಭವ ನಾತ್ಮನುರಗಾ
ಭರಣ ನಾಶ್ರಿತನಮರಪತಿ ಯಾಗರವಮೆಂದಜಲ ।
ಪರಮಋಷಿಗಳು ತನ್ನ ಚರಣಾಂ
ಬುರುಹಸೇವಕರೆಂಬ ಪೆರ್ಮೆಯ
ಹಿರಿಯ ಮುರಹರ ಬಂದನಾಯದುಮಂತ್ರಿಯರಮನೆಗೆ ॥ ೨೩

ಬಂದು ಹರಿ ಬಾಗಿಲಲಿ ನಿಲೆ ನಲ
ವಿಂದೆ ಬಳಿಕಕ್ರೂರ ತನ್ನಯ
ಮಂದಿರದಿನಿದಿರ್ವಂದು ಕುಂಕುಮಪಂಕದಾರತಿಯ ।
ತಂದು ಪರಸಿ ನಿವಾಳಿಸುತೆ ಸಾ
ನಂದದಲಿ ಕೀರ್ತಿಸುವ ಯೋಷಾ
ಬೃಂದದೊಸಗೆಯ ಮೇಳದಲಿ ಬಿನ್ನೈಸಲನುವಾದ ॥ ೨೪

ಕೋಟಲೆಗೆ ಕಡೆಯಾಯ್ತು ಮಾಯೆಯ
ಕಾಟ ಹಿಂಗಿತು ವೈರಿವರ್ಗದ
ತೋಟ ಹರಿದುದು ನೀತಿಹೊಗೆ ದೆಸೆಗೆಟ್ಟುದಿಂದಿನಲಿ ।
ಮಾಟ [1] ಕರ ಕಾಣ್ಬ ಕಣಿ [1] ಮುಕ್ತಿಯ
ಕೂಟ ಕೈವಶವಾಯ್ತು ನಿನ್ನಯ
ನೋಟ ಮಾತ್ರದಲೆಂದು ಕೊಂಡಾಡಿದನು ಮುರಹರನ ॥ ೨೫

---

[1] ಕರಕಂಬಕನಿ, ಬ.

ಹರಿಯುದಕೆ ಹಾರೈಸಿ ಸಾಕುಪ
ಚರಿಸಬೇಡುರೆ ಹಸಿದೆವೆನುತಾ
ಪರಮವೈಷ್ಣವಚಕ್ರವರ್ತಿಯು ಶಿರವ ತಕ್ಕೈಸಿ ।
ಹಿರಿಯರಿದಿರಲಿ ನಮ್ಮ ನಿನ್ನಾ
ದರಿಸಬೇಡೆನೆ ಕಂಸಮಥನನ
ಚರಣದಲಿ ಮೆಯ್ಯಿಕ್ಕಿ ಬಳಿಕಿಂತೆಂದನಕ್ರೂರ ॥ ೨೬

ಹಿರಿಯರಿಗೆ ನೀಂ ಹಿರಿಯ ನಿನ್ನಿಂ
[1] ಹಿರಿಯರುಂ ಬೇರೊಳರೆ ವಿಶ್ವಂ
ಭರೆಯ ಭಾರವ ಬಿಡಿಸಲೋಸುಗ ಮನುಜವೇಷವನು ।
ಧರಿಸಿ ಬಿಜಯಂಗೈದಿದಾಗಲೆ
ಹಿರಿಯತನ ಬಯಲಾಯ್ತು ನಾವಾ
ದರಿಸುವರೆ ಹರಿ ನಿಮ್ಮನೆಂದಕ್ರೂರ ಕೈಮುಗಿದ ॥ ೨೭

ಬಳಿಕ ಬಂದಕ್ರೂರದೇವನ
ಲಲನೆ ಸಖಿಯರು ಸಹಿತ ದರ್ಪಣ
ಕಲಶ ಫಲ ಪುಷ್ಪಾಕ್ಷತಂಗಳ ಧರಿಸಿ ಕರಗಳಲಿ ।
ನಳಿನನಾಭನ ಪರಸಿ ಸೇಸೆಯ
ತಳೆದು ಚರಣದೊಳೆರಗಿ ನಿಲೆ ಕಂ
ಡಳುಕಿ ಮುರಹರನಾಕೆಗಭಿವಂದಿಸಿದನುಚಿತದಲಿ ॥ ೨೮

ಆವನಿತೆ ಕೈಮುಗಿದು ಜಯ ಜಯ
ದೇವಕೀಸುತ ಎನುತೆ ಕೀರ್ತಿಸಿ
ದೇವಕಿಯ ಬಿಗಿಯಪ್ಪಿ ವರವಸುದೇವನಡಿಗೆರಗಿ ।
ದೇವರಿಪುವಿನ ಬಾಧೆಗಳುಕದೆ
ಜೀವಿಸಿದರಾತ್ಮಜರ ಕಂಡಿರಿ
ನೀವು ಸುಕೃತಿಗಳೆಂದು ಕೊಂಡಾಡಿದಳು ವಿನಯದಲಿ ॥ ೨೯

---

ಹಿರಿಯವರು, ಬ.

ಬಳಿಕ ಹರಿಗಕ್ರೂರಕೈಗೊ
ಟ್ಟೊಲವಿನಲಿ ತೋರಿಸುತ ಮಾವಿನ
ತಳಿರುಗಳ ತೋರಣದ ಮಲ್ಲಿಗೆಮುಗುಳ ಪೂವಲಿಯ ।
ಥಳಥಳಿಪ ಭಿತ್ತಿಗಳ ಮುಕ್ತಾ
ಫಲದ ಮೇಲ್ಕಟ್ಟುಗಳ ದೀಪಾ
ವಳಿಯಶೋಭೆಯಲೆಸೆವ ಚೌಕಿಗೆಗಾಗಿ ನಡೆತಂದ ॥ ೩೦

ಆಸದನಮಧ್ಯದಲೆಸೆವ ಸಿಂ
ಹಾಸನವನಳವಡಿಸಿದರು ಮೆ
ಲ್ಲಾಸಿನಲಿ [1] ಹಚ್ಚಡಿಸಿ ಮೆಲಗಿನ ಪಟ್ಟಗದ್ದುಗೆಯ [1] ।
ಓಸರಿಸದಂತಿಕ್ಕಿ ಪಡಿಗವ
ನಾಸಮೀಪದೊಳಿಟ್ಟು ಧೂಪದ
ವಾಸನೆಯ ಕೈಕೊಳಿಸುತಿರ್ದಳು ದಾನಪತಿಯರಸಿ ॥ ೩೧

ಕುಸುಮವಾಸಿತಜಲವ ಸೋದಿಸಿ
ಮಿಸುಪ ಹೊಂಬಟ್ಟಲಲಿ [2] ತುಂಬಿಡ
ಲೆಸೆವ [2] ಸೀಗುರಿಚಾಮರಂಗಳ ತಾಳವೃಂತಕದ ।
ಪಸರಿಸುವ ಘನದೀಪ್ತಿ [3] ಗಳನದು
ಮಿಸುಗಿತಮಿತದ್ಯೋತ [3] ಮಧ್ಯದೊ
ಳೆಸೆವ [4] ವಿಮಲ [4] ಜ್ಞಾನಶಕ್ತಿಯ ಮೂರ್ತಿಯಂದದಲಿ ॥ ೩೨

ಬಳಿಕ ಫಲ ತಾಂಬೂಲ ಪುಷ್ಪಾ
ವಳಿ ಸುಗಂಧಾಕ್ಷತ [5] ಸುಮಾನಂ [5]
ಗಳ ನಿರಂಜನ ಪಂಚರತ್ನಾರತಿಯನಣಿಮಾಡಿ ।

---

1 ಲಕ್ಷ್ಮೀಪತಿಯ ಕುಳ್ಳಿರಿಸಿ ಭಕ್ತಿಯಲಿ, ಕಾ. 2 ತುಂಬಿದಳೆಸೆವ, ಓ.
3 ಗಳ ನಿರ್ಮಿಸುತನಂತಜ್ಯೋತಿ, ಓ. ಗಳ ನಿರ್ಮಿಸಿದನಂತಜ್ಯೋತಿ, ಕಾ.
4 ಧವಲ, ಕಾ. 5 ಸುಸನ್ಮಾನ, ಓ.

[1] ಫಲತೆರದಿನಮೃತಾನ್ನ [1] ಪಾನವ
ನೊಳಗಡೆಯಲಳವಡಿಸಿ ತನ್ನಯ
ಕೆಳದಿಯರು ಸಹಿತಿರ್ದ್ದಳಾತನ ಬರವನೀಕ್ಷಿಸುತೆ ॥ ೩೩

ಆಸಮಯದಲಿ ದಾನಪತಿಯಾ
ವಾಸ [2] ಚೆಲುವಾಯ್ತೆನುತೆ [2] ಕಮಲಾ
ಧೀಶನೊಳವೊಕ್ಕನು ಸಮಸ್ತಚಮೂಪಜನಸಹಿತ ।
ಈಸುದಿನಕಿಂದೆನ್ನ ಮನದಾ
ಯಾಸ ಬಯಲಾಯ್ತೆನುತುವಾಸಿಂ
ಹಾಸನವನಡರಿದನು ಹಲಧರಸಹಿತ ಮುರವೈರಿ ॥ ೩೪

ಓಜೆ ಮಿಗೆ ವಸುದೇವನಂದರ
ಯಾಜಮಾನ್ಯದೊಳಿರಿಸಿ ಗೋಪಸ
ಮಾಜವನು ಸತ್ಕರಿಸಿ ಬಳಿಕ ಮುರಾರಿಯಂಘ್ರಿಗಳ ।
ಪೂಜಿಸುತೆ ತವಕದಲಿ ಪುಳಕಿಸು
ತಾಜಗತ್ಪಾವನನ ಮೂರ್ತಿಯ
ತೇಜವನು ತಾಂ ಕಂಡು [3] ಕೀರ್ತಿಸು [3] ತಿರ್ದನಕ್ರೂರ ॥ ೩೫

ಒಂದು ರೋಮದ ಕುಳಿಯ [4] ಮೂಲೆಯೊ [4]
ಳೊಂದಿಹುವು ಬ್ರಹ್ಮಾಂಡಕೋಟಿಗ
ಳೆಂದು ಶ್ರುತಿಯುಗ್ಗಡಿಸುತಿದೆ ನಿಜನಾಭಿಕಮಲದಲಿ ।
ಬಂದಬಳಿಕೀರೇಳುಲೋಕಕೆ
ತಂದೆಯಾದನು ಬ್ರಹ್ಮ ನೀನೊಲಿ
ದಿಂದು [5] ಮನೆಗೈ [5] ತಂದೆ ಮುರಹರ ನಿನಗೆ ನಮಎಂದ ॥ ೩೬

---

1 ಫಲವುತೆರದಮೃತಾನ್ನ, ಕಾ. 2 ಜಯವಾಯ್ತೆನುತೆ, ಓ.
3 ಪುಳಕಿಸು, ಓ. 4 ಮಧ್ಯದೊ, ಕಾ. 5 ಮಗನೈ, ಓ.

ಧರೆಯನಳೆವಂದೊಮ್ಮೆ ನಿನ್ನಯ
ಚರಣವನು ಚತುರಾಸ್ಯ ತೊಳೆದೊಡೆ
ಸುರತರಂಗಿಣಿ ಜನಿಸಿ ನೆಲಸಳೆ ಹರನ ಜಟೆಗಳಲಿ ।
ಮರಳಿ [1]ಸಿದೊಡಾ[1] ಜ್ಞೆಯಲಿ ಲೋಕವ
ಹೊರೆಯಲೆಂದಿಳೆಗಿಳಿದಳಂ [2] ದಿನ
ಹಿರಿಯ ನೀನಾತಿಥ್ಯಪೂಜೆಗೆ ಯೋಗ್ಯನಹುದೆಂದ [2] ॥ ೩೭

ಪಾವನದ ನಿಜ ನೀನು ನಿನ್ನಡಿ
ಗಾವಜಲದಭಿಷೇಕ ನೀನಿಹ
ತಾವನಜಭವರರಿಯರೆಂತರ್ಚಿಸುವರುಳಿದವರು ।
ನಾವು ಹುಲುಮಾನಿಸರು ಡೊಂಬಿನ
ಗಾವಿಲರು ನಿನಗತಿಥಿಪೂಜೆಯ
ನೀವ [3] ವರೆ ಜಯ [3] ಜಯ ಮುರಾಂತಕ ಕರುಣಿಸುವ್ರದೆಂದ ॥

ಎಂದು ನಿಗಮಾರ್ಥಂಗಳಲ್ಲರ
ವಿಂದನಾಭನ ಪೊಗಳಿ ಹರುಷದ
ಸಂದಣಿಯಲುಬ್ಬೇಳುತಚ್ಯುತನಂಘ್ರಿಗಳ ತೊಳೆದು ।
ತಂದೆಯಹ ವಸುದೇವ ಹಲಧರ
ನಂದ ಮೊದಲಾದವರ ಪರಿವಿಡಿ
ಯಿಂದೆ ಸತ್ಕರಿಸಿದನು ವಿನಯಾತಿಥ್ಯನಿಯಮದಲಿ ॥ ೩೯

ಬಳಿಕ ದೇವೋತ್ತಮನ ಚರಣದ
ಬಳಿಗೆ ಬಂದು ಸುಗಂಧಶೀತಳ
ಮಲಯಜವನಂಗದಲಿ ಲೇಪಿಸಿ ಬಿರಿವ ಮಲ್ಲಿಗೆಯ ।
ಅಲರ್ವ ಜಾಜಿಯ ಮಾಲೆಗಳ ಕೈ
ಕೊಳಿಸಿದನು ದೇವಾಂಗ ಚಿತ್ರಾ
ವಳಿಸುವರ್ಣಾವಳಿಯ ವಸನದ ದಿಂಡನರ್ಪಿಸಿದ ॥ ೪೦

---

1 ಶಿವನಾ, ಕಾ. 2 ತಾ ಚರಣಕಮಲವು ವಸತಿಗ್ರದಿತು ಭಾಗ್ಯನಾ
ನೆಂದ, ಕಾ. 3 ಯೋಗ್ಯರೆ, ಕಾ.

[1] ಭುವನ [1] ಭೂಷಣನಪ್ಪ ಕಮಲಾ
ಧವನ ಪೂಜೆಗೆ ರತ್ನ [2] ಮಂಡಲ [2]
[3] ಕವಿದ ನೂಪುರ ಕಟಕ [3] ಮೌಕ್ತಿಕ ಕಂಠಮಾಲೆಗಳ |
ರವಿಸಹಸ್ರಪ್ರಭೆಯ ಪದಕವ
ವಿವಿಧಮುದ್ರಾಂಗುಲಿಯ [4] ನಿಗಳವ
ನವೆಯದಂದುಗೆಗಳ [4] ನಿವೇದಿಸುತಿರ್ದನಕ್ರೂರ || ೪೧

ಬಂಧುಗಳಿಗೊಲಿದಿತ್ತನರ್ಘದ
ಸಂದೆರಂಗಿನ ಜವಳಿಪಳಿಗಳ
ಸೆಂದುರ ಹಳದಿ ಬೂದಿ ಪಚ್ಚೆಯ ಝಗೆಗಳಂಬರವ [5] |
ಬಂದ ಗೋವಳರಿಗೆ [6] ಮರಾಳದ [6]
ಚೆಂದಿಗಳ [7] ತವೆ ರಾಜಿಪೊಲ್ಲಿಯ [7]
ನೊಂದುನಿಮಿಷದೊಳಿತ್ತು ಬಳಿಕಕ್ರೂರನಿಂತೆಂದ || ೪೨

ವನುಜಹರ ಚಿತ್ತ್ಯಸು ಚತುರಾ
ನನ ಪಿನಾಕಿ ಪುರಂದರಾದ್ಯರ
ಮನದ ಬಯಕೆಯ ಸಲಿಸುತಿಪ್ಪ ಸಮಗ್ರವೈಭವದ |
ನಿನಗೆ ನಾನೀಬಾಹ್ಯವಹ ಧನ
ಕನಕವಸ್ತ್ರಾಭರಣವನುಲೇ
ಪನವ [8] ನೀಯೆ [8] ಸಮರ್ಥನೇ ಭ್ರಮೆ ಕವಿದುದೆನಗೆಂದ || ೪೩

ಎನಲದಕೆ ಹರಿ ನಗುತೆ ಬಕುತನ
ಮನದ ನಿರಹಂಕಾರ [9] ಭಕ್ತಿಯ [9]
ನೆನೆನೆನೆದು ಪುಳಕಿಸುತೆ ಕೈವಿಡಿದೆತ್ತಿ ವೈದಡವಿ |

---

1 ಭವನ, ಓ. 2 ಕುಂಡಲ, ಕಾ. 3 ವನಪರತುನತಾಟಂಕ, ಓ. ನವರತುನತಾಟಂಕ, ಕಾ. 4 ನಿಗಳದ ರವೆಯದಂದುಗೆಗಳ, ಓ. ಕಾ.
5 ಸಂಧ್ಯಾರಾಗದ ಜವಳಿಗಳ ಪಳಿಸಿಂಧುರದ ಝಗೆಗಳ ಹಳದಿಯಂಬರ ಚೂದಿ ಪಚ್ಚೆಗಳ, ಓ. 6 ಮದಾಳಿಯ, ಓ, 7 ತವರಾಜದೊಳ್ಳಿಯ, ಓ. ಕಾ.
8 ಸೀವ, ಕಾ. 9 ಪ್ರೀತಿಯ, ಓ.

ಎನಗೆ ನೀಂ ಪರನಲ್ಲ ವಸುದೇ
ವನ ಸಮಾನದ ಹಿರಿಯ ನೀನೆಂ
ದನುನಯದಲುಪಚರಿಸಿದನು ವೃಷ್ಣಿವಶಿರೋಮಣಿಯು ॥ ೪೪

ಎಲೆ ಯದೂತ್ತಮ ಕೇಳು ನಿನ್ನಯ
ನಿಳಯದುತ್ಸವ ನಿನ್ನ ಮನದ
ಗ್ಗಳಿಕೆ ನಿನ್ನರಸಿಯರ ಪತ್ಯನುಕೂಲವರ್ತನವು ।
ಸುಲಲಿತಾಕ್ಷತಗಂಧಪುಷ್ಪಾ
ವಳಿಗಳಾಂತೀಯತಿಥಿಪೂಜೆಗೆ
ಕಳಶವೆನಿಸಿದುವಧಿಕತುಷ್ಟಿಯ ತಾಳ್ದನಾನೆಂದ ॥ ೪೫

ಮುರಹರನ ಕರುಣಾನುಭಾವದ
ಸಿರಿಗೆ ಹಾರೈಸುತ್ತೆ [1] ಕಮಲೋ
ದರ [1] ಧರಾಧರ ಲೋಕಪಾಲಕ ಜಯ ಜಯೆಂದೆನುತೆ ।
ಕರಯುಗವ ಮುಗಿದುತ್ತಮಾಂಗದೊ
ಳರಿಸಿ ನಗುತಾರೋಗಣೆಯನಾ
ದರಿಸಿ ಚಿತ್ತಯಿಸುವೊಡೆ ಬಿಜಯಂಗೆಯ್ಯಬೇಕೆಂದ ॥ ೪೬

ಎದ್ದೆವೆಮ್ಮಿಂದೇನು ತಡವಾಂ
ಬಿದ್ದಿನರಮನೆಯೊಡೆಯರೈಸಲೆ
ಯಿದ್ದ ಸಾಧನ ಸಾಕು ಬೇಗೆಡೆಮಾಡಹೇಳನುತೆ ॥
ಗದ್ದುಗೆಯ ಬಿಟ್ಟರಿದಿಶಾಪಟ
ನೆದ್ದು ನಿಂದಿರಲಾಕ್ಷಣ [2] ದೊಳೂಲ
ವೆದ್ದುವೆಡೆ ಪಲತೆರದ ದೀಪ್ತಿಯ ಸಾಲ ಪೀಠಗಳ [2] ॥ ೪೭

ತಂದು ಹೊಂಬರಿವಾಣಗಳನಾ
ನಂದವಸುದೇವರಿಗೆ ರಾಮಮು
ಕುಂದರಿಗೆ ಸಹಿತಿಟ್ಟು ಗೋಪರಿಗುಳಿದ [3] ಭಾಜನವ [3] ।

---

1 ಕಮಲಾಧರ, ಬ. 2 ದೊಳಾಗಿದ್ದುವೆಡೆ ಪಲತೆರದ ಪೀಠದ ಸಾಲ ದೀಪ್ತಿಗಳ, ಕಾ. 3 ಭೋಜನವ, ಕಾ.

ಮುಂದಿರಿಸಿ ಕೀರ್ತಿಸುವ ವೈಷ್ಣವ
ಬೃಂದವನು ಪರುಠವಿಸಿ ಬಳಿಕರ
ವಿಂದನಾಭಾದ್ಯರನು ಕುಳ್ಳಿರಿಸಿದನು ವಿನಯದಲಿ ॥ ೪೮

ಪರಿವಿಡಿಯ ಪರಮಾನ್ನ ಪಾನದ
ಪರಿಕರದ ಪರಿಪರಿಯ ಶಾಕದ
ಪರಿಪರಿಯಬಹುಭಕ್ಷ್ಯಸಮಿತಿಯ ಕಳವೆಯೋಗರದ ।
ಪರಿಪರಿಯಸೂಪಗಳ ಸಕ್ಕರೆ
ಯೆರೆವ ನೆಯ್ಯಾಜ್ಯೋಸರ ವಿಸರವ
ಪರಿಪರಿಯ ಮೇಲುಪ್ಪುಗಾಯ್ಗಳ ತರಿಸಿ ಗಡಣಿಸಿದ ॥ ೪೯

ಬಳಿಕ ಬಂದಕ್ರೂರದೇವನು
ಲಲನೆಸಹಿತವೆ ನಿಂದು ತನ್ನಯ
ಕೆಳದಿಯರ ಗಡಣದಲಿ ಬಡಿಸಿದನಖಿಳವಸ್ತುಗಳ ।
ನಳಿನನಾಭ ಮುಕುಂದ ಯಾದವ
ಕುಲಶಿರೋಮಣಿಯೆಂದು ಪುಷ್ಪಾಂ
ಜಲಿಸಹಿತ ಮೆಯ್ಯಿಕ್ಕಿ ನುಡಿದನು ಮಧುರವಚನದಲಿ ॥ ೫೦

ಯತಿ ಗುರು ದ್ವಿಜ ದೇವ ಪೂಜಾ
ಕ್ರತು ಸಮಾರಾಧನೆಯೊಳೀಸು
ವ್ರತ ಮುಕುಂದಾರ್ಪಣವೆನಲು [1] ಸಾದ್ಗುಣ್ಯ [1] ವಹುದೈದೆ ।
ಶ್ರುತಿಗಗೋಚರನಪ್ಪ ಕಮಲಾ
ಪತಿಯೆ ಬಂದಾರೋಗಿಸುವ ಸೌ
ಖ್ಯತೆಯನೆಂತು ನಿವೇದಿಸುವೆನೆನುತಿರ್ದನಕ್ರೂರ ॥ ೫೧

ಲೋಕದುದಯಸ್ಥಿತಿಲಯಕೆ ನೀ
ನಾಕೆವಾಳನು ಸಕಲಜೀವಾ

1 ಸತ್ಪುಣ್ಯ, ಕಾ.

ನೀಕ[1] ದಂತರ್ಯಾಮಿ ಸಾಕ್ಷಾದ್ವಿಷ್ಣುಮಯಮೂರ್ತಿ |
ಏಕಮೇವಾದ್ವಿತಯನೆಂಬುದ
ನೂಕಿ ನರಲೀಲೆಯಲಿ[1] ನಮ್ಮನು
ಸಾಕಬಂದ್ಯೆ ತಂದೆಯಾರೋಗಣೆಯ ಮಾಡೆಂದ ॥ ೫೨

ಬಂಧುಗಳನುಣಹೇಳಿ ಮನದನು
ಬಂದ ಪರಿಯಲಿ ಪೊಗಳಿ ಕೃಷ್ಣನ
ಮುಂದೆ ಕುಳ್ಳಿರ್ದಗಲನಾರೈದುಟಕಪಾತ್ರೆಗಳ |
ತಂದು ಕೊಡುತೆರೆದಾಗ ವಸ್ತುವ
ನೊಂದನುಳಿಯದೆ ಬಡಿಸಿ ಬಳಲಿದಿ
ರೆಂದು ವಿನಯಾದರರಸೋಕ್ತಿಯ ನುಡಿದನಕ್ರೂರ ॥ ೫೩

ಆನುಡಿಯ ಸನ್ಮಾನರಚನೆಗೆ
ದಾನವಾಂತಕ ನಗುತೆ ಬಹುಳವ
ನೋನುರಾಗಚ್ಛವಿಯಲಾರೋಗಣೆಯ ಚಿತ್ತೈಸಿ |
ದಾನಪತಿ ಕೇಳ್ ಕ್ಷುಧೆಯೊಡನೆ ಸಂ
ಧಾನವಾಯ್ತೆಮಗಿಂದು ತುಷ್ಟಿಯ
ನೇನ ಹೇಳುವೆ ನಿನಗೆ ಹಂಗಿಗನಾದೆನಾನೆಂದ ॥ ೫೪

ಅನ್ನದಧಿಪತಿ ನೀನಧಿಕಸಂ
ಪನ್ನ ನೀನಮೃತಾತ್ಮ ನೀಂ ಪರಿ
ಪೂರ್ಣನಹ ಪರವಸ್ತು ನೀಂ ವಿವಿಧಾನ್ನಮಯ ನೀನು |
ಮನ್ನಿಸುವೊಡಾರೊಡೆಯರಹರದ
ಕಿನ್ನು ಬಯಲುಪಚಾರವೇತಕೆ
ನಿನ್ನ ಭಕ್ತರ ಕೂಡೆಯೆಂದನು ದಾನಪತಿ ನಗುತೆ ॥ ೫೫

---

1 ನಿನ್ನಲ್ಲಡಗೆ ಸಾಕ್ಷಾದ್ವಿಷ್ಣುನರನಾಗಿ ಲೋಕಪಾಲರರಕ್ಷಣೆಗೆ ಭೂಲೋಕಭಾರವತಿದ್ಧಿ, ಕಾ.

ಬೇಡ ಮಾಣುರೆ ಪೊಗಳೆ ನೀಂ ಮರು
ಳಾಡದಿರು ಸಾಕೆನುತೆ ಶರಣನ
ಕೂಡೆ ಸರಸೋಕ್ತಿಗಳನಾಡುತೆ ನಗುತೆ ಕೈದೊಳದು ।
ಕೂಡೆ ತಾಪಸರಂತೆ ಭೋಗದ
ವೇಢೆಗೊಳಗಾಗಿಪ್ಪ ಹರಿ ನಲಿ
ದಾಡುತುವೆ ಬಂದಡರಿದನು ಮಣಿಖಚಿತವಿಷ್ಟರವ ॥ ೫೬

* ಅಂದದಿಂ ಭೋಜನವ ಮಾಡಿಯೆ
ಬಂದ ಗೋಪರಿಗೆಲ್ಲ ಜಗದಾ
ನಂದಿ ತೃಪ್ತಿಯ ಪಡೆದು ತಾಂ ಮುದದಿಂದೆ ಹಸ್ತದೊಳು ।
ಗಂಧಲೇಪನವನ್ನು ಮಾಡಿಯೆ
ಚಂದದಿಂ ಕೈದೊಳದು ಕೊಂಡನು
ಗಂಧಪುಷ್ಪಾದಿಗಳ ತಂಬುಲದೊಡನೆ ರಾಗದಲಿ ॥ ೫೭

* ಕರಿಸಿದನು ಹರಿಯುಗ್ರಸೇನನ
ತೆರಳುವೆನು ಗೋಕುಲಕೆ ಧರ್ಮದೆ
ಧರೆಯ ಪಾಲಿಸುತಧಿಕಮೋದದೊಳಿರುವುದವನಿಯೊಳು ।
ಪರಮಭಕ್ತನು ಮಂತ್ರಿ ನಿನಗಾ
ಗಿರುವನಕ್ರೂರನನುದಾರನ
ಮರೆಯದೆನ್ನಂತೆಪೊಲೆ ಕಾಣ್ಬುದು ಮರೆದು ಸದ್ಗುಣವ ॥ ೫೮

* ಪತಿತಕಂಸನ ಸತಿಯರಿಗೆ ಮನ
ದತುಲದಳಲನು ಕಳದು ಮನ್ನಿಪು
ದತಿಹಿತವೆನೆ ಹಸಾದವೆನುತವನೆರಗೆ ಹರಿಯದಕೆ ।
ಮಾತೃಪಿತನಹ ನೀನುಮೆನಗೀ
ಗೇತಕ್ಕೆ ವಂದಿಪುದು ಪಾಪವು
ಪ್ರೀತಿಯಾಗದು ಮನೆಗೆ ಪೋಪುದು ತೆರಳ್ವ ಗೋಕುಲಕೆ ॥ ೫೯

* ಎಂದು ನಂದನು ಹಲಧರನು ಸಹಿ
ತೊಂದೆ ರಥದಲಿ ಕುಳಿತು ಗೋವಳ
ರಿಂದೆ ಬರಲೆಂದೆನುತೆ ಲಕ್ಷ್ಮೀನಾಥ ಪೊರಮಟ್ಟ ।
ಕಂದಿದಾನನದಿಂದೆ ಸತಿಯೊಡ
ವೆಂದೆರಗಿದಕ್ರೂರನಿಗೆ ಮನ
ಗುಂದದಭಯವನಿತ್ತು ಬೀಳ್ಕೊಂಡನು ಸರಾಗದಲಿ ॥ ೬೦

ಎಂಟನೆಯ ಸಂಧಿ ಮುಗಿದುದು.

---

* ಈ ನಾಲ್ಕು ಪದ್ಯಗಳು ಬಿ. ಪುಸ್ತಕದಲ್ಲಿಲ್ಲ ೫೬ ಪದ್ಯಗಳಿಗೆ ಎಂಟನೆಯ ಸಂಧಿಯು ಮುಗಿದಿದೆ.